
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


ಡಿಸೆಂಬರ್ 29, 2010 ರೂ. 12/-

ದಿಗಂತ್-ಅಂದ್ರಿತಾ ಏನೋ ಒಂಥರಾ!




ಜಿಪಂ-ತಾಪಂಗೆ 200 ಕೋಟಿ

ನನ್ನದೇ ದುಡ್ಡು



ವಿಶ್ವೇಶ್ವರ ಭಟ್

ನಾಲ್ಕು ಕೋಟಿಯ ಬಂಗಲೆ



ಸಿಬಿಐ ಉರುಳು

ಕುಂದಾಪುರ: ಕೋಮುವಾದಿಗಳ ಕೋಲಾಹಲ

ಮೈಸೂರು ರೇಸ್‌ಕೋರ್ಸ್: ವಂಚಕರಿಗೆ ರಾಮದಾಸ್ ಸಾಥ್


ಹಾವೇರಿ: ಪೊಲೀಸ್ ಇಲಾಖೆಯ ದಂಡಪಿಂಡಗಳು

ಜಿಪಂ-ತಾಪಂ: ಚಿಕ್ಕಮಗಳೂರು, ಯಾದಗಿರಿ

ವಿಕಿಲೀಕ್ಸ್ ಸೋರುತಿಹುದು (ಅರ)ಮನೆಯ ಮಾಳಿಗೆ!

ಇಂದು ಅಮೆರಿಕ ಹಾಗೂ ಪಾಶ್ಚಿಮಾತ್ಯ ದೇಶಗಳು ತಮ್ಮ ತಮ್ಮ "ದೇಶದ ಭದ್ರತೆಯ ಬಗ್ಗೆ" ಅತ್ಯಂತ ಹೆಚ್ಚಾಗಿ ತಲೆ ಕೆಡಿಸಿಕೊಂಡುಬಿಟ್ಟಿವೆ. ಅದಕ್ಕೆ ಕಾರಣ ಒಸಾಮ್ ಬಿನ್ ಲಾಡೆನ್ ಮತ್ತೊಂದು ವಿಮಾನ ದಾಳಿಯನ್ನು ಘೋಷಿಸಿದ್ದೇನೂ ಅಲ್ಲ. ಬದಲಿಗೆ ಜಗತ್ತಿನ ಹಲವು ಮೂಲೆಗಳಲ್ಲಿರುವ ನಾಗರಿಕ ಪ್ರಜ್ಞೆಯುಳ್ಳ ಜನರು ಹುಟ್ಟುಹಾಕಿರುವ ವಿಕಿಲೀಕ್ಸ್ ಎಂಬ ವೆಬ್ ಸಂಸ್ಥೆ. ಹೆಸರೇ ಸೂಚಿಸುವಂತೆ ಇದು ಸರ್ಕಾರಗಳು ಜನರಿಂದ ರಹಸ್ಯವಾಗಿಟ್ಟ ದಾಖಲೆಗಳನ್ನು ಜನರಿಗೆ 'ಲೀಕ್' ಮಾಡುವ -ಸೋರಿಬಿಡುವ-ಸಂಸ್ಥೆ. ಈಗ ಈ ಸಂಸ್ಥೆ ಅಮೆರಿಕ, ಬ್ರಿಟನ್, ಭಾರತ, ಪಾಕಿಸ್ತಾನ ಹಾಗು ಇನ್ನೂ ಹತ್ತು ಹಲವು ದೇಶಗಳ ಸರ್ಕಾರಗಳು ತಮ್ಮನ್ನು ಆಯ್ಕೆ ಮಾಡಿದ ಜನರಿಗೆ ಗೊತ್ತಾಗದಂತೆ ನಡೆಸಿದ ಹಲವು ರಹಸ್ಯ ಚಟುವಟಿಕೆಗಳನ್ನು ಜಗತ್ತಿನ ಜನರೆದುರು ಬಯಲು ಮಾಡುತ್ತಿದೆ. ಯಾವ ದೇಶದ ಪ್ರಭುತ್ವ ಜನರಿಂದ ಅತಿ ಹೆಚ್ಚು ಮಾಹಿತಿಗಳನ್ನು ಬಚ್ಚಿಟ್ಟಿವೆಯೋ ಆ ಸರ್ಕಾರಗಳು ವಿಕಿಲೀಕ್ಸ್‌ನಿಂದಾಗಿ ಅತಿ ಹೆಚ್ಚು ಗಾಬರಿಗೊಳ್ಳುತ್ತಿವೆ. ವಾಸ್ತವವೆಂದರೆ ಈ ನಿಟ್ಟನಲ್ಲಿ ಅತಿಹೆಚ್ಚು ಗಾಬರಿಯಾಗಿರುವುದು ಮಿಲಿಟರಿ ಆಡಳಿತ ಉಳ್ಳ ದೇಶಗಳಲ್ಲ, ಬದಲಿಗೆ ತಮ್ಮದು ಅತಿ ದೊಡ್ಡ ಪ್ರಜಾಪ್ರಭುತ್ವ ಹಾಗೂ ಮುಕ್ತ ಸಮಾಜ ಎಂದು ಹೇಳಿಕೊಳ್ಳುವ ಅಮೆರಿಕ ಹಾಗೂ ಇತರ ಪಾಶ್ಚಿಮಾತ್ಯ ಸರ್ಕಾರಗಳು!

ಅಮೆರಿಕದ ಅಧ್ಯಕ್ಷ ಒಬಾಮನಿಂದ ಹಿಡಿದು ಅದರ ತುತ್ತೂರಿ ಮಾಧ್ಯಮಗಳವರೆಗೆ ಎಲ್ಲರೂ ಈಗ ವಿಕಿಲೀಕ್ಸ್ ಅನ್ನು ದೊಡ್ಡ ಭಯೋತ್ಪಾದಕ ಸಂಸ್ಥೆ ಎಂಬಂತೆ ಚಿತ್ರಿಸುತ್ತಿವೆ. ಅಮೆರಿಕದ ಹಲವಾರು ಸೆನೆಟರುಗಳು ವಿಕಿಲೀಕ್ಸ್‌ನ ಮುಖ್ಯಸ್ಥನಾದ ಜೂಲಿಯನ್ ಅಸ್ಸಾಂಗೆಯನ್ನು ಕೊಂದು ಹಾಕಬೇಕೆಂದು ಬಹಿರಂಗವಾಗಿಯೇ ಕರೆನೀಡುತ್ತಿದ್ದಾರೆ. ಇದರಲ್ಲಿ ಅಮೆರಿಕದ ಹಿಂದಿನ ಚುನಾವಣೆಯಲ್ಲಿ ಉಪಾಧ್ಯಕ್ಷ ಪದವಿಗೆ ಸ್ಪರ್ಧಿಸಿದ್ದ ಸಾರಾ ಪಾಲಿನ್ ಕೂಡಾ ಒಬ್ಬಳು. ಈಗಾಗಲೇ ಆತನ ಮೇಲೆ ರೇಪ್ ಕೇಸುಗಳನ್ನು ಹೊರಿಸಿ ಅವನ ಬಾಯಿ ಮುಚ್ಚಿಸುವ ಪ್ರಯತ್ನವೂ ನಡೆಯುತ್ತಿದೆ. ಕೆಲವು ಅಪವಾದಗಳನ್ನು ಬಿಟ್ಟರೆ ಅಮೆರಿಕದ ಮಾಧ್ಯಮಗಳು ಸಹ ಈ ಬಗೆಯಲ್ಲಿ ಅಮೆರಿಕದ ಸರ್ಕಾರಿ ದಾಖಲೆಗಳು ಬಹಿರಂಗಗೊಳ್ಳುತ್ತಿರುವುದು ದೇಶದ ಭದ್ರತೆಯ ದೃಷ್ಟಿಯಿಂದ ಮಹಾನ್ ಅಪಾಯಕಾರಿಯೆಂದು ಪ್ರಚಾರ ಮಾಡುತ್ತಿವೆ. ಒಂದು ದೇಶದ ರಕ್ಷಣಾ ವ್ಯವಹಾರಗಳು ಹೀಗೆ ಬಹಿರಂಗಪಡಿಸುವುದು ತಪ್ಪು ಎಂದು ಹೇಳುತ್ತಲೇ ಈ ಮಾಹಿತಿಗಳು ಹೇಗೆ ಸೋರಿಹೋಯಿತು ಎಂಬ ಬಗ್ಗೆ ತೀವ್ರ ತನಿಖೆ ನಡೆಸಿ ಈ ರೀತಿ ಮುಂದೆ ಸರ್ಕಾರಿ ದಾಖಲೆಗಳು ಬಯಲಾಗದಂತೆ ಎಚ್ಚರಿಕೆ ವಹಿಸುವುದಾಗಿ ಘೋಷಿಸಿ ತನ್ನ ಆಂತರಿಕ ಆಡಳಿತವನ್ನು ಇನ್ನಷ್ಟು ರಹಸ್ಯಮಯಗೊಳಿಸುತ್ತಿದೆ.



ಅದೇ ಸಮಯದಲ್ಲಿ ಜಗತ್ತಿನ ಮತ್ತೊಂದು ಬೃಹತ್ ಪ್ರಜಾ ಪ್ರಭುತ್ವ ದೇಶವಾದ ಭಾರತದಲ್ಲಿಯೂ "ರಾಡಿಯಾ ಟೇಪ್ಸ್"ಗಳು ಮಾಧ್ಯಮಗಳಿಗೆ ಲೀಕ್ ಆಗಿ ದೇಶದ ಸಂಪನ್ಮೂಲಗಳನ್ನು ಲೂಟಿ ಹೊಡೆಯುವಲ್ಲಿ ಹೇಗೆ ಕಾರ್ಪೊರೇಟ್ ಉದ್ಯಮಪತಿಗಳು, ಸಂಸದರು ಮತ್ತು ಮಾಧ್ಯಮಗಳು ಭಾಗಿಯಾಗಿವೆ ಎಂದು ಜನರೆದುರು ಬಹಿರಂಗಪಡಿಸುತ್ತಿವೆ. ಆದರೆ ಜನರಿಂದ ಆಯ್ಕೆಯಾದ ಸರ್ಕಾರ ಬಹಿರಂಗಗೊಂಡ ದಾಖಲೆಗಳು ಹೇಳುತ್ತಿರುವ ಸತ್ಯಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದರ ಬದಲಿಗೆ ಸತ್ಯವನ್ನು ಬಯಲುಪಡಿಸುತ್ತಿರುವವರ ಮೇಲೆಯೇ ಕ್ರಮತೆಗೆದುಕೊಳ್ಳುವುದಾಗಿ ಬೆದರಿಸುತ್ತಿವೆ. ಕವಿಯೊಬ್ಬ ಹೇಳಿದಂತೆ "ಕಣ್ಣ ಮುಂದೆ ಕಸದರಾಶಿಯಿದೆಯೆಂದರೆ ಕಣ್ಣನ್ನೇ ಕೀಳುವ ಪ್ರಯತ್ನ"ವನ್ನು ಜಗತ್ತಿನ ಬೃಹತ್ ಮತ್ತು ಅತ್ಯಂತ ಹಳೆಯ ಪ್ರಜಾಪ್ರಭುತ್ವಗಳೆರಡೂ ಮಾಡುತ್ತಿವೆ.

ಹಾಗೆ ನೋಡಿದರೆ ವಿಕಿಲೀಕ್ಸ್ ಸಂಸ್ಥೆಯು 2006ರ ಅಕ್ಟೋಬರ್‌ನಲ್ಲಿ ಸ್ಥಾಪನೆಯಾಗಿ ತನ್ನ ಕಾರ್ಯಾಚರಣೆಯನ್ನು ಶುರುಮಾಡಿದಾಗ ಅದಕ್ಕೆ ವೆಬ್ ಸರ್ವರ್ ಸೇವೆಯನ್ನು ಕೊಟ್ಟು ಸಹಕರಿಸಿದ್ದು ಸಹ ಅಮೆರಿಕವೇ. ಅಷ್ಟು ಮಾತ್ರವಲ್ಲ, ಬ್ರಿಟನ್ ಮೂಲದ "ಎಕಾನಮಿಸ್ಟ್" ಪತ್ರಿಕೆ ಈ ವಿಕಿಲೀಕ್ಸ್ ಸಂಸ್ಥೆಗೆ ಪ್ರಶಸ್ತಿಯನ್ನು ನೀಡಿತ್ತು. ಆಗಲೂ ವಿಕಿಲೀಕ್ಸ್ ಮಾಡುತ್ತಿದ್ದದ್ದು ಸರ್ಕಾರಿ ರಹಸ್ಯಗಳ ಬಯಲು ಕಾರ್ಯಾಚರಣೆಯೇ. ಆದರೆ ಆಗ ಅದು ಬಯಲು ಮಾಡುತ್ತಿದ್ದದ್ದು ಅಮೆರಿಕ ಸರ್ಕಾರವನ್ನಲ್ಲ ಅಷ್ಟೆ! 2006ರಲ್ಲಿ ವಿಕಿಲೀಕ್ಸ್ ಹುಟ್ಟಿದಾಗ ಅದರ ನಿರ್ದೇಶಕರು, ಅಧ್ಯಕ್ಷರು ಯಾರು ಎಂಬುದು ಗುಟ್ಟಾಗಿಯೇ ಇತ್ತಾದರೂ ಅದು ತನ್ನ ಗುರಿಗಳಲ್ಲಿ "ಪ್ರಧಾನವಾಗಿ ಚೀನಾ, ಈ ಹಿಂದಿನ ಸೋವಿಯತ್ ರಾಷ್ಟ್ರಗಳು, ಪೂರ್ವ ಆಫ್ರಿಕಾದ ರಾಷ್ಟ್ರಗಳ ರಹಸ್ಯ ದಾಖಲೆಗಳನ್ನು ಹೊರತಂದು ಅಲ್ಲಿ ತಮ್ಮ ಸರ್ಕಾರಗಳ ವಿರುದ್ಧ ಹೋರಾಟ ಮಾಡುತ್ತಿರುವವರಿಗೆ ಸಹಾಯ ಮಾಡುವುದು ತಮ ಉದ್ದೇಶವಾಗಿದೆ" ಎಂದು ಬಹಿರಂಗವಾಗಿಯೇ ಘೋಷಿಸಿಕೊಂಡಿದ್ದರು. ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಅಮೆರಿಕ ಹಾಗೂ ಅದರ ಮಿತ್ರ ರಾಷ್ಟ್ರಗಳ ವಿರುದ್ಧವಾಗಿರುವ ದೇಶಗಳಲ್ಲಿ ನಡೆಯುತ್ತಿರುವ ಈ ಭಿನ್ನಮತೀಯ ಚಟುವಟಿಕೆಗಳು ಹೆಚ್ಚಾಗುವುದು ಮತ್ತು ಅವು ಹೆಚ್ಚೆಚ್ಚು ಪ್ರಚಾರಗೊಳ್ಳುವುದು ಅಮೆರಿಕದ ಹಿತಾಸಕ್ತಿಯ ಪರವಾಗಿಯೇ ಇರುವುದರಿಂದ ಅಮೆರಿಕವು ಅದಕ್ಕೆ ಪರೋಕ್ಷ ಪ್ರೋತ್ಸಾಹವನ್ನು ಕೊಡುತ್ತಾ ಹೋಯಿತು.

ಆದರೆ ವಿಕಿಲೀಕ್ಸ್ ಎಂಬ ಸಂಸ್ಥೆಯ ಮೂಲಕ ತಮ್ಮ ಗುರುತು ಪತ್ತೆಯಾಗದಂತೆ ತಮ್ಮ ಸರ್ಕಾರಗಳು ಮಾಡುವ ಅನ್ಯಾಯವನ್ನು ಬಯಲುಗೊಳಿಸಬಹುದೆಂಬ ದಾರಿ ಒಮ್ಮೆ ತಿಳಿದೊಡನೆ ಇರಾಕ್, ಅಫ್ಘಾನಿಸ್ತಾನ ಇನ್ನಿತ್ಯಾದಿ ಕಡೆಗಳಲ್ಲಿ ಅಮೆರಿಕದ ಪಾಪಕೃತ್ಯಗಳಲ್ಲಿ ಭಾಗವಹಿಸಿ ಪಾಪಪ್ರಜ್ಞೆಯಿಂದ ನರಳುತ್ತಿದ್ದ ನೂರಾರು ಅಮೆರಿಕದ ಸೈನಿಕರು, ರಕ್ಷಣಾಧಿಕಾರಿಗಳು, ರಾಜತಾಂತ್ರಿಕರು ಮತ್ತು ನೈತಿಕ ಪ್ರಜ್ಞೆಯನ್ನು ಜೀವಂತವಾಗಿಟ್ಟುಕೊಂಡಿದ್ದ ಹಲವಾರು ಅಮೆರಿಕದ, ಬ್ರಿಟನ್, ಸ್ವೀಡನ್ ಹಾಗೂ ಇನ್ನಿತರ ಪಾಶ್ಚಾತ್ಯ ದೇಶಗಳ ಅಧಿಕಾರಿಗಳು ಹಾಗೂ ನೌಕರರು ಅಮೆರಿಕದ ನೇತೃತ್ವದಲ್ಲಿ ನಡೆಯುತ್ತಿರುವ ಪಾತಕಗಳನ್ನು ಬಹಿರಂಗಪಡಿಸುವ



ಚಾರ್ವಾಕ

ಶಿವಸುಂದರ್

ಅಧಿಕೃತವಾದ ಲಕ್ಷಾಂತರ ಕಾಗದಪತ್ರಗಳನ್ನು ಮತ್ತು ವಿಡಿಯೋಗಳನ್ನು ವಿಕಿಲೀಕ್ಸ್‌ಗೆ ಕಳಿಸಲಾರಂಭಿಸಿದರು.

2008ರಲ್ಲಿ ಸ್ವಿಟ್ಜರ್‌ಲ್ಯಾಂಡಿನ ಖಾಸಗಿ ಬ್ಯಾಂಕೊಂದು ನಡೆಸುತ್ತಿದ್ದ ಅವ್ಯವಹಾರಗಳ ಕಾಗದಪತ್ರಗಳನ್ನು ಬಯಲಿಗೆಳೆಯುವ ಮೂಲಕ ವಿಕಿಲೀಕ್ಸ್ ಪಾಶ್ಚಿಮಾತ್ಯ ದೇಶಗಳ ಹೂರಣವನ್ನು ಹೊರಹಾಕಲು ಪ್ರಾರಂಭಿಸಿತು. ಅಲ್ಲಿಯವರೆಗೆ ವಿಕಿಲೀಕ್ಸ್ ಅನ್ನು ಹಾಡಿಹೊಗಳುತ್ತಿದ್ದ ಸ್ವಿಟ್ಜರ್‌ಲ್ಯಾಂಡಿನ ಸರ್ಕಾರ ಕೂಡಲೇ ವಿಕಿಲೀಕ್ಸ್ ಮೇಲೆ ಕೇಸು ದಾಖಲಿಸಿತು. ಇದಾದ ಕೂಡಲೇ ವಿಕೀಲೀಕ್ಸ್ ಅಮೆರಿಕದ ಸೈನಿಕರು ಗುಂಟಾನಾಮೋ ಜೈಲಿನಲ್ಲಿ ಇರಾಕ್ ಕೈದಿಗಳನ್ನು ನಡೆಸಿಕೊಳ್ಳುತ್ತಿರುವ ರೀತಿಯ ಬಗ್ಗೆ ಅಲ್ಲಿಯ ಅನಾಮಿಕ ಅಮೆರಿಕನ್ ಸೈನಿಕ ಕಳಿಸಿಕೊಟ್ಟಿದ್ದ ವಿಡಿಯೋ ಚಿತ್ರವನ್ನು ಬಿತ್ತರಿಸಿತು. ಆಗ ಅಮೆರಿಕದ ಉಪಾಧ್ಯಕ್ಷ ಪದವಿಗೆ ಅಭ್ಯರ್ಥಿಯಾಗಿದ್ದ ಸಾರಾ ಪಾಲಿನ್ ಹೇಗೆ ತನ್ನ ಪದವಿಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾಳೆ ಎಂಬ ದಾಖಲೆಗಳನ್ನು, ಬ್ರಿಟನ್ನಿನ ಜನಾಂಗೀಯವಾದಿ ಬ್ರಿಟಿಷ್ ನ್ಯಾಷನಲಿಸ್ಟ್ ಪಾರ್ಟಿಯ ಸದಸ್ಯರ ಪಟ್ಟಿಯನ್ನು, ಹಾಗೂ ಬಹುರಾಷ್ಟ್ರೀಯ ಕಂಪನಿಯಾದ ಟ್ರಾಫಿಗುರಾ ಎಂಬ ಉದ್ಯಮ ಸಂಸ್ಥೆಯು ಹೇಗೆ ಐವರಿ ಕೋಸ್ಟ್ ದೇಶದಲ್ಲಿ ತನ್ನ ವಿಷಕಾರಿ ತ್ಯಾಜ್ಯ ವಸ್ತುಗಳನ್ನು ಸುರಿದಿದೆ ಎಂಬ ಬಗ್ಗೆಯೂ ದಾಖಲೆಗಳನ್ನು ಪ್ರಕಟಿಸಿತು. ಹೀಗಾಗಿ ವಿಕಿಲೀಕ್ಸ್ ನಿಧಾನವಾಗಿ ತನಗೂ ಸಮಸ್ಯಾತ್ಮಕವಾಗಿ ಪರಿಣಮಿಸಬಹುದೆಂಬ ಅರಿವು ಅಮೆರಿಕ ಹಾಗೂ ಇನ್ನಿತರ ದೇಶಗಳಿಗೆ ಆಗಹತ್ತಿತು.

ಅದೇ ಸಮಯದಲ್ಲಿ 2007ರಲ್ಲಿ ಅಮೆರಿಕನ್ ಸೈನಿಕರು ನಿರಾಯುಧ ಇರಾಕಿ ಜನರನ್ನು ಮತ್ತು ಇಬ್ಬರು ವಿದೇಶಿ ಪತ್ರಕರ್ತರನ್ನು ಉದ್ದೇಶಪೂರ್ವಕವಾಗಿ ಹೆಲಿಕಾಪ್ಟರ್‌ನಿಂದ ಗುಂಡಿಟ್ಟು ಕೊಂದಿದ್ದ ಚಿತ್ರಣವನ್ನು ಅಮೆರಿಕನ್ ಸೈನಿಕನೊಬ್ಬ ವಿಡಿಯೋಗ್ರಾಫ್ ಮಾಡಿದ್ದು ವಿಕಿಲೀಕ್ಸ್‌ಗೆ ಲಭ್ಯವಾಗಿ ಅದನ್ನು ಅವರು ಜಗತ್ತಿನ ಮುಂದೆ ಬಯಲುಗೊಳಿಸಿದರು. ಇದು ಅಮೆರಿಕಕ್ಕೆ ಅತ್ಯಂತ ಗಾಬರಿಯನ್ನೇ ಉಂಟುಮಾಡಿತು. ತದನಂತರದಲ್ಲಿ ಅಫ್ಘಾನಿಸ್ತಾನದಲ್ಲೂ ಅಮೆರಿಕದ ಸೈನಿಕರು ಸತತವಾಗಿ ನಡೆಸುತ್ತಿರುವ ಅತ್ಯಾಚಾರಗಳ ಬಗ್ಗೆ 92,000ಕ್ಕೂ ಹೆಚ್ಚು ದಾಖಲೆಗಳನ್ನು ವಿಕಿಲೀಕ್ಸ್ ಬಹಿರಂಗಗೊಳಿಸಿತು. ಈ ಎಲ್ಲಾ ದಾಖಲೆಗಳು ಪಾಶ್ಚಿಮಾತ್ಯ ದೇಶಗಳ ಕೆಲವೇ ಗೌರವಾನ್ವಿತ ಪತ್ರಿಕೆಗಳಲ್ಲಿ ಮುಖ್ಯವಾದ ಗಾರ್ಡಿಯನ್, ಲಿ ಮಾಂಡ್, ಎಲ್ ಪ್ಯಾರಿಸ್, ಡೆರ್ ಸ್ಪೀಗಲ್, ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಮೂಲಕ ಪಶ್ಚಿಮ ದೇಶಗಳ ನಾಗರಿಕರನ್ನು ತಲುಪಿ ತಮ್ಮ ದೇಶಗಳ ಸರ್ಕಾರದ ನಿಜ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಯಿತು. ತಮ್ಮ ಸರ್ಕಾರಗಳು ತಮ್ಮಿಂದ ಮುಚ್ಚಿಟ್ಟ ಹಲವಾರು ಸತ್ಯಗಳನ್ನು ತಿಳಿದುಕೊಂಡ ನಾಗರಿಕರು ಈಗ ಸರ್ಕಾರದ ವಿರುದ್ಧ ಮತ್ತು ಈ ಗುಟ್ಟುಗಳನ್ನು ಬಹಿರಂಗಗೊಳಿಸಿದ ವಿಕಿಲೀಕ್ಸ್ ಪರವಾಗಿ ಬೀದಿಗಳಲ್ಲಿ ಹೋರಾಡುತ್ತಿದ್ದಾರೆ. ವಿಕಿಲೀಕ್ಸ್‌ನ ಮುಖ್ಯಸ್ಥ ಅಸ್ಸಾಂಗೆಯ ಮೇಲೆ ಹಾಕಿರುವ ಸುಳ್ಳು ಕೇಸುಗಳ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ.

▶▶ 13

ನೋ ಕಾಮೆಂಟ್ಸ್

"ಈಗ ಅಮೆರಿಕವನ್ನು ಒಳಗೊಂಡಂತೆ ಅದರ ಹಲವಾರು ಮಿತ್ರ ರಾಷ್ಟ್ರಗಳನ್ನು ಕಂಗೆಡಿಸಿರುವ ವಿಕಿಲೀಕ್ಸ್ ಬಗ್ಗೆ ಯಾರು, ಯಾವ ಅಭಿಪ್ರಾಯ ತಳೆಯುತ್ತಾರೆಂಬುದು ಅವರು ಈವರೆಗೆ ಜಗತ್ತನ್ನು ಕತ್ತಲಲ್ಲಿಟ್ಟು ಸವಾರಿ ಮಾಡುತ್ತಿದ್ದ ಅಮೆರಿಕದ ವಿದೇಶಾಂಗ ನೀತಿಗಳ ಬಗ್ಗೆ ಏನು ನಿಲುವು ಹೊಂದಿರುತ್ತಾರೆ ಎಂಬುದನ್ನೇ ಆಧರಿಸಿರುತ್ತದೆ. ತನ್ನ ಬಗ್ಗೆ ಅಪಾರ ದುರಹಂಕಾರ ಹೊಂದಿರುವ ರಾಷ್ಟ್ರವೊಂದಕ್ಕೆ ಅದನ್ನು ಗಮನಿಸಿ ಬಯಲುಗೊಳಿಸುವ ಶಕ್ತಿಗಳಿದ್ದಾವೆ ಎಂಬುದನ್ನು ನೆನಪಿಸುವುದು ಆಗಾಗ ಅತ್ಯಗತ್ಯವಾಗುತ್ತದೆ. ವಿಕಿಲೀಕ್ಸ್ ಆ ರೀತಿ ಒಳ್ಳೆಯ ಕೆಲಸವನ್ನೇ ಮಾಡಿದೆ ಎಂಬುದು ನನ್ನ ಅಭಿಪ್ರಾಯ."

-ಡಿಗ್ಗಿ ಜಾನ್ಸನ್, ಅಮೆರಿಕದ ಅಂಕಣಕಾರ

"ಕೆಲವೇ ತಿಂಗಳ ಹಿಂದೆ ಬ್ರೂಕಿಂಗ್ಸ್ ಇನ್‌ಸ್ಟಿಟ್ಯೂಟ್‌ನವರು ಅರಬರು ಇರಾನಿನ ಬಗ್ಗೆ ಏನು ಯೋಚಿಸುತ್ತಾರೆ ಎಂಬ ಬಗ್ಗೆ ಒಂದು ಸುದೀರ್ಘ ಅಧ್ಯಯನವನ್ನು ಪ್ರಕಟಿಸಿದ್ದರು. ಅದರ ಫಲಿತಾಂಶಗಳು ಆಶ್ಚರ್ಯಕರವಾಗಿದ್ದವು ಮತ್ತು ಅಮೆರಿಕದ ಮಾಧ್ಯಮಗಳು ಅರಬ್ಬರ ಬಗ್ಗೆ ಮತ್ತು ಇರಾನಿನ ಬಗ್ಗೆ ನಡೆಸುತ್ತಿರುವ ಪ್ರಚಾರಕ್ಕೆ ವ್ಯತಿರಿಕ್ತವಾಗಿತ್ತು. ಆ ಅಧ್ಯಯನದ ಪ್ರಕಾರ ಶೇ.80ರಷ್ಟು ಅರಬ್ಬರು ಮಧ್ಯಪ್ರಾಚ್ಯಕ್ಕೆ ಇಸ್ರೇಲಿನಿಂದಲೇ ಮಹಾನ್ ಗಂಡಾಂತರವಿದೆಯೆಂದು ಭಾವಿಸುತ್ತಾರೆ. ಇನ್ನು ಶೇ.77 ರಷ್ಟು ಅರಬ್ಬರು ಈ ಪ್ರಾಂತ್ಯಕ್ಕೆ ಅಮೆರಿಕದಿಂದಲೇ ಗಂಡಾಂತರವಿದೆಯೆಂದು ಭಾವಿಸುತ್ತಾರೆ. ಕೇವಲ ಶೇ.10ರಷ್ಟು ಜನ ಮಾತ್ರ ಇರಾನ್ ಬಗ್ಗೆ ಭೀತಿಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ವಿಕಿಲೀಕ್ಸ್ ಹೊರತಂದ ಅಂಶಗಳಲ್ಲಿ ಇವುಗಳ ಸುಳಿವೂ ಇಲ್ಲದಿರುವುದು ಆಶ್ಚರ್ಯಕರವಾಗಿದೆ."

-ನೋಮ್ ಚಾಮ್‌ಸ್ಕಿ,
ಅಮೆರಿಕದ ಖ್ಯಾತ ವಿದ್ವಾಂಸರು

"ಅಧಿಕಾರಸ್ಥರು ಹೇಳಿದ್ದೇ ಸತ್ಯ ಎಂಬ ಭಾವನೆಯನ್ನು ಸರ್ಕಾರಗಳು ಜನರಲ್ಲಿ ಬೆಳೆಸುತ್ತವೆ. ದುರದೃಷ್ಟವೆಂದರೆ ಮಾಧ್ಯಮಗಳೂ ಸಹ ಈ ಮಿಥ್ಯೆಯನ್ನು ಹೆಚ್ಚು ಪ್ರಚುರಪಡಿಸಲು ಜೊತೆಗೂಡುತ್ತವೆ. ಇರಾಕ್ ಮೇಲೆ ಯುದ್ಧ ನಡೆಸಿದ್ದಕ್ಕೆ ಅಮೆರಿಕ, ಬ್ರಿಟನ್ ಎಲ್ಲ ಸರ್ಕಾರಗಳು ಇತರ ದೇಶಗಳಿಗಿರಲಿ ತಮ್ಮ ದೇಶದ ಜನತೆಗೇ ಸುಳ್ಳು ಹೇಳಿವೆ. ಅದನ್ನು ವಿಕಿಲೀಕ್ಸ್ ಯಶಸ್ವಿಯಾಗಿ ಬಯಲಿಗೆಳೆದಿದೆ. ಇದರ ಬಗ್ಗೆ ನಾನು ಮಾಡಿರುವ 'The War You Don't See' ಎಂಬ ಸಾಕ್ಷ್ಯ ಚಿತ್ರಕ್ಕಾಗಿ ನಾನು ಹಲವಾರು ಬ್ರಿಟಿಷ್ ಮಧ್ಯಮ ಮುಖಂಡರನ್ನು ಸಂದರ್ಶನ ನಡೆಸಿದಾಗ ಕಂಡುಕೊಂಡ ಸತ್ಯವೆಂದರೆ ಅವರೆಲ್ಲರೂ ಇರಾಕ್ ಯುದ್ಧದ ಬಗ್ಗೆ ಸರ್ಕಾರದ ಗೃಹ ಸಚಿವಾಲಯ ಹೇಳಿದ ಸುಳ್ಳುಗಳನ್ನು ಕಿಂಚಿತ್ತೂ ಸಂದೇಹಪಡದೆ ಒಪ್ಪಿಕೊಂಡು ಅದನ್ನೇ ಸತ್ಯವೆಂದು ಬಿತ್ತರಿಸಿವೆ. ಆದರೆ ಅಸ್ಸಾಂಗೆ ನೇತೃತ್ವದ ವಿಕಿಲೀಕ್ಸ್ ಅವೆಲ್ಲವೂ ಸುಳ್ಳೆಂದು ಬಯಲು ಮಾಡಿದೆ. ಸರ್ಕಾರದ ಬಗ್ಗೆ ಜನರಲ್ಲಿ ಸಂದೇಹ ಉಂಟುಮಾಡುವ ಯಾವುದೇ ಪ್ರಯತ್ನ ಸ್ವಾಗತಾರ್ಹ."

- ಜಾನ್ ಪಿಲ್ಗರ್, ವಿಶ್ವವಿಖ್ಯಾತ ಪತ್ರಕರ್ತ

"ರೋಚಕತೆಯ ಬೆನ್ನಹಿಂದೆ ಬಿದ್ದಿರುವ ಮಾಧ್ಯಮಗಳಿಗೆ, ರಾಡಿಯಾ ಟೇಪ್ಸ್‌ಗಳು ಅಪಾರ ಪ್ರಮಾಣದ ಸರಕನ್ನೇ ಒದಗಿಸಿತ್ತು, ಆದರೂ ಕೆಲವು ಅಪವಾದಗಳನ್ನು ಹೊರತುಪಡಿಸಿದರೆ ಮಾಧ್ಯಮವು ಅದನ್ನು ಹೆಚ್ಚು ಬಳಸಿಕೊಳ್ಳದೆ ನಿರ್ಲಕ್ಷಿಸಿಯೇ ಬಿಟ್ಟಿದೆಯೆನ್ನಬಹುದು. ಸಾಮಾನ್ಯವಾಗಿ ಸುದ್ದಿಮಾಧ್ಯಮಗಳು ಅಧಿಕಾರಸ್ಥರ ಸ್ಟೆನೋಗ್ರಾಫರುಗಳಾಗಿ ಕೆಲಸ ಮಾಡುತ್ತವೆ ಮತ್ತು ಎಲ್ಲಾ ಬಗೆಯ ಪ್ರತಿರೋಧಗಳನ್ನು ಅಧಿಕಾರಸ್ಥ ಕೇಂದ್ರಗಳಿಗೆ ಹೇಗಾದರೂ ಅಧೀನಗೊಳಿಸುವ ಕೈಂಕರ್ಯದಲ್ಲಿ ತೊಡಗಿರುತ್ತವೆ. ಆದರೆ ಈ ರಾಡಿಯಾ ಟೇಪ್ ಹಗರಣವು ಮಾಧ್ಯಮವು ಕೇವಲ ಅಧಿಕಾರಸ್ಥರ ಸ್ಟೆನೋಗ್ರಾಫರ್ ಆಗುವುದು ಮಾತ್ರವಲ್ಲದೆ ಅಧಿಕಾರದ ದುರ್ಬಳಕೆಯಲ್ಲೂ ಪಾಲು ಹಂಚಿಕೊಂಡಿದೆ."

- ಸುಕುಮಾರ್ ಮುರಳೀಧರನ್, ಅಂಕಣಕಾರ

"ಈ ಅತ್ಯದ್ಭುತವಾದ ಭಾರತ ದೇಶಕ್ಕೆ ಒಂದು ಘೋಷಿತ ಭದ್ರತಾ ನೀತಿಯಿಲ್ಲ, ಒಂದು ನಿರ್ದಿಷ್ಟ ರಕ್ಷಣಾ ನೀತಿಯೂ ಇಲ್ಲ ಅಥವಾ ಒಂದು ನಿಖರ ಭಯೋತ್ಪಾದನಾ ನಿಗ್ರಹ ಯೋಜನೆಯೂ ಇಲ್ಲ. ಆದರೂ ತನ್ನ ಮೂಲಭೂತ ರಕ್ಷಣಾ ಅಗತ್ಯಗಳನ್ನು ಪೂರೈಸಿಕೊಳ್ಳಲು ವಿದೇಶಗಳ ಮೇಲೆ ಆಧಾರ ಪಡುವ ಏಕೈಕ ಬೃಹತ್ ದೇಶ ಭಾರತ. ಭಾರತವು ತನ್ನದೇ ಆದ ರಕ್ಷಣಾ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುವ ಬದಲು ತನ್ನ ದೇಶವನ್ನು ಅನಗತ್ಯವಾದ ಆಯುಧ ಸಾಮಗ್ರಿಗಳ ಸುರಿಗುಂಡಿಯನ್ನಾಗಿ ಮಾಡಿಕೊಂಡಿದೆ. ಹೀಗಾಗಿ ಭಾರತವು ಕಳೆದ ದಶಕದಲ್ಲಿ ಪ್ರಪಂಚದ ಆಯುಧ ಸಾಮಗ್ರಿಗಳ ಅತ್ಯಂತ ದೊಡ್ಡ ಆಮದು ಮಾರುಕಟ್ಟೆಯಾಗಿರುವುದರ ಜೊತೆಜೊತೆಗೆ ಯುದ್ಧದಲ್ಲಿ ಜಯಿಸಬಲ್ಲ ಸಾಮರ್ಥ್ಯವನ್ನೂ ದಿನೇದಿನೇ ಕಳೆದುಕೊಳ್ಳುತ್ತಿದೆ."

- ಒಬ್ಬ ರಕ್ಷಣಾ ವ್ಯವಹಾರಗಳ ತಜ್ಞ

96ನೇ ಪ್ರಾಯದಲ್ಲಿ ಖುಷ್‌ವಂತರ ತುಂಟ ಕಾದಂಬರಿ



ಕಂಡಹಾಗೆ


• ಗೌರಿ ಲಂಕೇಶ್
editorlankesh@gmail.com

ಖುಷ್ವಂತ್ ಸಿಂಗ್ ಅವರಿಗೆ ಈಗ ಬರೋಬ್ಬರಿ 96 ವರ್ಷ ವಯಸ್ಸು. ಆ ವಯಸ್ಸಿಗೆ ಸಹಜವಾದಂತೆ ಇತ್ತೀಚೆಗೆ ಅವರ ಆರೋಗ್ಯ ಕೈಕೊಡುತ್ತಿದೆ. ಅವರೇ ಹೇಳಿಕೊಂಡಿರುವಂತೆ ದಿನಕ್ಕೆ ಹತ್ತಾರು ಮಾತ್ರೆಗಳನ್ನು ತೆಗೆದುಕೊಳ್ಳದಿದ್ದರೆ ಅವರ ರಕ್ತದೊತ್ತಡವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದಿರಲಿ. ಮಲ ವಿಸರ್ಜನೆ ಕೂಡ ಆಗದೆ ಅವರು ಅಪಾರ ಸಂಕಟ ಅನುಭವಿಸುತ್ತಾರಂತೆ.

ಆದರೆ ಈ ಇಳಿವಯಸ್ಸಿನಲ್ಲೂ ಮುಂಜಾನೆ ನಾಲ್ಕು ಗಂಟೆಗೆ ಎದ್ದು ಪ್ರತಿದಿನ ಬರೆಯುವ ಶಿಸ್ತನ್ನು ಖುಷ್ವಂತ್ ಕಾಪಾಡಿಕೊಂಡಿದ್ದಾರೆ. ಹಾಗೆಯೇ ಪ್ರತಿ ಸಂಜೆ ಒಂದು ವಿಸ್ಕಿಯನ್ನು ಸೇವಿಸುವಷ್ಟು ಜೀವನೋತ್ಸಾಹವನ್ನು ಮುಂದುವರೆಸಿದ್ದಾರೆ.

ಖುಷ್ವಂತ್ ಸಿಂಗ್ ಬಗ್ಗೆ ಹಿಂದೊಮ್ಮೆ ಅಪ್ಪ ಹೀಗೆ ಬರೆದಿದ್ದರು: "ಹೆಂಡತಿಯ ಒಳ್ಳೆತನ, ದಿಲ್ಲಿಯ ಸೌಂದರ್ಯ, ಭಾರತದ ವೈವಿಧ್ಯಮಯತೆ, ಬದುಕಿನ ರಸವಂತಿಕೆ, ಬರೆಯುವ ರೋಮಾಂಚನ ಎಲ್ಲ ಖುಷ್ವಂತ್‌ಗೆ ಇಷ್ಟ. ಆತನಂತೆ ಬರೆಯುವವರು, ಭೇಟಿಸುವವರು, ಕುಡಿಯುವವರು, ಕಲ್ಪಿಸಿಕೊಳ್ಳುವವರು ಬರಬಹುದು. ಆದರೆ ಈ ಸರ್ದಾರ್ಜಿಯಂತೆ ಲವಲವಿಕೆ, ದೇಶಪ್ರೇಮ, ತುಂಟುತನ, ಒಳ್ಳೆಯತನ ಇರುವವರು ಬರುವುದು ಕಷ್ಟ. ಖುಷ್ವಂತ್‌ಸಿಂಗ್ ಏನನ್ನು ಬರೆದರೂ ಮನ ಕುಣಿಯುವಂತೆ, ಎದೆ ಕರಗುವಂತೆ ಬರೆಯಬಲ್ಲ ಮನುಷ್ಯ."

ಅಪ್ಪ ಬಣ್ಣಿಸಿದ್ದ ಖುಷ್ವಂತ್ ಅವರ ಎಲ್ಲ ಗುಣಗಳನ್ನು ಬಿಂಬಿಸುವಂತಹ ಕಾದಂಬರಿಯೊಂದನ್ನು ಇತ್ತೀಚೆಗೆ ಖುಷ್ವಂತ್ ಬರೆದಿದ್ದಾರೆ. ಅದು 'ದಿ ಸನ್‌ಸೆಟ್ ಕ್ಲಬ್'.



ಕಾದಂಬರಿಯನ್ನು ಪ್ರಾರಂಭಿಸುವ ಮುನ್ನ 'ಅಪಲೋಜಿಯ' (ಸಮಾಧಾನ) ಎಂಬ ಮುನ್ನುಡಿಯಲ್ಲಿ "ಈ ಕಾದಂಬರಿಯನ್ನು ಬರೆಯುವ ಉದ್ದೇಶವೇ ನನಗಿರಲಿಲ್ಲ. ನನಗೆ ಆಗ ತಾನೆ 95 ವರ್ಷ ತುಂಬಿದ್ದು, ಇದನ್ನು ಸಂಪೂರ್ಣಗೊಳಿಸಲು ನನ್ನಿಂದ ಸಾಧ್ಯವೇ ಎಂಬುದೇ ನನಗೆ ಗೊತ್ತಿರಲಿಲ್ಲ. ಆದರೆ 'ಔಟ್‌ಲುಕ್' ಪತ್ರಿಕೆಯ ಶೀಲಾ ರೆಡ್ಡಿ ನಾನು ನನ್ನ ದಿವಂಗತ ಮಿತ್ರರ ಬಗ್ಗೆ ತುಂಬಾ ಮಾತನಾಡುವುದರಿಂದ ಅವರ ನೆನಪುಗಳನ್ನೆಲ್ಲ ದಾಖಲಿಸಬಾರದೇಕೆ ಎಂದು ಸೂಚಿಸಿದರು. ನಾನು ನಿಜ ಸಂಗತಿಗಳೊಂದಿಗೆ ನನ್ನ ಕಲ್ಪನೆಯನ್ನು ಬೆರೆಸಿ ಈ ಕಾದಂಬರಿಯನ್ನು ಬರೆಯಲಾರಂಭಿಸಿದೆ" ಎಂದು ಬರೆದಿದ್ದಾರೆ.

'ಸನ್‌ಸೆಟ್ ಕ್ಲಬ್' ಕಾದಂಬರಿಯ ಪ್ರಮುಖ ಪಾತ್ರಗಳು ತಮ್ಮ ಬದುಕಿನ 8ನೇ ದಶಕದ ಕೊನೆಯ ವರ್ಷಗಳಲ್ಲಿ ಇರುವ ಮೂವರು ವೃದ್ಧ ಸ್ನೇಹಿತರು. ಈ ಮೂವರು ಸ್ನೇಹಿತರು ದೆಹಲಿಯ ಲೋಧಿ ಗಾರ್ಡನ್ಸ್‌ನಲ್ಲಿ ಪ್ರತಿ ಸಂಜೆ ವಾಕಿಂಗ್‌ಗೆಂದು ಭೇಟಿ ಆಗಿ, ಆನಂತರ ಅದೇ ಪಾರ್ಕ್‌ನಲ್ಲಿರುವ ಬೆಂಚಿನ ಮೇಲೆ ಕೂತು ತಮ್ಮ ಬದುಕಿನ ಆಗುಹೋಗುಗಳ ಬಗ್ಗೆ ಮತ್ತು ದೇಶದ ವಿದ್ಯಮಾನಗಳ ಬಗ್ಗೆ ಚರ್ಚಿಸುತ್ತಾರೆ. 'ಸನ್‌ಸೆಟ್ ಕ್ಲಬ್' 2009 ರ ಜನವರಿ 26 ರಂದು ಪ್ರಾರಂಭವಾಗಿ 2010 ರ ಜನವರಿ 26 ರಂದು ಅಂತ್ಯಗೊಳ್ಳುತ್ತದೆ. ಈ ಅವಧಿಯಲ್ಲಿ ಮೂವರು ವೃದ್ಧರ ಆಶೆ ಮತ್ತು ಆತಂಕಗಳನ್ನಲ್ಲದೆ, ಭಾರತದಲ್ಲಿ ಆ ಅವಧಿಯಲ್ಲಿ ಜರುಗಿದ ರಾಜಕೀಯ ಮತ್ತು ಸಾಮಾಜಿಕ ಘಟನೆಗಳ ಚಿತ್ರಣವನ್ನೂ ಕಾದಂಬರಿ ಸೆರೆ ಹಿಡಿಯುತ್ತದೆ.

ಮೂವರು ವೃದ್ಧ ಮಿತ್ರರಲ್ಲಿ ಪಂಡಿತ್ ಪ್ರೀತಮ್ ಶರ್ಮ ಹಿರಿಯ. ಪಂಜಾಬಿ ಬ್ರಾಹ್ಮಣ ಪಂಗಡದವನಾದ ಶರ್ಮ ಬ್ರಹ್ಮಚಾರಿ. ಹಿಂದೊಮ್ಮೆ ಸರ್ಕಾರದಲ್ಲಿ ಹಿರಿಯ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದ ಶರ್ಮ ಹಿಂದೂತ್ವವಾದಿಯಲ್ಲದೆ ಬ್ರಾಹ್ಮಣರ 'ಸಾಮರ್ಥ್ಯ'ದ ಬಗ್ಗೆ ತುಂಬಾ ಹೆಮ್ಮೆ ಹೊಂದಿರುವ ಮನುಷ್ಯ.


ಎರಡನೆ ವೃದ್ಧ ನವಾಬ್ ಬರ್ಕತುಲ್ಲಾ ಬೇಗ್. ನವಾಬ್ ವಂಶಸ್ಥನಾದ ಈತ ದೈತ್ಯಾಕಾರ ದೇಹದ ಕಟ್ಟುಮಸ್ತಾದ ವ್ಯಕ್ತಿ. ತನ್ನ ಮಡದಿ ಮತ್ತು ಹತ್ತಾರು ಸೇವಕರೊಂದಿಗೆ ದೊಡ್ಡ ಮನೆಯಲ್ಲಿ ವಾಸಿಸುವ ಬೇಗ್ ಕಾಂಗ್ರೆಸ್ ಬೆಂಬಲಿಗ.

ಮೂರನೆಯ ವೃದ್ಧ ಸರ್ದಾರ್ ಬೂಟಾ ಸಿಂಗ್. ಅಷ್ಟೇನು ಎತ್ತರದವನಲ್ಲದ, ಗುಂಡುಗುಂಡಾಗಿರುವ ಸಿಂಗ್ ಅನಾರೋಗ್ಯಪೀಡಿತವಿಧುರ. ಸೊಂಟದ ಕೆಳಗಿನ ಭಾಷೆಯನ್ನು ಉಪಯೋಗಿಸುವುದು ತನ್ನ ಜನ್ಮಸಿದ್ಧ ಹಕ್ಕು ಎಂದು ನಂಬಿರುವಾತ. ರುಚಿಕರವಾದ ಊಟವನ್ನು ಇಷ್ಟಪಟ್ಟು ಸೇವಿಸಿ, ಖುಷಿಗೊಂಡಾಗಲೆಲ್ಲ ತುಂಬಾ ಕುಡಿದು ಚಿತ್ ಆಗುವ ಸಿಂಗ್ ಮಾರನೆ ಬೆಳಗ್ಗೆ ಮಲ ವಿಸರ್ಜನೆ ಬಗ್ಗೆ ತಲೆ ಕೆಡಿಸಿಕೊಳ್ಳುವ ಹುಂಬ. ಸದಾ ತನ್ನ ಮಿತ್ರ ಶರ್ಮನ ಕಾಲೆಳೆಯುವುದರಲ್ಲಿ ಮತ್ತು ಸಮಯಕ್ಕೆ ಸೂಕ್ತ ಕಾವ್ಯಗಳನ್ನು ಪಠಿಸುವುದರಲ್ಲಿ ಸಂತೋಷ ಕಾಣುತ್ತಾನೆ ಸಿಂಗ್. ಈತನನ್ನು ಬೇಗ್ 'ರಂಗೀಲಾ ಸರ್ದಾರ್' ಎಂದೇ ಬಣ್ಣಿಸುತ್ತಾನೆ. ಅಂದಹಾಗೆ ಈ ಬೂಟಾ ಸಿಂಗ್ ಬೇರಾರೂ ಅಲ್ಲ; ಕಾದಂಬರಿಕಾರ ಖುಷ್ವಂತ್ ಅವರೇ ಬೂಟಾ ಸಿಂಗ್!

ಭಾರತದ ಗಣತಂತ್ರದ ದಿವಸ ಲೋಧಿ ಗಾರ್ಡನ್ಸ್‌ನಲ್ಲಿ ಈ ವೃದ್ಧರ ಭೇಟಿಯೊಂದಿಗೆ ಕಾದಂಬರಿ ಆರಂಭವಾಗುತ್ತದೆ. ಬೇಗ್ ಮತ್ತು ಶರ್ಮರಿಗೆ ಭಾರತದ ಸಾಧನೆಗಳ ಬಗ್ಗೆ ಅಪಾರ ಹೆಮ್ಮೆ ಇದ್ದರೆ, ಇಂದು ಎಲ್ಲೆಡೆ ಕೊಲೆ, ಸುಲಿಗೆ, ಅತ್ಯಾಚಾರಗಳೇ ನಡೆಯುತ್ತಿರುವುದರಿಂದ ಸಿಂಗ್‌ಗೆ ಈ ದೇಶ ಸಾಗುತ್ತಿರುವ ದಿಕ್ಕಿನ ಬಗ್ಗೆ ಜಿಗುಪ್ಸೆ. ಅಲ್ಲಿಂದ ಪ್ರಾರಂಭವಾಗುವ ಇವರ ನಡುವಿನ ಸಂಭಾಷಣೆಯಲ್ಲಿ ಹೋದವರ್ಷ ಪತ್ರಿಕೆಗಳಲ್ಲಿ ಪ್ರಕಟವಾದ ಪ್ರಮುಖ ಸುದ್ದಿಗಳೆಲ್ಲ ಬಂದು ಹೋಗುತ್ತವೆ. ಹಾಗೆಯೇ ಅವತ್ತು "ಏನು ಸಮಾಚಾರ?" ಎಂದು ಬೇಗ್ ಕೇಳಿದಾಗ ಸಿಂಗ್ "ಹೊಸ ಸಮಾಚಾರ ಏನು ಅಂದ್ರೆ ನಿನ್ನೆ ರಾತ್ರಿ ನನಗೆ ಸ್ವಪ್ನಸ್ಖಲನ ಆಯ್ತು. ನೀನು ಹಕೀಮ ಆಗಿರುವುದರಿಂದ ಈ ವಯಸ್ಸಿನಲ್ಲಿ ನನಗೆ ಹೀಗೆ ಆಗುವುದು ಸಹಜವೇ?" ಎಂದು ಕೇಳುವ ಮೂಲಕ ಆ ವೃದ್ಧರ ಲೈಂಗಿಕ ಆಸಕ್ತಿಗಳ ವೃತ್ತಾಂತವೂ ಪ್ರಾರಂಭವಾಗುತ್ತದೆ.

ಹೇಳಿಕೇಳಿ ಖುಷ್ವಂತ್ ಅವರನ್ನು ಬಹಳಷ್ಟು ಜನ 'ಪೋಲಿ ಮುದುಕ' ಎಂದೇ ಭಾವಿಸಿದ್ದಾರೆ. ಅದಕ್ಕೆ ತಕ್ಕಂತೆ ಈ ಕಾದಂಬರಿಯಲ್ಲಿ ಅವಕಾಶ ಸಿಕ್ಕಾಗಲೆಲ್ಲ ಖುಷ್ವಂತ್ ಸೆಕ್ಸ್ ಕುರಿತ ಕತೆಗಳನ್ನು ತೂರಿಸಿದ್ದಾರೆ. ಹಾಗೆಯೇ ಗಿಡ–ಮರ–ಪಕ್ಷಿಗಳ ಬಗ್ಗೆ ಖುಷ್ವಂತ್‌ರಿಗೆ ಅಪಾರ ಆಸಕ್ತಿ ಇರುವುದರಿಂದ ಅವುಗಳ ಬಗ್ಗೆಯೂ ಅವಕಾಶ ಸಿಕ್ಕ ಜಾಗಗಳಲೆಲ್ಲ ಸೇರಿಸಿದ್ದಾರೆ. ಹಾಗೆ ಸೇರಿಸುವ ಮೂಲಕ ಒಂದು ವರ್ಷದಲ್ಲಿ ದೆಹಲಿಯಲ್ಲಿ ವಿವಿಧ ವಸಂತಗಳಲ್ಲಿ ಅರಳುವ ಹೂವು ರಾಶಿಗಳನ್ನು ಓದುಗರಿಗೆ ಮನಮುಟ್ಟುವಂತೆ ವಿವರಿಸಿದ್ದಾರೆ.

ಆದರೆ ಅದಕ್ಕಿಂತ ಮುಖ್ಯವಾಗಿ ಈ ದೇಶದ ರಾಜಕಾರಣಿಗಳ ಹಗರಣಗಳು, ಮಂಗಳೂರಿನ ಪಬ್ ಮೇಲೆ ದಾಳಿ ನಡೆಸಿದ್ದಲ್ಲದೆ ವ್ಯಾಲೆಂಟೈನ್ಸ್ ಡೇ ಅನ್ನು ವಿರೋಧಿಸುವ ಹಿಂದೂತ್ವವಾದಿಗಳ ಅಟ್ಟಹಾಸ, ಟಾಟಾನ ನ್ಯಾನೋ ಕಾರ್ ವಿವಾದ, ಆಂಧ್ರದ ಮುಖ್ಯಮಂತ್ರಿ ವೈ.ಎಸ್. ರಾಜಶೇಖರ ರೆಡ್ಡಿಯ ನಿಧನ, ಗೃಹ ಸಚಿವ ಪಿ. ಚಿದಂಬರಂ ವಿರುದ್ಧ ಚಪ್ಪಲಿ ತೂರಿದ ಪತ್ರಕರ್ತ ಜರ್‌ನೇಲ್ ಸಿಂಗ್‌ನ ಅಸಮಾಧಾನ, ಸಲಿಂಗಕಾಮಿಗಳ ಪರ ಸುಪ್ರೀಂಕೋರ್ಟ್ ನೀಡಿದ ತೀರ್ಪು, ಸೂರ್ಯಗ್ರಹಣದ ಸುತ್ತಲಿನ ಮೂಢನಂಬಿಕೆ, ಹಸಿರುಕ್ರಾಂತಿಯ ಹರಿಕಾರ ನಾರ್ಮನ್ ಬೋರ್‌ಲಾಗ್‌ನ ಕೊಡುಗೆ, ಲಿಬರ್ಹಾನ್ ಸಮಿತಿಯ ವರದಿ, ತೆಲಂಗಾಣ ಚಳವಳಿ, ಮೈಕೆಲ್ ಜಾಕ್ಸನ್‌ನ ನಿಧನ... ಇಂತಹ ಹಲವಾರು ವಿಚಾರಗಳನ್ನು ಈ ಮೂವರು ಚರ್ಚಿಸುವ ಮೂಲಕ ಅವುಗಳ ಬಗೆಗಿನ ವಿವಿಧ ಅಭಿಪ್ರಾಯಗಳು ವ್ಯಕ್ತವಾಗುತ್ತವೆ.



ಇನ್ನು 2009 ರಲ್ಲಿ ನಡೆದ ಚುನಾವಣೆ ಬಗ್ಗೆಯೂ ಸಾಕಷ್ಟು ಪ್ರಸ್ತಾಪವಿದೆ. ಮೇ 16 ರಂದು ಚುನಾವಣಾ ಫಲಿತಾಂಶಗಳು ಹೊರಬಿದ್ದಾಗ ಬಿಜೆಪಿ ನೇತೃತ್ವದ ಎನ್‌ಡಿಎ ಗೆಲ್ಲಲಿಲ್ಲ ಎಂದು ಶರ್ಮನಿಗೆ ಬೇಸರವಾಗುತ್ತದೆ. ಆದರೆ ಮನಮೋಹನ್ ಸಿಂಗ್‌ರ ಪಕ್ಕಾ ಅಭಿಮಾನಿಯಾದ ಬೂಟಾ ಸಿಂಗ್‌ಗೆ ಎಷ್ಟು ಸಂತೋಷವಾಗುತ್ತದೆಂದರೆ ಆತ ಸಿಕ್ಕಾಪಟ್ಟೆ ಕುಡಿದು ಮಾರನೆ ದಿನ ಹಾಸಿಗೆ ಹಿಡಿಯುತ್ತಾನೆ. ಬೇಗ್ ಮತ್ತಾತನ ಪತ್ನಿ ಸಕೀನಾಗಂತೂ ಯುಪಿಎ ಗೆಲುವು ರೋಮಾಂಚನ ನೀಡುತ್ತದೆ. ಎಷ್ಟರಮಟ್ಟಿಗೆ ಅಂದರೆ ಸಕೀನಾ ಬಿಜೆಪಿ ನಾಯಕ ಎಲ್.ಕೆ. ಅಡ್ವಾಣಿಯನ್ನು ಬಾಯಿ ತುಂಬಾ ಶಪಿಸುತ್ತಾಳೆ; "ನಮ್ಮ ಮನಮೋಹನ್‌ನನ್ನು ನಿಕ್ಕಮ್ಮ ಅಂತ ಕರೀತೀಯ? ನೀನೇ ನಿಕಮ್ಮ. ಮಸೀದಿಗಳನ್ನು ಕೆಡವುವನೆ" ಎಂದು ನಟಿಕೆ ಮುರಿಯುತ್ತಾಳೆ.

ಶರ್ಮ, ಬೇಗ್ ಮತ್ತು ಸಿಂಗ್ ನಡುವೆ ವಯಸ್ಸಿನೊಂದಿಗೆ ಇರುವ ಇನ್ನೊಂದು ಸಾಮ್ಯತೆ ಮೂವರೂ ಪ್ರತಿ ಸಂಜೆ ತಮ್ಮ ಸಾಮರ್ಥ್ಯಕ್ಕನುಸಾರವಾಗಿ ತಮ್ಮ ತಮ್ಮ ಮನೆಯಲ್ಲಿ ವಿಸ್ಕಿ ಹೀರುವುದು! ಅಂದಿನ ಚರ್ಚೆಯಲ್ಲಿ ಬೂಟಾ ಸಿಂಗ್ ವಿರುದ್ಧ ಶರ್ಮ ಮೇಲುಗೈ ಸಾಧಿಸಿದ್ದರೆ ಆ ಸಂಜೆ ಎಂದಿಗಿಂತ ಒಂದು ಹೆಚ್ಚು ವಿಸ್ಕಿ ಕುಡಿದು ಸಂಭ್ರಮಿಸುತ್ತಾನೆ. ಹಾಗೆಯೇ ಬೇಗ್ ಕೂಡ ವಿಸ್ಕಿ ಕುಡಿದು, ಸಖತ್ತಾಗಿ ಊಟ ಮಾಡಿ, ಐನೂರು ರೂಪಾಯಿ ಬೆಲೆಬಾಳುವ ಹವಾನಾ ಸಿಗಾರ್ ಅನ್ನು ಸೇದುವ ಮೂಲಕ ನೆಮ್ಮದಿ ಪಡೆಯುತ್ತಾನೆ.

ಹೀಗೆ, ರಾಜಕೀಯ, ಪ್ರಕೃತಿಯಲ್ಲಿನ ಬದಲಾವಣೆಗಳು, ಗತಿಸಿಹೋದ ಯೌವನದ ಬಗೆಗಿನ ಮೆಲುಕು, ಧರ್ಮಗಳಲ್ಲಿನ ಸೋಗಲಾಡಿತನ, ವಾದವಿವಾದ, ವೃದ್ಧಾಪ್ಯದ ಆತಂಕಗಳು, ಎಲ್ಲವೂ ಈ ಮೂವರ ಬದುಕು ಮತ್ತು ಮಾತಿನಲ್ಲಿ ಬಂದು ಹೋಗುತ್ತಾ ಕಾದಂಬರಿ ಸಾಗುತ್ತದೆ.

ಕೊನೆಗೂ 2009 ಮುಗಿದು ಹೊಸ ವರ್ಷ ಆಗಮಿಸುತ್ತದೆ. ಅದನ್ನು ಸ್ವಾಗತಿಸಲು ಬೂಟಾ ಸಿಂಗ್ ಮತ್ತು ಶರ್ಮ ಸೇರಿಕೊಂಡು ಪಾರ್ಟಿ ಮಾಡುತ್ತಾರೆ. ಇಬ್ಬರೂ ವಿಸ್ಕಿ ಸುರಿದುಕೊಂಡ ನಂತರ ಸಿಂಗ್ "ಚಿಯರ್ಸ್" ಅಂದಾಗ ಶರ್ಮ "ಯಾವುದರ ಬಗ್ಗೆ ಚಿಯರ್ಸ್ ಅನ್ನಬೇಕು ಗೊತ್ತಿಲ್ಲ, ನನ್ನ ಎಲ್ಲಾ ಸ್ನೇಹಿತರ ಪೈಕಿ ನಿನ್ನನ್ನು ಬಿಟ್ಟರೆ ಬೇರೆ ಯಾರೂ ಜೀವಂತವಾಗಿಲ್ಲ" ಎನ್ನುತ್ತಾನೆ. ಆಗ ಸಿಂಗ್ "ಅವರಿಗಿಂತ ನಾವು ಹೆಚ್ಚು ಕಾಲ ಬದುಕಿದ್ದೇನಲ್ಲ, ಅದನ್ನಾದರೂ ಸಂಭ್ರಮಿಸೋಣ" ಎನ್ನುತ್ತಾನೆ.

ಹೊಸ ವರ್ಷದ ಮಾರನೇ ದಿನ ಬೇಗ್ ತನ್ನ ನಿದ್ದೆಯಲ್ಲೇ ನಿಧನ ಹೊಂದುತ್ತಾನೆ. ಆ ಸುದ್ದಿ ಕೇಳಿ ಸಿಂಗ್ ತತ್ತರಿಸುತ್ತಾನೆ. ಇದಾದ ಹಲವು ದಿನಗಳಲ್ಲೇ ಶರ್ಮ ಕೂಡಾ ರಸ್ತೆಯಲ್ಲಿ ಎಡವಿ ಬಿದ್ದು ಆಸ್ಪತ್ರೆ ಸೇರುತ್ತಾನೆ. ಆತನಿಗೆ ಶಸ್ತ್ರ ಚಿಕಿತ್ಸೆ ನೀಡಿದರೂ ಶರ್ಮ ಸಾವನ್ನಪ್ಪುತ್ತಾನೆ. ಸಿಂಗ್‌ನ ದುಃಖ ಇನ್ನೂ ಹೆಚ್ಚುತ್ತದೆ. ತನ್ನ ಮಿತ್ರರ ಫೋನ್ ನಂಬರ್‌ಗಳಿರುವ ಪುಸ್ತಕವನ್ನು ತಿರುವಿ ಹಾಕುತ್ತಾ ಅದರಲ್ಲಿರುವ ಬಹಳಷ್ಟು ಹೆಸರುಗಳ ಅಡಿ ಗೆರೆಯೊಂದನ್ನು ಗೀಚಿ ದಿವಂಗತ 1981, ದಿ 1985, ದಿ. 1987 ಎಂದು ತಾನು ಬರೆದಿರುವುದನ್ನು ನೋಡುತ್ತಾನೆ. ಬೇಗ್ ಹೆಸರಿನ ಪಕ್ಕ ದಿವಂಗತ 3.1.2010 ಎಂದೂ, ಶರ್ಮಾನ ಹೆಸರಿನ ಪಕ್ಕ ದಿವಂಗತ 15.1.2010 ಎಂದೂ ಬರೆಯುತ್ತಾನೆ. ಹಾಗೆಯೇ ತನ್ನ ಹೆಸರಿನ ಪಕ್ಕ 'ದಿವಂಗತ: ದಿನಾಂಕ? ತಿಂಗಳು? ವರ್ಷ?" ಎಂದು ಬರೆಯುತ್ತಾನೆ.

ಮತ್ತೆ ಗಣತಂತ್ರದ ದಿನ ಆಗಮಿಸುತ್ತದೆ. ಸಿಂಗ್ ಒಂಟಿಯಾಗಿ ಲೋಧಿ ಗಾರ್ಡನ್ಸ್‌ನಲ್ಲಿನ ಎಂದಿನ ಬೆಂಚ್ ಮೇಲೆ ಕೂರುತ್ತಾನೆ. ಗಾರ್ಡನ್‌ನಲ್ಲಿ ಕೆಲಸ ಮಾಡುತ್ತಿರುವ ಒಬ್ಬ "ಸರ್ದಾರ್ ಸಾಹೇಬ್, ನೀವು ಬಹಳ ದಿನ ಇತ್ತ ಬರಲಿಲ್ಲ, ನಿಮ್ಮ ಸ್ನೇಹಿತರು ಬಂದಿಲ್ಲ ಯಾಕೆ?" ಎಂದು ಕೇಳುತ್ತಾನೆ.

"ಹೊರಟುಹೋದರು" ಎಂದು ಸಿಂಗ್ ತನ್ನ ಕೈಗಳನ್ನು ಆಕಾಶದತ್ತ ಎತ್ತುತ್ತಾನೆ.


"ಇಬ್ಬರೂ? ಅಯ್ಯೋ ಪಾಪ" ಎನ್ನುತ್ತಾನೆ ಕೆಲಸಗಾರ.

ಯುವತಿಯೊಬ್ಬಳ ಸ್ತನವನ್ನು ಹೋಲುವ, ಹತ್ತಿರದಲ್ಲಿ ಇರುವ ಮಸೀದಿಯ ದೊಡ್ಡ ಗೊಮ್ಮಟವನ್ನು ನೋಡುತ್ತಾ ಸಿಂಗ್ ಒಬ್ಬನೇ ಕೂರುತ್ತಾನೆ....

ಖುಷ್ವಂತ್ ಸಿಂಗ್ ಅವರು ಈ ಹಿಂದೆ ಬರೆದಿರುವ 'ಟ್ರೈನ್ ಟು ಪಾಕಿಸ್ತಾನ್' ಕಾದಂಬರಿಯ ಮಟ್ಟಕ್ಕೆ 'ಸನ್‌ಸೆಟ್ ಕ್ಲಬ್' ಬರುವುದಿಲ್ಲ. ಆದರೆ 96 ನೇ ವಯಸ್ಸಿನಲ್ಲೂ ಅವರು ಇಷ್ಟೊಂದು ಲವಲವಿಕೆ, ಚೇಷ್ಟೆ, ಒಳನೋಟಗಳು ಇರುವ ಕಾದಂಬರಿಯನ್ನು ಬರೆದಿದ್ದಾರೆಂದರೆ ಅದು ಒಂದು ಸಾಧನೆಯೇ ಸರಿ.

ನನ್ನಂತಹ ಖುಷ್ವಂತ್ ಸಿಂಗ್ ಅಭಿಮಾನಿಗಳು ಓದಬಲ್ಲ ಪುಸ್ತಕ 'ದಿ ಸನ್‌ಸೆಟ್ ಕ್ಲಬ್'. •

ಜಿ.ಪಂ: ಓಟು ಲೂಟಿಗೆ 200 ಕೋಟಿ ನಂದೇ ದುಡ್ಡು



ತಲಾ ಜಿಲ್ಲೆಗೆ ಕಡಿಮೆ ಎಂದರೂ ಎಂಟು ಕೋಟಿ ಜಾಹೀರಾತೂ ಸೇರಿದಂತೆ ಪ್ರಚಾರಕ್ಕೆಂದೇ ಮಿನಿ ಮಮ್ ಇಪ್ಪತ್ತು ಕೋಟಿ. ಜೊತೆಗೆ ಆಯಾ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ತಮ್ಮದೇ ಸ್ವಂತ ತಾಕತ್ತಿನ ಮೇಲೆ ಫಂಡು ಕಲೆಹಾಕಬೇಕು. ಕರ್ನಾಟಕದ ಒಟ್ಟು 30 ಜಿಲ್ಲೆಗಳ 1005 ಜಿಲ್ಲಾ ಪಂಚಾಯ್ತಿ ಕ್ಷೇತ್ರಗಳ ಪೈಕಿ ಬಿಜೆಪಿ ಈ ಬಾರಿ ಕನಿಷ್ಠ ಏಳು ನೂರನ್ನಾದರೂ ಗೆಲ್ಲಲೇಬೇಕು. ಕನಿಷ್ಠ ಇಪ್ಪತ್ತು ಜಿಲ್ಲಾ ಪಂಚಾಯ್ತಿಗಳನ್ನಾದರೂ ಬಿಜೆಪಿ ಹಿಡಿಯಲೇಬೇಕು.

ಏಕೆಂದರೆ ಈ ಸಲದ ಜಿಲ್ಲಾ ಪಂಚಾಯ್ತಿ ಚುನಾವಣೆಯೆಂದರೆ ಅದು ಕೇವಲ ಬಿಜೆಪಿ ಸರ್ಕಾರದ ಅಳಿವು ಉಳಿವಿನ ಪ್ರಶ್ನೆಯಷ್ಟೇ ಅಲ್ಲ; ಮುಖ್ಯಮಂತ್ರಿಯ ಶವಪೆಟ್ಟಿಗೆಯ ಕೊನೆಯ ಮೊಳೆ ಕೂಡ!

ಜಿಲ್ಲಾ ಪಂಚಾಯ್ತಿಯಲ್ಲೇನಾದರೂ ಬಿಜೆಪಿಗೆ ಹಿನ್ನಡೆಯಾಯಿತೆಂದರೆ, ಸಹಜವಾಗೇ ಯಡ್ಡಿ ವಿರೋಧಿಗಳೆಲ್ಲ ಆಳಿಗೊಂದು ಕಲ್ಲೆತ್ತಿಕೊಳ್ಳುತ್ತಾರೆ. ಮುಖ್ಯಮಂತ್ರಿಯನ್ನು ಬದಲಾಯಿಸಬೇಕೆಂಬ ಅತೃಪ್ತರ ಆಗ್ರಹಕ್ಕೆ ರೆಕ್ಕೆಪುಕ್ಕ ಬಲಿಯುತ್ತದೆ. ಹೈಕಮಾಂಡ್ ತಿರುಗಿಬೀಳುತ್ತದೆ. ಈಗಾಗಲೇ ಮುಕ್ಕಾಲು ವಾಸಿ ನಿರ್ಜೀವವಾಗಿರುವ ಯಡ್ಡಿಯ ಮುಖ್ಯಮಂತ್ರಿಗಿರಿಗೆ ಜಿ.ಪಂ. ಸೋಲೆಂಬುದು ನಿಜಕ್ಕೂ ಶವಪೆಟ್ಟಿಗೆಯ ಕೊನೆಯ ಮೊಳೆಯೆ.

ಬೀಸೋ ದೊಣ್ಣೆ ತಪ್ಪಿಸಿಕೊಳ್ಳಬೇಕೆಂದರೆ ಶತಗತಾಯ ಜಿಲ್ಲಾ ಪಂಚಾಯ್ತಿಯನ್ನು ಜಯಿಸಲೇ ಬೇಕಾದ ಅನಿವಾರ್ಯತೆ ಮುಖ್ಯವಾಗಿದೆಯೆಂಬುದೇ ಯಡ್ಡಿಯ ಪಾಲಿಗೆ ದೊಡ್ಡ ತಲೆನೋವಾಗಿಬಿಟ್ಟಿದೆ. ಗಣಿ ರೆಡ್ಡಿಗಳು ದುಡ್ಡು ಬಿಚ್ಚುತ್ತಿಲ್ಲ. 'ದರ್ದಿರೋದು ಆತನಿಗೆ. ಸಿಎಂ ಗಿರಿ ಉಳಿಬೇಕು ಅಂದ್ರೆ ಆತನೇ ದುಡ್ಡು ಬಿಚ್ಚಬೇಕೇ ಹೊರತು ನಾವ್ಯಾಕ್ರೀ ನಮ್ಮ ಕಾಸು ಕಳಕೋಬೋಕು?'




ಹಾಗಂತ ಕಂದಾಯ ಮಂತ್ರಿ ಕರುಣಾಕರ ರೆಡ್ಡಿಯೇ ಕಂಡಕಂಡಲ್ಲಿ ಎಲೆಕ್ಷನ್ ವರಾತ ಶುರುಹಚ್ಚಿಕೊಂಡಿದ್ದಾನೆ. ಗಣಿಕಳ್ಳರ ಮಹಾರಥಿ ಕರುಣಾಕರ ರೆಡ್ಡಿಯೇ ಈ ರೀತಿ ಯಡ್ಡಿಯನ್ನು ಕುಟುಕುತ್ತಿದ್ದಾನೆಂದರೆ ಅದು ಕೇವಲ ಆತನ ವೈಯಕ್ತಿಕ ಇರಾದೆಯಂತೂ ಖಂಡಿತ ಆಗಿರಲಿಕ್ಕಿಲ್ಲ. ಜನಾರ್ದನ ರೆಡ್ಡಿ ಆದಿಯಾಗಿ ಶ್ರೀರಾಮುಲು ತನಕ ಜಿಲ್ಲಾ ಪಂಚಾಯ್ತಿ ಚುನಾವಣೆಗೆ ಸ್ವಂತ ಕಾಸನ್ನು ಬಿಚ್ಚದೇ ಯಡ್ಡಿಯ ತಿಜೋರಿಯತ್ತ ಕೈಚಾಚಿ ನಿಂತಿದ್ದಾರೆಂಬುದಕ್ಕೆ ಇದು ಮುನ್ಸೂಚನೆ ಮಾತ್ರ.


ಇನ್ನು ಪಕ್ಷದ ವಿಷಯಕ್ಕೆ ಬಂದರೆ ಇಡೀ ಸಂಘಟನೆಯ ಉಸ್ತುವಾರಿ ಹೊತ್ತ ಸಂತೋಷ್‌ಜೀ: "ಯಾರೂ ಒಂದೇ ಒಂದು ಪೈಸೆಯನ್ನು ತಮ್ಮ ಕೈಯಿಂದ ಖರ್ಚು ಮಾಡೋ ಅಗತ್ಯವಿಲ್ಲ, ಈ ಸಲದ ಎಲೆಕ್ಷನ್ನಿನ ಇಡೀ ಖರ್ಚನ್ನು ಯಡಿಯೂರಪ್ಪನವರೇ ನಿಭಾಯಿಸ್ತಾರೆ. ಏನು ಮಾಡ್ತಾರೋ ಎಲ್ಲಿಂದ ತರ್ತಾರೋ ಅದು ಅವರ ಕರ್ಮ ಸಿಎಂಗಿರಿ ಉಳಿಬೇಕು ಅಂದ್ರೆ ಅವರೇ ಕಾಸು ಬಿಚ್ಚಬೇಕು."

ಇದು ರಾಜ್ಯ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಸಂತೋಷ್‌ಜಿ ಇಟ್ಟ ಫಿಟ್ಟಿಂಗು ಮಾತ್ರವಲ್ಲ, ಆರೆಸ್ಸೆಸ್ ಅಂತರಂಗದ ಒತ್ತಾಸೆ ಕೂಡ. ಇಷ್ಟರ ಮೇಲೆ ಮುಖ್ಯಮಂತ್ರಿಗೆ ತನ್ನ ಕುರ್ಚಿ ಕಾಯುವ ಹರಕತ್ತು ಉದ್ಭವಿಸದೇ ಹೋದರೆ ಹೇಗೆ? ದಾವಣಗೆರೆಯ ಉಸ್ತುವಾರಿ ಮಂತ್ರಿ ರವೀಂದ್ರನಾಥ್ ಈಗಾಗಲೇ ಜಿ.ಪಂ. ಎಲೆಕ್ಷನ್ ಖರ್ಚಿಗೆಂದು 'ಕನಿಷ್ಠ ಐದು ಕೋಟಿಯಾದರೂ ಬೇಕೇಬೇಕು' ಎಂದು ದಿನಬೆಳಗ್ಗೆಯಾದರೆ ಯಡ್ಡಿಗೆ ದುಂಬಾಲು ಬೀಳುತ್ತಿದ್ದಾರಂತೆ. ಕೊಡಗು ಉಸ್ತುವಾರಿ ಹೊತ್ತ ವಿಜಯಶಂಕರ್ ಕೂಡ 'ನಾನೆಲ್ಲಿಂದ ದುಡ್ಡು ತರಲಿ? ನೀವೇನಾದ್ರೂ ಮನಸ್ಸು ಮಾಡಿದರಷ್ಟೇ ಕೊಡಗಿನಲ್ಲಿ ಪಾರ್ಟಿಯ ಮಾನ ಕಾಪಾಡಲು ಸಾಧ್ಯ' ಎಂದು ಮುಖ್ಯಮಂತ್ರಿಯೆದುರು ಕೈಚೆಲ್ಲಿಬಿಟ್ಟಿದ್ದಾರಂತೆ.

ಮುಖ್ಯಮಂತ್ರಿಯ ಪರಮಾಪ್ತ ಮಂತ್ರಿಗಳ ಪೈಕಿ ಎರಡನೇ ಸ್ಥಾನದಲ್ಲಿರುವ ಬಸವರಾಜ ಬೊಮ್ಮಾಯಿಯೇ ತಮ್ಮ ಉಸ್ತುವಾರಿಕೆಯಲ್ಲಿರುವ ಗುಲ್ಬರ್ಗಕ್ಕೆ ನಯಾಪೈಸೆ ಬಿಚ್ಚುತ್ತಿಲ್ಲ. 'ಹೆಸರಿಗಷ್ಟೇ ನಾನು ಮಂತ್ರಿ. ಇಲಾಖೆಯ ಆಪ್ಟೂ ಆಮದನಿಯನ್ನೆಲ್ಲ ಸಿಎಂ ಮಗ ವಿಜಯೇಂದ್ರನಿಗೇ ಒಪ್ಪಿಸಿಬಿಟ್ಟೀನಿ. ನನ್ನ ಹತ್ರ ರೊಕ್ಕ ಎಲ್ಲೈತ್ರೀ. ಸಿಎಂ ಸಾಹೇಬ್ರನ್ನೇ ಕೇಳ್ರಲ್ಲಾ...!' ಎಂದು ಗುಲ್ಬರ್ಗಾದ ಲೋಕಲ್ ಬಿಜೆಪಿಗಳಿಗೆ ಖಂಡಾತುಂಡಾ ಹೇಳಿಬಿಟ್ಟರಂತೆ ಬಸೂ ಬೊಮ್ಮಾಯಿ.


ಹಾವೇರಿ ಜಿಲ್ಲೆಯ ಹೊಣೆ ಹೊತ್ತ ಉದಾಸಿಯದೂ ಇದೇ ಪಾಡು. ನಾಮಕಾವಸ್ತೆಗಷ್ಟೇ ನಾನು ಮಂತ್ರಿ, ಮಿಕ್ಕಿದ್ದನ್ನೆಲ್ಲ ಸಿಎಂ ಸಾಹೇಬ್ರಿಗೇ ಬಿಟ್ಟು ಬಿಟ್ಟೀನಿ. ಜಿಲ್ಲಾ ಪಂಚಾಯ್ತಿ



ಎಲೆಕ್ಷನ್ನಿಗೆ ಅವರು ಮನಸ್ಸು ಮಾಡಿದರಷ್ಟೇ ಏನಾರ ಮಾಡಬಹುದು. ರೊಕ್ಕ ನಾನೆಲ್ಲಿಂದ ತರ್‍ಲೀ...?"

ಕೊಪ್ಪಳ ಜಿಲ್ಲಾ ಉಸ್ತುವಾರಿ ಮಂತ್ರಿ ಲಕ್ಷ್ಮಣ ಸವದಿ, ಬಿಜಾಪುರದ ಹೊಣೆ ಹೊತ್ತ ಮುರುಗೇಶ್ ನಿರಾಣಿ, ಚಿಕ್ಕಮಗಳೂರು ಜಿಲ್ಲೆಯ ಹೊಣೆ ಹೊತ್ತ ಸುರೇಶ್‌ಕುಮಾರ್ ಬೀದರ್‌ನ ಮೇಜುವಾಣಿಗೆ ನಿಂತ ಬೆಳಮಗಿ, ಗದಗ ಜಿಲ್ಲೆಗೆ ಉಸ್ತುವಾರಿಕೆಯಲ್ಲಿರುವ ಸಿ.ಸಿ. ಪಾಟೀಲ್, ಇತ್ಯಾದಿ ಯಡ್ಡಿ ಸಂಪುಟದ ಅನೇಕ ಜಿಲ್ಲಾ ಉಸ್ತುವಾರಿ ಮಂತ್ರಿಗಳ್ಯಾರೂ ತಮ್ಮ ಕೈಯಾರೇ ನಯಾಪೈಸೆ ಬಿಚ್ಚಲು ಸಿದ್ಧರಿಲ್ಲ. ಪ್ರತಿಯೊಬ್ಬರೂ ಎಲೆಕ್ಷನ್ ಖರ್ಚಿಗಾಗಿ ಮುಖ್ಯಮಂತ್ರಿಯನ್ನೇ ಚಾತಕಪಕ್ಷಿಗಳಂತೆ ಕಾಯುತ್ತಿದ್ದಾರೆ.



ಬಳ್ಳಾರಿಯ ಉಸ್ತುವಾರಿ ಜನಾರ್ದನ ರೆಡ್ಡಿಯಾಗಲಿ, ರಾಯಚೂರು ಜಿಲ್ಲೆಗೆ ಗಂಟುಬಿದ್ದ ಶ್ರೀರಾಮುಲು ಆಗಲಿ ಮತ್ತು ಕರುಣಾಕರ ರೆಡ್ಡಿಯಾಗಲಿ ಈ ಬಾರಿ ನಯಾಪೈಸೆ ಬಿಚ್ಚುತ್ತಿಲ್ಲ. ಯಾದಗಿರಿ ಜಿಲ್ಲೆಯ ಉಸ್ತುವಾರಿ ಮಂತ್ರಿ ಮಮ್ತಾಜ್ ಆಲಿ ಖಾನ್ ಈಗಾಗಲೇ ಟಿಕೆಟ್ ಆಕಾಂಕ್ಷಿಗಳನ್ನೆಲ್ಲ ಕರೆದು 'ನೋಡ್ರಪ್ಪಾ ಪಕ್ಷದಿಂದ ನಯಾಪೈಸೆಯನ್ನೂ ನಿರೀಕ್ಷಿಸಬೇಡಿ. ನಮ್ಮದು ಆರೆಸ್ಸೆಸ್ ಸಿದ್ಧಾಂತ. ಖರ್ಚು ಮಾಡೋ ತಾಕತ್ತಿದ್ದರಷ್ಟೇ ಪಾರ್ಟಿ ಟಿಕೆಟ್ ಕೇಳಿ' ಎಂದು ಲಜ್ಜೆಗೆಟ್ಟು ಹೇಳಿಬಿಟ್ಟರಂತೆ.

ಇದ್ದುದರಲ್ಲಿ ಚಿಕ್ಕಬಳ್ಳಾಪುರದ ಉಸ್ತುವಾರಿ ಮಂತ್ರಿಣಿ ಶೋಭಾ ಕರಂದ್ಲಾಜೆಯೇ ಪರವಾಗಿಲ್ಲ. ಚೂರುಪಾರು ಕಾಸು ಹೊಂದಿಸಿಕೊಂಡು ಟಿಕೆಟ್ ಆಕಾಂಕ್ಷಿಗಳಿಗೆ ಧೈರ್ಯ ಕೊಟ್ಟಿದ್ದಾರಂತೆ. ಉತ್ತರ ಕನ್ನಡದ ಕಾಗೇರಿ ಮತ್ತು ಉಡುಪಿಯ ಉಸ್ತುವಾರಿ ಆಚಾರ್ಯರದ್ದೂ ಮಾಮೂಲಿಯ ಬರಗೆಟ್ಟ ವರಸೆಯೆ. ಹಾಗೊಮ್ಮೆ ತುಮಕೂರು ಮತ್ತು ಹಾಸನದ ಹೊಣೆ ಹೊತ್ತ ಸೋಮಣ್ಣ ಅಷ್ಟಿಷ್ಟು ಕಾಸು ಹೊಂಚಬಹುದಾದರೂ ತನ್ನ ಕೈಯಿಂದ ಖಂಡಿತ ಕಾಸು ಬಿಚ್ಚಲಾರ ಎಂಬುದು ಜಗಜ್ಜಾಹಿರ. ಹೀಗಾಗಿ ಯಡ್ಡಿ ಈ ಬಾರಿ ಕೂಡಿಟ್ಟ ಕಾಸಿನ ಒಂದು ಪಾಲನ್ನಾದರೂ ಬಿಚ್ಚಲೇಬೇಕು.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಯ ಜಂಟಿ ಜವಾಬ್ದಾರಿ ಹೊತ್ತ ಬಚ್ಚೇಗೌಡ ಈಗಾಗಲೇ ರಿಯಲ್ ಎಸ್ಟೇಟ್ ಖದೀಮರನ್ನೆಲ್ಲ ಕರೆಸಿಕೊಂಡು ಪಂಚಾಯ್ತಿ ಫಂಡಿಗೆ ಅರ್ಜಿ ಹಾಕಿದ್ದಾರಂತೆ. ಬೆಂಗಳೂರು ದಕ್ಷಿಣ ಮತ್ತು ಉತ್ತರದ ಎರಡೂ ಹೊಣೆಗಾರಿಕೆ ವಹಿಸಿಕೊಂಡಿರು ಅಶೋಕ್‌ಗೆ ಮಾತ್ರ ಕಾಸು ಬಿಚ್ಚಲೇಬೇಕಾದ ಉಭ ಸಂಕಟ. ಬಿಚ್ಚದೇ ಹೋದರೆ ಕಾರ್ಯಕರ್ತರೇ ಕ್ಯಾಕರಿ ಉಗಿಯುತ್ತಾರೆ!

ದ.ಕ. ಉಸ್ತುವಾರಿ ಮಂತ್ರಿ ಕೃಷ್ಣ ಪಾಲೇಮಾರ ಬೆಳಗಾವಿಯ ಉಮೇಶ್ ಕತ್ತಿ ಧಾರವಾಡದ ಶೆಟ್ಟರ್; ಕನಿ ತಮ್ಮ ಬೆಂಬಲಿಗರಿಗೆಂದಾದರೂ ಕಾಸು ಬಿಚ್ಚಲೇಬೇಕ ಮಿಕ್ಕಂತೆ ಇಡೀ ಪಕ್ಷದ ಎಲೆಕ್ಷನ್ ಖರ್ಚೆಲ್ಲ ಅನಿವಾರ್ಯವಾ ಯಡ್ಡಿ ತಲೆ ಮೇಲೆ ಬಿದ್ದಿದೆ. ಪ್ರತಿ ಜಿಲ್ಲೆಗೆ ಕನಿಷ್ಠ ಎರಡ ಕೋಟಿಯನ್ನಾದರೂ ಕೊಟ್ಟೇ ಕೊಡ್ತೀನಿ ಎಂದು ಈಗಾಗ ಯಡ್ಡಿ ಪಕ್ಷದ ಪ್ರಮುಖರಿಗೆ ಮಾತು ಕೊಟ್ಟಿದ್ದಾರಂ ಇದರ ಹೊರತಾಗಿಯೂ ಶಿವಮೊಗ್ಗದ ಬಹುತೇಕ ಬಿಜೆ ಅಭ್ಯರ್ಥಿಗಳ ಖರ್ಚುವೆಚ್ಚವನ್ನೆಲ್ಲ ಮುಖ್ಯಮಂತ್ರಿಯೆ ನಿಭಾಯಿಸಬೇಕು.

ತಲಾ ಜಿಲ್ಲೆಗೆ ಕನಿಷ್ಠ ಎರಡು ಕೋಟಿಯಂತೆ ಲೆ ಹಾಕಿದರೂ ಅದೇ 60 ಕೋಟಿಯಾಗುತ್ತದೆ. ರಾಜ್ಯಾದ್ಯ ವಿವಿಧ ದಿನಪತ್ರಿಕೆಗಳು ಮತ್ತು ಟೀವಿ ಜಾಹೀರಾತಿಗೆಂದ 20 ಕೋಟಿಯನ್ನು ಯಡ್ಡಿ ಎತ್ತಿಟ್ಟಿದ್ದಾರಂತೆ. ಆರೆಸ್ಸೆ ಮುಖವಾಣಿಯಾದ ಹೊಸದಿಗಂತ ಮತ್ತು ಸ್ವಯಂ ಆರೆಸ್ಸೆ ಕಾರ್ಯಕರ್ತನಾದ ಸುದೀಪ್ ಘಾಟೆ ಎಂಬಾತನ ಒಡೆತನ ಮ್ಯಾಗ್ನಮ್ ಇನ್‌ಫೋಜಾಕ್ ಈ ಜಾಹೀರಾತು ಕಾಳಗ ಹೊಣೆ ಹೊತ್ತುಕೊಂಡಿವೆ.

ಸದ್ಯ ಜಾಹೀರಾತಿಗೆಂದೇ 20 ಕೋಟಿ ಸುರಿಯಬ ತಾಕತ್ತು ಜೆಡಿಎಸ್‌ಗಾಗಲಿ, ಕಾಂಗ್ರೆಸ್ಸಿಗಾಗಲಿ ಖಂಡಿತ ಇ ಇದಲ್ಲದೇ ಹದಿನೇಳು ಮಂದಿ ಅತೃಪ್ತ ಮತ್ತು ಅನರ್ಹ ಶಾಸಕರಂತೂ ಬಿಜೆಪಿ ಪಾಲಿಗೆ ದೊಡ್ಡ ತಲೆನೋವಾಗಿದ್ದಾ ಅದೆಷ್ಟೇ ಕೋಟಿ ಖರ್ಚಾದರೂ ಸರಿ ನನ್ನ ಕ್ಷೇತ್ರದ ಬಿಜೆಪಿಯನ್ನು ಗೆಲ್ಲಲು ಬಿಡೋಲ್ಲ ಎಂದು ಮಾಜಿ ಮಂ ಬಾಲಚಂದ್ರ ಜಾರಕಿಹೊಳಿ ತೊಡೆತಟ್ಟಿದ್ದಾರೆ. ಇದನ ವಿಫಲಗೊಳಿಸಲೆಂದೇ ಯಡ್ಡಿ ಖುದ್ದಾಗಿ ಜಾರಕಿಹೊಳಿಯ ಅರಬಾವಿ ಕ್ಷೇತ್ರಕ್ಕೆ ಬಂದು ಪ್ರಚಾರ ಆರಂಭಿಸಿದ್ದಾರೆ.

ಜಾರಕಿಹೊಳಿ ಸಹಜವಾಗೇ ತನ್ನ ಮಾತೃಪಕ್ಷವಾ ಜೆಡಿಎಸ್ ಅನ್ನು ಬೆಂಬಲಿಸಬಹುದು. ಜೊತೆಗೆ ಶಿವನಗೌ ನಾಯಕ್, ಗೂಳಿಹಟ್ಟಿ ಶೇಖರ್ ಕೂಡ ತವ ಪೂರ್ವಾಶ್ರಮವಾದ ಜೆಡಿಎಸ್ ಅನ್ನೇ ಗೆಲ್ಲಿಸಲ ಹೆಣಗಾಡಬಹುದು. ಶಿವರಾಜ್ ತಂಗಡಗಿ, ಮೈಸೂರಿ ಶಂಕರಲಿಂಗೇಗೌಡ, ಮಾನಪ್ಪ ವಜ್ಜಲ್, ಬೇಲೂರು ಸಾರ್ವಭೌಮ ಬಗಲಿ, ನೆಲಮಂಗಲದ ನಾಗರಾಜ್ ಮುಂತಾದ ಅನರ್ಹ ಶಾಸಕರೆಲ್ಲ ವಿಧಿಯಿಲ್ಲದೇ ಜೆಡಿಎಸ್ ಬೆಂಬಲಕ್ಕೆ ನಿಲ್ಲಲಿದ್ದಾರೆ ಉಳಿದಂತೆ ಕಾರವಾರದ ಆನಂದ ಅಸ್ನೋಟಿಕರ್, ಪಾವಗಡದ ವೆಂಕ ರಮಣಪ್ಪ, ಮಳವಳ್ಳಿಯ ನರೇಂದ್ರ ಸ್ವಾಮಿ ಮತ್ತು ಕೆಜಿಎಫ್‌ನ ಸಂಪಂಗಿಗೆ ಕಾಂಗ್ರೆ ಆಸರೆ ಬಿಟ್ಟರೆ ಬೇರೆ ಗತಿಯಿಲ್ಲ.

ಹದಿನೇಳು ಮಂದಿ ಅನರ್ಹ ಶಾಸಕರ ಈ ಬಾರಿ ಬಿಜೆಪಿಗೆ ದೊಡ್ಡ ನಷ್ಟವನ್ನಂತೂ ಖಂಡಿತಾ ಮಾಡೇ ತೀರುತ್ತಾರೆ. ಇಂ ರೊಚ್ಚಿಗೆದ್ದ ಶಾಸಕರನ್ನು ದಮನಿಸಲೆಂದೇ ಯ ವಿಶಿಷ್ಟ ಕಾರ್ಯಾಚರಣೆಯೊಂದನ ಆರಂಭಿಸಿದ್ದಾರೆ. ಆ ಪ್ರಕಾರ ಅನರ್ಹ ಶಾಸ ಕ್ಷೇತ್ರದ ಪ್ರತಿ ಬಿಜೆಪಿ ಅಭ್ಯರ್ಥಿಗೂ ತಲಾ ಐವತ್ತು ಲಕ್ಷದಂ ಪಾರ್ಟಿ ಫಂಡ್ ಕೊಡುತ್ತಾರಂತೆ. ಈ ರೀತಿ ಕನಿಷ್ಠ 5 ಮಂದಿ ಅಭ್ಯರ್ಥಿಗಳಿಗೆ ತಲಾ 50 ಲಕ್ಷದಂತೆ ಕೊಟ್ಟರು ಅದೇ 25 ಕೋಟಿಯಾಗುತ್ತದೆ. ಜೊತೆಗೆ ಬೇಕಾಬಿಟ್ಟಿ ಲಿಕ್ಕ ಹಂಚಲು ಅಬಕಾರಿ ಮಂತ್ರಿ ರೇಣುಕಾಚಾರ್ಯನನ್ನು ಛ ಬಿಟ್ಟಿದ್ದಾರಂತೆ!

ತಾನೇ ಉಸ್ತುವಾರಿ ಮಂತ್ರಿಯಾಗಿರುವ ಚಾಮರಾ ನಗರದಲ್ಲಿ ಈ ಬಾರಿ ವಿಸ್ಕಿ ರಮ್ಮಿನ ಹೊಳೆಯನ ಹರಿಸಲು ರೇಣುಕಾಚಾರ್ಯ ಫೀಲ್ಡಿಗಿಳಿದಿದ್ದಾನೆ. ಎತ್ತಿಂದ ಲೆಕ್ಕ ಹಾಕಿದರೂ ಈ ಸಲದ ಜಿಲ್ಲಾ ಪಂಚಾಯ್ತಿ ಮತ ತಾಲ್ಲೂಕು ಪಂಚಾಯ್ತಿ ಚುನಾವಣೆಗೆಂದು ಮುಖ್ಯಮಂ ಯಡ್ಡಿ ಕನಿಷ್ಠ 200 ಕೋಟಿಯನ್ನು ಎತ್ತಿಡಲೇಬೇಕು. ತ ಮುಖ್ಯಮಂತ್ರಿ ಕುರ್ಚಿಯನ್ನು ಭದ್ರ ಪಡಿಸಿಕೊಳ್ಳುವುದಕ್ಕಾದರ ಯಡ್ಡಿ ಹೊಡೆದ ಕೊಳ್ಳೆಯ ಒಂದು ಪಾಲನ್ನು ಸುರಿಯಲೇ ಬೇಕು.

ಕೊಟ್ಟಿದ್ದು ಹೈಕಮಾಂಡಿಗೆ ಬಿಚ್ಚಿಟ್ಟಿದ್ದು ಜಿಲ್ಲಾ ಪಂಚಾಯ್ತಿಗೇ!

• ರಾ. ಸೋಮನಾಥ

ಪ್ರತಿ ಜಿಲ್ಲೆಗೆ 2 ಕೋಟಿ, ತಲಾ ಅಭ್ಯರ್ಥಿಗೆ 50 ಲಕ್ಷ!

ಹದಿನೇಳು ಮಂದಿ ಅನರ್ಹ ಶಾಸಕರು ಈ ಬಾರಿ ಬಿಜೆಪಿಗೆ ದೊಡ್ಡ ನಷ್ಟವನ್ನಂತೂ ಖಂಡಿತಾ ಮಾಡೇ ತೀರುತ್ತಾರೆ. ಇಂಥ ರೊಚ್ಚಿಗೆದ್ದ ಶಾಸಕರನ್ನು ದಮನಿಸಲೆಂದೇ ಯಡ್ಡಿ ವಿಶಿಷ್ಟ ಕಾರ್ಯಾಚರಣೆಯೊಂದನ್ನು ಆರಂಭಿಸಿದ್ದಾರೆ. ಆ ಪ್ರಕಾರ ಅನರ್ಹ ಶಾಸಕರ ಕ್ಷೇತ್ರದ ಪ್ರತಿ ಬಿಜೆಪಿ ಅಭ್ಯರ್ಥಿಗೂ ತಲಾ ಐವತ್ತು ಲಕ್ಷದಂತೆ ಪಾರ್ಟಿ ಫಂಡ್ ಕೊಡುತ್ತಾರಂತೆ. ಈ ರೀತಿ ಕನಿಷ್ಠ 50 ಮಂದಿ ಅಭ್ಯರ್ಥಿಗಳಿಗೆ ತಲಾ 50 ಲಕ್ಷದಂತೆ ಕೊಟ್ಟರೂ ಅದೇ 25 ಕೋಟಿಯಾಗುತ್ತದೆ.

ತಾ.ಪಂ.ಗೆಂದೇ ಮತ್ತೆ 150 ಕೋಟಿ!


ಸದ್ಯ ಬಿಜೆಪಿ ಅಂತರಂಗದಲ್ಲೇ ಚಾಲ್ತಿಯಲ್ಲಿರುವ ಲೆಕ್ಕಾಚಾರವೊಂದು ಹೀಗಿದೆ. ಆ ಪ್ರಕಾರ ರಾಜ್ಯದ 1005 ಜಿ.ಪಂ. ಕ್ಷೇತ್ರಗಳ ಪೈಕಿ ಬಂಡುಕೋರ ಅನರ್ಹ ಶಾಸಕರ ಕ್ಷೇತ್ರದ ಪ್ರತಿ ಜಿ.ಪಂ. ಬಿಜೆಪಿ ಅಭ್ಯರ್ಥಿಗೆ ಕೊಡುವ 50 ಲಕ್ಷದ ಹೊರತಾಗಿಯೂ ಉಳಿದಂತೆ ತಲಾ ಬಿಜೆಪಿ ಅಭ್ಯರ್ಥಿಯೊಬ್ಬನಿಗೆ ಯಡ್ಡಿ 10 ಲಕ್ಷ ರೂಪಾಯಿ ಎತ್ತಿಟ್ಟಿದ್ದಾರಂತೆ.

ಇದೇ ನೂರು ಕೋಟಿಯಾಗುತ್ತದೆ. ಇದಲ್ಲದೇ 3400 ಕ್ಕೂ ಅಧಿಕ ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳ ಬಿಜೆಪಿಯ ಲೆಕ್ಕಾಚಾರವೇ ಬೇರೆಯಿದೆ. ಪ್ರತಿ ತಾಲ್ಲೂಕು ಪಂಚಾಯ್ತಿ ಅಭ್ಯರ್ಥಿಯೊಬ್ಬನಿಗೆ ಕನಿಷ್ಠ 5 ಲಕ್ಷ ರೂಪಾಯಿಗಳಷ್ಟು ಪಾರ್ಟಿ ಫಂಡು ಗ್ಯಾರಂಟಿಯಂತೆ. ಕನಿಷ್ಠ ಮೂರು ಸಾವಿರ ಮಂದಿ ಬಿಜೆಪಿ ಅಭ್ಯರ್ಥಿಗಳಿಗೆ ತಲಾ ಐದು ಲಕ್ಷದಂತೆ ಲೆಕ್ಕ ಹಾಕಿದರೆ ಅದು ನೂರೈವತ್ತು ಕೋಟಿಯಷ್ಟಾಗುತ್ತದೆ.

ಅಲ್ಲಿಗೆ ಜಿ.ಪಂ. ಮತ್ತು ತಾ.ಪಂ.ನ ಪ್ರತಿ ಬಿಜೆಪಿ ಅಭ್ಯರ್ಥಿಯ ಎಲೆಕ್ಷನ್ ಫಂಡೆಂದು ಕನಿಷ್ಠ 250 ಕೋಟಿಯಷ್ಟನ್ನಾದರೂ ಯಡ್ಡಿ ಎತ್ತಿಡಲೇಬೇಕು. ಅಭ್ಯರ್ಥಿಗಳ ಚುನಾವಣಾ ಖರ್ಚೆಂದೇ ಈ ಪಾಟಿ ಫಂಡು ಬಂದಮೇಲೆ ಉಳಿಕೆ ಪ್ರಚಾರ, ಪ್ರವಾಸ, ಲಿಕ್ಕರ್, ಜಾಹೀರಾತು ಎಂದು ಇನ್ನೆಷ್ಟು ದುಡ್ಡು ಸುರಿಯಬೇಡ? ಈ ಪ್ರಕಾರವೇ ಆದರೆ ಬಿಜೆಪಿಯ ಚುನಾವಣಾ ವೆಚ್ಚ 200 ಕೋಟಿಯಿಂದ 300 ಕೋಟಿಗೇರುತ್ತದೆ. ಇಷ್ಟೆಲ್ಲ ಖರ್ಚಿಗೆ ಮುಖ್ಯಮಂತ್ರಿ ಇನ್ಯಾವ ಹಗರಣಕ್ಕೆ ಕೈಇಟ್ಟು ಸಿಕ್ಕಿಬೀಳುತ್ತಾರೋ ಬಲ್ಲವರ್‍ಯಾರು?

ಗಣಿ ರೆಡ್ಡಿಗಳ ಕೊರಳಿಗೆ ಸಿಬಿಐ ಉರುಳು

ಕರ್ನಾಟಕದ ಭೂ ಸಂಪತ್ತಿನ ರಕ್ಷಣೆ ಬಗ್ಗೆ ಪದೇಪದೇ ವೇದಿಕೆಯಲ್ಲಿ ಬೊಬ್ಬೆ ಹೊಡೆದ ಮುಖ್ಯಮಂತ್ರಿ ಯಡ್ಡಿಗೆ ಸುಪ್ರೀಂ ಕೋರ್ಟೇ ಛೀಮಾರಿ ಹಾಕುವ ಕಾಲಕೂಡಿ ಬಂದಿದೆ. ಹೊಸಪೇಟೆ ಶಾಸಕ ಆನಂದ್ ಸಿಂಗ್ ಬೇನಾಮಿಯಾಗಿ ಅದಿರು ದೋಚುವ ರತ್ನಯ್ಯ ಶೆಟ್ಟಿಯ ಮೈನಿಂಗ್ ಲೈಸೆನ್ಸಿಗೆ ಮುಖ್ಯಮಂತ್ರಿ ಯಡ್ಡಿಯೇ ನಿಂತು ರಾಜ್ಯ ಸರ್ಕಾರದ ಪರವಾನಗಿ ಕೊಡಿಸಿದ್ದು ಕೂಡ ಬಟ್ಟಂಬಯಲಾಗಿದೆ.



ಇದೆಲ್ಲಕ್ಕಿಂತಲೂ ಮುಖ್ಯಮಂತ್ರಿ ಯಡ್ಡಿ ಮತ್ತು ಗಣಿಕಳ್ಳ ರೆಡ್ಡಿಗಳ ಪಾಲಿಗೆ ಆಘಾತಕಾರಿಯಾದದ್ದು ಓಬಳಾಪುರಂ ಮೈನಿಂಗ್ ಕಂಪನಿಯ ಅಕ್ರಮಗಳ ತನಿಖೆಗೆ ಸಂಬಂಧಪಟ್ಟಂತೆ ಸಿಬಿಐ ವಿರುದ್ಧ ಹೈದರಾಬಾದ್ ಹೈಕೋರ್ಟ್ ನೀಡಿದ್ದ ತಡೆಯಾಜ್ಞೆಯನ್ನು ಇವತ್ತು ಅಂದರೆ 2010ರ ಡಿಸೆಂಬರ್ 16ರಂದು ಅದೇ ಹೈದರಾಬಾದ್ ಹೈಕೋರ್ಟಿನ ದ್ವಿಸದಸ್ಯ ಪೀಠ ತೆರವುಗೊಳಿಸಿರುವುದು.

ಈ ವರದಿಯನ್ನು ಬರೆಯುವ ಕೊನೇ ಕ್ಷಣಕ್ಕೆ ಬಂದ ಸುದ್ದಿಯಂತೆ ಓಬಳಾಪುರಂ ಮೈನಿಂಗ್ ಕಂಪನಿಯ ಅಕ್ರಮ ಅದಿರು ಲೂಟಿಯ ವಿರುದ್ಧ ಸಿಬಿಐ ಆರಂಭಿಸಿದ್ದ ತನಿಖೆಗೆ ಕೊಟ್ಟಿದ್ದ ತಡೆಯಾಜ್ಞೆಯನ್ನು ಆಂಧ್ರ ಹೈಕೋರ್ಟ್ ತೆರವುಗೊಳಿಸುವ ಮೂಲಕ ಗಣಿ ರೆಡ್ಡಿಗಳ ಕೊರಳಿನ ಕುಣಿಕೆ ಬಿಗಿಯಾಗುತ್ತಿದೆ. ಸಿಬಿಐ ಯಾವ ಕ್ಷಣಕ್ಕಾದರೂ ಮಂತ್ರಿ ಜನಾರ್ದನ ರೆಡ್ಡಿಯನ್ನೂ, ಆರೋಗ್ಯ ಮಂತ್ರಿ ಶ್ರೀರಾಮುಲು ಮತ್ತು ಕಂದಾಯ ಮಂತ್ರಿ ಕರುಣಾಕರ ರೆಡ್ಡಿಯ ಸಮೇತ ಬಂಧಿಸಬಹುದು. ಆಂಧ್ರ-ಕರ್ನಾಟಕ ಗಡಿಯ ಅದಿರು ಲೂಟಿಗೆ ಸಂಬಂಧಪಟ್ಟಂತೆ ಸಿಬಿಐನ ಕೈಗಳಿಗಿನ್ನು ಮುಕ್ತ ಸ್ವಾತಂತ್ರ್ಯ...



ಒಮ್ಮೆ ಸಿಬಿಐ ರೆಡ್ಡಿಯ ಹೆಗಲಿಗೆ ಕೈ ಹಾಕಿತೆಂದರೆ ಸಹಜವಾಗೇ ಅದು ಮುಖ್ಯಮಂತ್ರಿಯ ಬುಡಕ್ಕೆ ಬಂದು ನಿಲ್ಲುತ್ತದೆ. ಏಕೆಂದರೆ ಸುಪ್ರೀಂ ಕೋರ್ಟ್ ನೇಮಿಸಿದ ಕೇಂದ್ರ ಉನ್ನತಾಧಿಕಾರ ಸಮಿತಿಯೇ (ಸಿಇಸಿ) ಯಡ್ಡಿ ಸರ್ಕಾರಕ್ಕೆ ಛೀಮಾರಿ ಹಾಕಿದೆ. 2010ರ ಅಕ್ಟೋಬರ್ 18ರಂದು ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ ಅಧಿಕಾರಿ ಉಮಾಕಾಂತ್ ರಾಜ್ಯ ಸರ್ಕಾರಕ್ಕೆ ಬರೆದ ಪತ್ರವೊಂದೇ ಸಾಕು; ಮುಖ್ಯಮಂತ್ರಿಗೆ ಅದಕ್ಕಿಂತ ಛೀಮಾರಿ ಬೇಕಿಲ್ಲ.

ಅದು ವಿಠಲಾಪುರದ ಸರ್ವೆ ನಂಬರ್ 1ರಲ್ಲಿ ರತ್ನಯ್ಯ ಶೆಟ್ಟಿಯ ಗಣಿಗಾರಿಕೆ ಲೈಸೆನ್ಸ್‌ಗೆ ಕೇಂದ್ರ ಸರ್ಕಾರ ಮಂಜೂರಾತಿ ನೀಡುವಂತೆ ಆಗ್ರಹಿಸಿ ರಾಜ್ಯ ಸರ್ಕಾರ ಮಾಡಿದ ಶಿಫಾರಸ್ಸಿಗೆ ಕೇಂದ್ರ ಸರ್ಕಾರ ಕ್ಯಾಕರಿಸಿ ಉಗಿದಂತಿತ್ತು.

2010ರ ಅಕ್ಟೋಬರ್ 18ರಂದು ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯ ರಾಜ್ಯ ಸರ್ಕಾರಕ್ಕೆ ನೀಡಿದ ಸುತ್ತೋಲೆಯ ಒಕ್ಕಣೆಯೇ **Moratorium on fresh mining lease application in Bellary of Karnataka** ಎಂದಿತ್ತು, ಅದರರ್ಥ ಹೊಸ ಗಣಿಕಾರಿಕೆ ಅರ್ಜಿಗಳಿಗೆ ಯಾವುದೇ ಅವಕಾಶಗಳಿಲ್ಲ.

ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಅಕ್ಟೋಬರ್ 18ರ ಪತ್ರದ ಪ್ರಕಾರ "ಇತ್ತೀಚೆಗೆ ಕರ್ನಾಟಕದ ಬಳ್ಳಾರಿಯಲ್ಲಿ ಅವ್ಯಾಹತ ಅಕ್ರಮ ಗಣಿಗಾರಿಕೆ ಕುರಿತಂತೆ ಅನೇಕ ದೂರುಗಳು ಬಂದಿವೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರ ಪದೇಪದೇ ರಾಜ್ಯ ಸರ್ಕಾರಕ್ಕೆ ಒತ್ತಾಯಿಸುತ್ತಿದ್ದರೂ ಈಗ ಮತ್ತೆ ಹೊಸ ಗಣಿಗಾರಿಕೆ ಪರವಾನಗಿಗೆ ಒತ್ತಾಯಿಸುತ್ತಿರುವುದು ವಿಷಾದನೀಯ. ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾವುದೇ ಹೊಸ ಗಣಿಗಾರಿಕೆಗೆ ಅವಕಾಶ ನೀಡದೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಈ ಕ್ಷಣದಿಂದಲೇ ಕೇಂದ್ರ ನಿರ್ಧಾರ ಕೈಗೊಂಡಿದೆ."

ಮುಖ್ಯಮಂತ್ರಿಗಿದು ಕೇಂದ್ರ ಸರ್ಕಾರ ಹಾಕಿದ ಪರೋಕ್ಷ ಛೀಮಾರಿ ಆಗಿತ್ತು, ಈತನಕ ನಡೆದಿರುವ ಅಕ್ರಮಗಳ ಬಗ್ಗೆ ಯಾವುದೇ ತನಿಖೆ ನಡೆಸದೆ, ಅದಿರು ಲೂಟಿಯ ವಿರುದ್ಧ ಏನೇನೂ ಕ್ರಮ ಕೈಗೊಳ್ಳದೆ ಈಗ ರತ್ನಯ್ಯ ಶೆಟ್ಟಿಯ ಹೊಸ ಗಣಿಗಾರಿಕೆಗೆ ಪರವಾನಗಿ ಕಲ್ಪಿಸುವಂತೆ ರಾಜ್ಯ ಸರ್ಕಾರ ಶಿಫಾರಸ್ಸು ಮಾಡುತ್ತದೆ ಎಂದರೆ ಕೇಂದ್ರ ಸರ್ಕಾರ ತಾನೇ ಇನ್ಯಾವ ರೀತಿಯಲ್ಲಿ ಉಗಿಯಲು ಸಾಧ್ಯ?

ಗಣಿ ಲೂಟಿಯ ವಿರುದ್ಧ ಇಷ್ಟೆಲ್ಲ ಪ್ರತಿಭಟನೆಗಳು ನಡೆದು, ಆಂಧ್ರ ಸರ್ಕಾರ ಅದನ್ನು ಸಿಬಿಐ ತನಿಖೆಗೆ ವಹಿಸಿ, ಕರ್ನಾಟಕದಲ್ಲಿ ಕಾಂಗ್ರೆಸ್ ಪಾದಯಾತ್ರೆಯ ಮೂಲಕ ಬೀದಿಗಿಳಿದ ಮೇಲೂ ಮುಖ್ಯಮಂತ್ರಿ ಯಡ್ಡಿ ಮತ್ತೆ ರತ್ನಯ್ಯ ಶೆಟ್ಟಿಗೆ ಗಣಿ ಲೈಸೆನ್ಸ್ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತಾರೆ. 2010 ಸೆಪ್ಟೆಂಬರ್ 29ರಂದು ಕರ್ನಾಟಕದ ಅರಣ್ಯ ಮತ್ತು ಪರಿಸರ ಖಾತೆಯ ಅಂಡರ್ ಸೆಕ್ರೆಟರಿ ಎಚ್.ಎಂ. ಮಲ್ಲಿಕಾರ್ಜುನ ಸ್ವಾಮಿಯ ಮೂಲಕ ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್‌ಗೆ ಸಲ್ಲಿಸಲಾದ ಶಿಫಾರಸ್ಸು ಪತ್ರದ ಸಾರಾಂಶವೆಂದರೆ ಬಳ್ಳಾರಿ ಜಿಲ್ಲೆಯ ವಿಠಲಾಪುರ ಗ್ರಾಮದ ಸರ್ವೆ ನಂಬರ್ 1 ರಲ್ಲಿ ಎನ್. ರತ್ನಯ್ಯ ಎಂಬಾತನಿಗೆ ರಾಜ್ಯ ಸರ್ಕಾರ ನೀಡಿದ ಗಣಿ ಲೈಸೆನ್ಸ್ ಎಂಎಲ್.ನಂ. 670ಅನ್ನು ನವೀಕರಿಸುವುದು!

2009ರ ಫೆಬ್ರವರಿ 15ರಿಂದ 2010ರ ಜುಲೈ 3ರ ತನಕ ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯ ಒಂದರಮೇಲೊಂದರಂತೆ ಸತತ ನಾಲ್ಕು ಪತ್ರಗಳ ಮೂಲಕ ಬಳ್ಳಾರಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವಂತೆ ರಾಜ್ಯ ಸರ್ಕಾರಕ್ಕೆ ಒತ್ತಾಯಿಸುತ್ತಲೇ ಬಂದರೂ ಈ ಬಗ್ಗೆ ನಯಾಪೈಸೆ ಕ್ರಮ ಕೈಗೊಳ್ಳದ ಯಡ್ಡಿ ಸರ್ಕಾರ ಈಗ ಕೇಂದ್ರದ ಕಾಳಜಿಯನ್ನೇ ಗೇಲಿ ಮಾಡಿದಂತೆ ಮತ್ತೆ ರತ್ನಯ್ಯನ ಕಳ್ಳ ಗಣಿಗೆ ಪರವಾನಗಿಗೆ ಒತ್ತಾಯಿಸುತ್ತಿದೆ!

ಯಡ್ಡಿ ಸರ್ಕಾರ ಅದೆಷ್ಟು ಮಾನಗೆಟ್ಟು ರತ್ನಯ್ಯನ ಗಣಿ ಪರವಾನಗಿಯ ಪರ ವಹಿಸುತ್ತದೆ ಎಂದರೆ ಕೇಂದ್ರ ಲೈಸೆನ್ಸ್ ಕಲ್ಪಿಸುವುದಿರಲಿ, ರಾಜ್ಯ ಸರ್ಕಾರ ನೀಡಿದ ಲೈಸೆನ್ಸೇ ಬಹುತೇಕ ಅಕ್ರಮಗಳಿಂದ ಕೂಡಿತ್ತು. ಯಾವುದೇ ಕಾಯ್ದೆ ಕಾನೂನನ್ನೂ ಪಾಲಿಸದೇ, ಕೋರ್ಟು ಮತ್ತು ಲೋಕಾಯುಕ್ತರ ಆದೇಶವನ್ನೂ ಧಿಕ್ಕರಿಸಿ ರತ್ನಯ್ಯನ 22 ಎಕರೆಯ ಗಣಿಗೆ ರಾಜ್ಯಾದ್ಯಂತ ಇದ್ದ ಪ್ರತಿರೋಧವನ್ನೂ ಲೆಕ್ಕಿಸದೇ ಯಡ್ಡಿ ಸರ್ಕಾರ ಪರವಾನಗಿ ಕಲ್ಪಿಸಿದ್ದರ ಹಿಂದಿದ್ದವನು ಹೊಸಪೇಟೆಯ ಗಣಿ ಶಾಸಕ ಆನಂದ್ ಸಿಂಗ್!


ಅದು ಗಣಿ ರೆಡ್ಡಿಗಳ ಪಾಳಯದಿಂದ ಆನಂದ್ ಸಿಂಗ್‌ನನ್ನು ಸೆಳೆಯುವ ಯಡ್ಡಿಯ ತಂತ್ರವಾಗಿತ್ತಾ ಅಥವಾ ಯಡ್ಡಿ ಮಕ್ಕಳಿಗೂ ಆನಂದ್ ಸಿಂಗ್‌ನಿಂದ ಪಾಲು ಸಂದಾಯವಾಗಿತ್ತಾ ಗೊತ್ತಿಲ್ಲ, ರಾಜ್ಯ ಸರ್ಕಾರದ ಮುಖಕ್ಕೆ ಮಂಗಳಾರತಿ ಮಾಡಿದಂತೆ ಶಿಫಾರಸ್ಸು ಕಳಿಸಿದ 20ನೇ ದಿನಕ್ಕೇ ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯದಿಂದ ಪ್ರತ್ಯುತ್ತರ ಬಂದಿತ್ತು, ಕನಿಷ್ಠ ಇಂಥದೊಂದು ಪತ್ರ ನೋಡಿದ ಮೇಲಾದರೂ ಯಡ್ಡಿಗೆ ಜ್ಞಾನೋದಯವಾಗಬೇಕಿತ್ತು, ಗಣಿ ರೆಡ್ಡಿಗಳು ಬೇನಾಮಿಯಾಗಿ ದೋಚುತ್ತಿದ್ದ ಅದಿರು ದಂಧೆಗೂ ಕಡಿವಾಣ ಹಾಕಲಿಲ್ಲ, ಕೇಂದ್ರಕ್ಕೆ ಈ ಬಗ್ಗೆ ವರದಿಯನ್ನೂ ಸಲ್ಲಿಸಲಿಲ್ಲ.

ಇನ್ನು ಕೇಂದ್ರ ಸರ್ಕಾರ ತಾನೇ ಹೇಗೆ ಕಣ್ಣುಮುಚ್ಚಿ ಕೂರಲು ಸಾಧ್ಯ?

ಸುಪ್ರೀಂ ಕೋರ್ಟ್ ಮೊದಲೇ ಆಂಧ್ರ-ಕರ್ನಾಟಕದ ಗಡಿಗುಂಟ ನಡೆದ ಅಕ್ರಮ ಗಣಿಗಾರಿಕೆ ಬಗ್ಗೆ ವರದಿ ನೀಡುವಂತೆ ಸಿಇಸಿ ಅಂದರೆ ಕೇಂದ್ರ ಉನ್ನತಾಧಿಕಾರ ಸಮಿತಿಯನ್ನು ನೇಮಿಸಿತ್ತಲ್ಲ; ಈ ಸಿಇಸಿ ಕೂಡ ಸಮಯ ಕಾಯುತ್ತಿತ್ತೇನೊ. ಇನ್ನು ತಡ ಮಾಡಿ ಪ್ರಯೋಜನವಿಲ್ಲ ಎನ್ನಿಸಿರಬೇಕು. ಇದ್ದಕ್ಕಿದ್ದಂತೆ ಡಿಸೆಂಬರ್ 21 ರಿಂದ 23 ರವರೆಗೆ ಬಳ್ಳಾರಿ ಮತ್ತು ಅನಂತಪುರದ ವಿವಿಧ ಸ್ಥಳಗಳಿಗೆ ಭೇಟಿ ಕೊಟ್ಟು ಪ್ರತ್ಯಕ್ಷ ತಪಾಸಣೆ ನಡೆಸುವ ನಿರ್ಧಾರಕ್ಕೆ ಸಿಇಸಿ ಬಂದುಬಿಟ್ಟಿತು.


ಈಗಾಗಲೇ ಆಂಧ್ರದ ಓಬಳಾಪುರಂ ಮೈನಿಂಗ್ ಕಂಪೆನಿ (OMC), ಬಳ್ಳಾರಿ ಐರನ್ ಓರ್ ಪ್ರೈ ಲಿ. (BIOP), ವೈ. ಮಹಾಬಲೇಶ್ವರಪ್ಪ ಅಂಡ್ ಕಂಪೆನಿ, ಅನಂತಪುರಂ ಮೈನಿಂಗ್ ಕಾರ್ಪೊರೇಷನ್ (ಇದು ಜನಾರ್ದನ ರೆಡ್ಡಿಯ ಪತ್ನಿ ಲಕ್ಷ್ಮಿ ಅರುಣಾ ಒಡೆತನದ್ದು) ಇತ್ಯಾದಿ ಗಣಿರೆಡ್ಡಿಗಳ ಆರು ಮೈನಿಂಗ್ ಕಂಪೆನಿಗಳನ್ನು ಮುಚ್ಚಿಸಿದ ಸಿಇಸಿ, ಈಗ ಸ್ಥಳಕ್ಕೇ ಬಂದು ತಪಾಸಣೆಗಿಳಿದಿದೆಯೆಂದರೆ ಅದು ಗಣಿರೆಡ್ಡಿಗಳ ಅವಸಾನದ ನಿರ್ಣಾಯಕ ಹಂತದಂತಿತ್ತು.

ಕಾಕತಾಳೀಯವೋ ಅಥವಾ ಪಾಪದ ಕೊಡವೇ ತುಂಬಿ ಬಂದಿದೆಯೋ ಗೊತ್ತಿಲ್ಲ. ಯಾವ ಸಿಇಸಿ ಡಿಸೆಂಬರ್ 21 ರಿಂದ ಸ್ಥಳ ತಪಾಸಣೆಯ ನಿರ್ಧಾರ ಪ್ರಕಟಿಸಿತೋ, ಅದರ ಮರುದಿನವೇ ಅಂದರೆ ಇವತ್ತು ಡಿಸೆಂಬರ್ 16 ರಂದು ಹೈದರಾಬಾದ್ ಹೈಕೋರ್ಟ್‌ನ ದ್ವಿಸದಸ್ಯ ಪೀಠ ಅಕ್ರಮ ಗಣಿ ವಿರುದ್ಧ ಸಿಬಿಐ ತನಿಖೆಯ ಮೇಲೆ ವಿಧಿಸಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಿತು.



ಇದರರ್ಥ ಒಂದೆಡೆ ಸಿಬಿಐ ಗಣಿ ರೆಡ್ಡಿಗಳ ಬೆನ್ನಿಗೆ ಬಿದ್ದರೆ ಮತ್ತೊಂದೆಡೆ ಸುಪ್ರೀಂಕೋರ್ಟಿನ ಸಿಇಸಿ ಇದೇ ಗಣಿ ಕಳ್ಳರ ಕುತ್ತಿಗೆಗೆ ಕೈಹಾಕಲಿದೆ. ಗಣಿ ರೆಡ್ಡಿಗಳು ಸಿಬಿಐ ಕುಣಿಕೆಗೆ ಮೊದಲು ಬೀಳುತ್ತಾರಾ ಅಥವಾ ಸಿಇಸಿ ಹಾಕಿದ ಬಲೆಯಲ್ಲಿ ಸಿಕ್ಕಿ ಬೀಳುತ್ತಾರಾ? ಗಣಿ ರೆಡ್ಡಿಗಳ ಜೊತೆ ಮುಖ್ಯಮಂತ್ರಿ ಯಡ್ಡಿಯೂ ಸಿಬಿಐ ಬಲೆಗೆ ಸಿಲುಕಬಹುದಾ? ಕೇವಲ ರತ್ನಯ್ಯನ ಗಣಿ ಲೈಸೆನ್ಸ್ ಮಾತ್ರವಲ್ಲದೇ ಈ ಹಿಂದೆ ರೆಡ್ಡಿಗಳು ಮಾಡಿದ ಪಾಪದಲ್ಲೂ ಯಡ್ಡಿಗೆ ಪಾಲು ಸಂದಾಯವಾಗಿದೆಯಾ? ಯಡ್ಡಿಯಾ ರೆಡ್ಡಿಯಾ? ಮೊದಲು ಜೈಲಿಗೆ ಯಾರು ಹೋಗಬಹುದು?


• ರಾ. ಸೋಮನಾಥ್



ಪರಮೇಶ್ವರ್ ಹೆಗಲಿಗೆ ಪಾವಗಡದ ಶನಿ

ಪಾವಗಡದ ಪಕ್ಷನಿಷ್ಠ ಕಾಂಗ್ರೆಸ್ಸಿಗರೆಲ್ಲ ಸದ್ಯ ಪರಮೇಶ್ವರ್ ವಿರುದ್ಧ ಹಿಡಿಶಾಪ ಹಾಕುತ್ತಿದ್ದಾರೆ. ಪಾಪ; ಪರಮೇಶ್ವರ್ ದಿಕ್ಕುತೋಚದೆ ಹಣೆಹಣೆ ಚಚ್ಚಿಕೊಳ್ಳುತ್ತಿದ್ದಾರೆ. ಇತ್ತ ಬಿಜೆಪಿಯ ಬಾಗಿಲು ಬಂದ್ ಆಗಿ ಇದ್ದ ಮಂತ್ರಿಗಿರಿಯೂ ಕೈಜಾರುತ್ತಿದ್ದಂತೆ ಪಾವಗಡ ವೆಂಕಟರಮಣಪ್ಪ ಮತ್ತೆ ಕಾಂಗ್ರೆಸ್ಸಿಗೆ ನುಗ್ಗಿದ್ದಾನೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೇ ಉಲ್ಟಾ ಹೊಡೆದು ಪಕ್ಷೇತರನಾಗಿ ಗೆದ್ದು ಬಿಜೆಪಿ ಸರ್ಕಾರದ ಮಂತ್ರಿಯಾಗಿದ್ದ ವೆಂಕಟರಮಣಪ್ಪ ಅದ್ಯಾವ ಗಳಿಗೆಯಲ್ಲಿ ಪರಮೇಶ್ವರ್ ರಾಶಿಗೆ ಪ್ರವೇಶಿಸಿದನೋ ಗೊತ್ತಿಲ್ಲ; ಸದ್ಯ ಪಾವಗಡದ ಕಾಂಗ್ರೆಸ್ಸೇ ಚಿಂದಿಯೆದ್ದು ಹೋಗಿದೆ.

ಪಾವಗಡದ 6 ಜಿ.ಪಂ. ಮತ್ತು 22 ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳ ಪೈಕಿ ಕಣಕ್ಕಿಳಿದ ಬಹುತೇಕರೆಲ್ಲ ಪಕ್ಷ ನಿಷ್ಠರು ಮತ್ತು ಕಾಂಗ್ರೆಸ್ ನಾಯಕ ವಿ.ಎಸ್. ಉಗ್ರಪ್ಪನವರ ಬೆಂಬಲಿಗರು. ಹಾಗೊಮ್ಮೆ ವೆಂಕಟರಮಣಪ್ಪನ ಬೆಂಬಲಿಗರಿಗೂ ಟಿಕೆಟ್ ಕಲ್ಪಿಸಬೇಕೆಂದಿದ್ದರೆ ಪರಮೇಶ್ವರ್ ಎರಡೂ ಬಣಗಳ ಜೊತೆ ಸಮಾಲೋಚಿಸಿಯೇ ಬಗೆಹರಿಸಬಹುದಿತ್ತು, ಪಾವಗಡದ ಕಾಂಗ್ರೆಸ್ ಅಧ್ಯಕ್ಷ ಚಿಕ್ಕಾರೆಡ್ಡಿ, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬಾಬು, ಮಾಜಿ ಜಿ.ಪಂ. ಅಧ್ಯಕ್ಷ ಚಂಪಯ್ಯ, ವಕೀಲ ರಾಜಗೋಪಾಲ್; ಹೀಗೆ ಪಕ್ಷನಿಷ್ಠ ಹಿಂಡೇ ಪಂಚಾಯ್ತಿ ಚುನಾವಣೆಗೆ ಅಣಿಯಾಗಿತ್ತು.




ಆ ಪ್ರಕಾರವೇ ವೆಂಕಟಾಪುರ ಜಿಲ್ಲಾ ಪಂಚಾಯ್ತಿಗೆ ಚಿಕ್ಕಾರೆಡ್ಡಿಯ ಬೆಂಬಲಿಗರಿಗೆ ಟಿಕೆಟ್ ಸಿಗಬೇಕಿತ್ತು. ಪಕ್ಕದ ನಾಗಲಮಡಿಕೆಗೆ ಚಿಕ್ಕಾರೆಡ್ಡಿಯೇ ನಿಲ್ಲಬೇಕಿತ್ತು, ಬ್ಯಾಡನೂರು ಜಿ.ಪಂ.ಗೆ ವಿಜಯರಾಜ್ ಎಂಬ ಸಿವಿಲ್ ಇಂಜಿನಿಯರ್‌ನನ್ನು ನಿಲ್ಲಿಸಲು ಚಂಪಯ್ಯ ತಯಾರಿ ನಡೆಸಿದ್ದರು. ಮಂಗಳವಾಡಾ ಜಿ.ಪಂ.ಗೆ ಕಾಂಗ್ರೆಸ್ ನಾಯಕ ಜಗನ್ನಾಥ್ ಪತ್ನಿಯೂ ಕೋಟಗುಡಕ್ಕೆ ವಕೀಲ ರಾಜಗೋಪಾಲ್ ಪತ್ನಿಯೂ ಟಿಕೆಟ್ ಆಕಾಂಕ್ಷಿಗಳಾಗಿದ್ದರು.

ಮೊದಲೇ ಕಾಂಗ್ರೆಸ್ಸಿನಿಂದ 6 ವರ್ಷಗಳ ಅವಧಿಗೆ ಸಸ್ಪೆಂಡಾಗಿದ್ದ ವೆಂಕಟರಮಣಪ್ಪ ಅದೇನು ಮಂಕುಬೂದಿ ಎರಚಿದನೋ, ಇದ್ದಕ್ಕಿದ್ದಂತೆ ಪರಮೇಶ್ವರ್ ಮೆತ್ತಗಾದರು. ಉಗ್ರಪ್ಪ ಬಣ ಮತ್ತು ವೆಂಕಟರಮಣಪ್ಪನ ಬಣಗಳು ತಲಾ 3 ಜಿ.ಪಂ. ಮತ್ತು 11 ತಾ.ಪಂ. ಕ್ಷೇತ್ರಗಳನ್ನು ಹಂಚಿಕೊಳ್ಳುವ ಹೊಸ ಸೂತ್ರವೊಂದನ್ನು ಪ್ರಸ್ತಾಪಿಸಿದರು. ಬಹುಶಃ ಪಕ್ಷನಿಷ್ಠರು ಇದಕ್ಕೂ ಒಪ್ಪಿದ್ದರೇನೋ.

ಆದರೆ ವೆಂಕಟರಮಣಪ್ಪ 11 ತಾ.ಪಂ.ಗಳಿಗೆಂದು ಕೊಟ್ಟಿದ್ದ 'ಬಿ' ಫಾರ್ಮ್‌ಗಳನ್ನೇ ಬಳಸಿ ತನ್ನ ಪಾಲಿನ 3 ಮತ್ತು ಉಳಿಕೆ 3 ಜಿ.ಪಂ.ಗಳಿಗೂ ತನ್ನವರನ್ನೇ ಹಾಕಿಬಿಟ್ಟ. ಅಲ್ಲಿಗೆ 6 ಕ್ಕೆ ಆರೂ ಜಿ.ಪಂ. ಗಳಿಗೆ ವೆಂಕಟರಮಣಪ್ಪನೇ ಆಕ್ರಮಿಸಿಕೊಂಡಿದ್ದ. ಇದರಿಂದ ರೊಚ್ಚಿಗೆದ್ದ ಪಕ್ಷನಿಷ್ಠರೆಲ್ಲ ಚುನಾವಣೆಯ ಉಸಾಬರಿಯೇ ಬೇಡ ಎಂದು ನಿಷ್ಕ್ರಿಯರಾದರು. ನ್ಯಾಯ ಕೇಳಲುಹೋದರೆ ಪರಮೇಶ್ವರ್ ಸಾಹೇಬರೇ ನಾಪತ್ತೆಯಾಗಿದ್ದರು. ಸದ್ಯ ಪಾವಗಡದ ಜಿ.ಪಂ. ತಾ.ಪಂ.ಗಳಿಗೆ ಅಧಿಕೃತ ಕಾಂಗ್ರೆಸ್ ಅಭ್ಯರ್ಥಿಗಳೇ ಇಲ್ಲ, ಮೂಲ ಕಾಂಗ್ರೆಸ್ಸಿಗರು, ಪಕ್ಷ-ನಿಷ್ಠರನ್ನೆಲ್ಲ ಬದಿಗೊತ್ತಿ ವೆಂಕಟರಮಣಪ್ಪನಿಗೆ ಮಣೆ ಹಾಕಿದ ಪರಮೇಶ್ವರ್ ವಿರುದ್ಧ ಸ್ವಂತ ಪಕ್ಷದವರೇ ಹಿಡಿಶಾಪ ಹಾಕುತ್ತಿದ್ದಾರೆ.


ಚಿಕ್ಕಮಗಳೂರು: ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಯಾರು ಹಿತವರು ಈ ಮೂವರೊಳಗೆ?

ಚಿಕ್ಕಮಗಳೂರು ಜಿ.ಪಂ. ಮತ್ತು ತಾ.ಪಂ. ಚುನಾವಣೆಗೆ ತಾಲೀಮು ಶುರುವಾಗಿದೆ. ಕಣಕ್ಕಿಳಿಯಲು ವಿವಿಧ ಪಕ್ಷಗಳ ಬಲಾಢ್ಯರು ಕಸರತ್ತು ನಡೆಸಿದ್ದಾರೆ. ಈವರೆಗೆ ಇಲ್ಲಿ ಕಾಂಗ್ರೆಸ್ ಪಕ್ಷ ಪಾರುಪತ್ಯ ಮೆರೆಯುತ್ತಿತ್ತು. ಇಲ್ಲಿನ 34 ಸ್ಥಾನಗಳಲ್ಲಿ 18 ಮಹಿಳಾ ಮೀಸಲು ಹಾಗೂ 16 ಸಾಮಾನ್ಯ ಸ್ಥಾನಗಳು. ಏಳು ತಾ.ಪಂ.ಗಳ 110 ಸ್ಥಾನಗಳಿಗೆ ಕಣ ಸಜ್ಜುಗೊಂಡಿದೆ. ಇವುಗಳಲ್ಲಿ 62 ಮಹಿಳಾ ಮೀಸಲು, 48 ಸಾಮಾನ್ಯ ಸ್ಥಾನಗಳಿವೆ.



ಈ ಚುನಾವಣೆ ಅಂದುಕೊಂಡಂತೆ ಸರಳವಾಗಿ ನಡೆಯಲಾರದು. ಕಾಂಗ್ರೆಸ್‌ಗಿದು 'ಮಾಡು ಇಲ್ಲವೇ ಮಡಿ' ಸ್ಥಿತಿ. ಜೆಡಿಎಸ್ ಪ್ರಬಲ ಪೈಪೋಟಿಯಲ್ಲಿ ಸಿಕ್ಕಿದ್ದನ್ನು ಬಾಚಿಕೊಳ್ಳುವ ತಂತ್ರ ಹೆಣೆದಿದೆ. ಬಿಜೆಪಿಯದು ಅಂಬರಕ್ಕೆ ಏಣಿಯಿಡುವ ತಯಾರಿ. ಕಳೆದ ಸಲ ಜಿಲ್ಲಾ ಪಂಚಾಯತಿಯನ್ನು ಆಪರೇಷನ್ ಕಮಲದ ಮೂಲಕ ಸೆಳೆಯಲು ಅವಿರತ ಪ್ರಯತ್ನಿಸಿತ್ತು. ಆದರೆ ಕಾಂಗ್ರೆಸ್, ಜೆಡಿಎಸ್ ಮತ್ತು ಸಿಪಿಐ ನಡುವೆ ಹೊಂದಾಣಿಕೆಯನ್ನು ಮುರಿಯಲು ಬಿಜೆಪಿಗೆ ಸಾಧ್ಯವಾಗಲಿಲ್ಲ. ಆ ಕೊರಗನ್ನು ಈ ಬಾರಿ ಅಳಿಸಿ ಹಾಕಲು ಮತ್ತು ಚಿಕ್ಕಮಗಳೂರನ್ನು ಸಂಪೂರ್ಣ ಕೇಸರಿಮಯಗೊಳಿಸಲು ಅದು ರಣತಂತ್ರವನ್ನು ಹೆಣೆದಿಟ್ಟಿದೆ.

ಇವತ್ತಿಗೆ ಜಿಲ್ಲೆಯಲ್ಲಿ ಅತ್ಯಂತ ಚರ್ಚೆಯಲ್ಲಿರುವ



ಚುನಾವಣೆ ಜ್ವರದ ಕಾವು ನೆತ್ತಿಗೇರುತ್ತಿದೆ. ಯಾವತ್ತೂ ದಿಗಿಲಾಗುವ ಮಟ್ಟಿಗೆ ಇರುತ್ತಿದ್ದ ದತ್ತ ಜಯಂತಿಯ ಕಾವು ಕೊಂಚ ತಣ್ಣಗಿದೆ. ಎಲ್ಲಾ ಪಕ್ಷಗಳಲ್ಲೂ ಸ್ಥಾನ ಗಿಟ್ಟಿಸಿಕೊಳ್ಳಲು ಆಕಾಂಕ್ಷಿಗಳು ಪೈಪೋಟಿಗಿಳಿಯುತ್ತಿದ್ದಾರೆ. ಇವತ್ತಿನ ಸ್ಥಿತಿಯಲ್ಲಿ ನಾಮುಂದು ತಾಮುಂದು ಅನ್ನುವವರ ಸಂಖ್ಯೆ ಹನುಮಂತನ ಬಾಲದಂತೆ ಬೆಳೆಯುತ್ತಿದೆ.

ಮೂಡಿಗೆರೆ ಕಸಬಾ ಜಿ.ಪಂ. ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಹೂವಪ್ಪ ಕಾಂಗ್ರೆಸ್‌ನಿಂದ ಎಂ.ಎಸ್.ಅನಂತ್, ಬಿಜೆಪಿಯಿಂದ ಹೆಸಗಲ್ ಗಿರೀಶ್ ಪ್ರಬಲ ಪೈಪೋಟಿಗೆ ತಯಾರಾಗಿದ್ದಾರೆ. ಗೋಣಿಬೀಡು ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸುಧಾಕರ್, ಕಾಂಗ್ರೆಸ್‌ನಿಂದ ಉಗ್ಗೆಹಳ್ಳಿ ಜಗದೀಶ್ ಅಥವಾ ಡಾ.ವಿಜಯ ಕುಮಾರ್, ಬಿಜೆಪಿಯಿಂದ ವಾಲೇಕರಟಿ ಶಿವೇಗೌಡ, ಪಕ್ಷೇತರರಾಗಿ ಕೆ.ಎ.ಅಬ್ಬಾಸ್ ಸ್ಪರ್ಧೆಗಿಳಿಯಲಿದ್ದಾರೆ. ಇದು ಈ ಭಾಗದಲ್ಲಿ ತೀವ್ರ ಪೈಪೋಟಿಗೆ ಕಾರಣವಾಗಲಿದೆ.

ಬಣಕಲ್ ಜಿ.ಪಂ. ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿ ಶಾರದ, ಕಾಂಗ್ರೆಸ್‌ನಿಂದ ಜ್ಯೋತಿ, ಬಿಜೆಪಿಯಿಂದ ಯಮುನಾ ಚನ್ನಪ್ಪ ಕಣಕ್ಕಿಳಿದಿದ್ದಾರೆ. ಕೂವೆ ಜಿ.ಪಂ. ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಕೃಷ್ಣೇಗೌಡ, ಜೆಡಿಎಸ್‌ನಿಂದ ಬಿ.ಎಲ್. ಸಂದೀಪ್, ಬಿಜೆಪಿಯಿಂದ ಅರೇಕೂಡಿಗೆ ಶಿವು ಸ್ಪರ್ಧಿಸಿದ್ದಾರೆ. ಕಳಸ ಜಿ.ಪಂ. ಕ್ಷೇತ್ರದಿಂದ ಜೆಡಿಎಸ್‌ನಿಂದ ವಿನೋದ, ಕಾಂಗ್ರೆಸ್‌ನಿಂದ ರಾಜಮ್ಮ ಸ್ಪರ್ಧಿಸಿದ್ದಾರೆ. ಬಿಜೆಪಿಯಿಂದ ಅಭ್ಯರ್ಥಿಯ ಆಯ್ಕೆ ಇನ್ನೂ ನಡೆದಿಲ್ಲ.

ಶೃಂಗೇರಿ ಕಸಬ ಕ್ಷೇತ್ರದಿಂದ ಬಿಜೆಪಿಯಿಂದ ಮಾದನ ಕಾಡು ರಂಗನಾಥ್, ಕಾಂಗ್ರೆಸ್‌ನಿಂದ ಕುಳಾದಮನೆ ವೆಂಕಟೇಶ್, ಜೆಡಿಎಸ್‌ನಿಂದ ರಮೇಶ್ ಮತ್ತು ಬಿಜೆಪಿಗೆ ರಾಜಿನಾಮೆ ನೀಡಿ ಹೊರಬಂದಿರುವ ಸುವರ್ಣ ಅವಿನಾಶ್ ಕಣಕ್ಕಿಳಿಯುವ ತಯಾರಿ ನಡೆಸಿದ್ದಾರೆ. ಮೆಣಸೆ ಕ್ಷೇತ್ರದಿಂದ ಕಾಂಗ್ರೆಸ್ ಮತ್ತು ಬಿಎಸ್‌ಪಿ ಒಮ್ಮತದ ಅಭ್ಯರ್ಥಿಯಾಗಿ ಕೆ.ಎಂ.ಗೋಪಾಲ್, ಬಿಜೆಪಿಯಿಂದ ಬಿ.ಶಿವಶಂಕರ್ ಕಣಕ್ಕಿಳಿದಿದ್ದು ಜೆಡಿಎಸ್ ಅಭ್ಯರ್ಥಿಯ ಆಯ್ಕೆ ಇನ್ನಷ್ಟೇ ಹೊರಬರಬೇಕಿದೆ.

ಚಿಕ್ಕಮಗಳೂರು ತಾಲ್ಲೂಕಿನ ವಸ್ತಾರೆ ಕ್ಷೇತ್ರದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಎಚ್.ಎಚ್.ದೇವರಾಜ್‌ರ ಪತ್ನಿ ಪುಷ್ಪ ಕಣಕ್ಕಿಳಿಯುವ ನಿರೀಕ್ಷೆಯಿದೆ. ಇಲ್ಲಿ ಬಿಜೆಪಿಯಿಂದ ಶ್ರೀದೇವಿ ಕಣಕ್ಕಿಳಿಯಲಿದ್ದಾರೆ. ಹೀಗಾಗಿ ಇದೊಂದು ಪ್ರತಿಷ್ಠೆಯ ಕಣವಾಗಲಿದೆ. ಆಲ್ದೂರು ಜಿ.ಪಂ.ನಿಂದ ಕಾಂಗ್ರೆಸ್‌ನಿಂದ ಜಿ.ಪಂ.ಮಾಜಿ ಉಪಾಧ್ಯಕ್ಷೆ ಸವಿತಾ ರಮೇಶ್, ಸಿಪಿಐನ ರಾಧಾ ಸುಂದರೇಶ್ ಎರಡನೆ ಬಾರಿಗೆ ಕಣಕ್ಕೆ ಧುಮುಕಿದ್ದಾರೆ. ಅಂಬಳೆ ಜಿ.ಪಂ ಕ್ಷೇತ್ರದಿಂದ ಬಿಜೆಪಿಯ ಮುಗುಳುವಳ್ಳಿ ನಿರಂಜನ್, ಕೊಪ್ಪ ತಾಲ್ಲೂಕಿನ ಜಯಪುರ ಜಿ.ಪಂ.ನಿಂದ ಪಕ್ಷೇತರರಾಗಿ ಸುಮಾ ನಾಗೇಶ್ ಕಣಕ್ಕೆ ಧುಮುಕಿದ್ದಾರೆ. ಅವರು ಪ್ರಜಾಪ್ರಭುತ್ವ ಉಳಿಸಿ ಆಂದೋಲನ ವೇದಿಕೆಯ ಅಧ್ಯಕ್ಷರಾಗಿದ್ದು ಸಂಚಲನ ಮೂಡಿಸಿದ್ದಾರೆ.

ಚಿಕ್ಕಮಗಳೂರು ತಾ.ಪಂ.ನ ಅಂಬಳೆ ಕ್ಷೇತ್ರದಿಂದ ಬಿಜೆಪಿಯ ಕೃಷ್ಣಕುಮಾರ್, ಮುಗುಳುವಳ್ಳಿ ತಾ.ಪಂ. ಕ್ಷೇತ್ರದಿಂದ ಬಿಜೆಪಿಯ ಮೀನಾಕ್ಷಿ ಧರ್ಮೇಶ್ ಕಣಕ್ಕಿಳಿದಿದ್ದಾರೆ. ಬಾಳೆಹೊನ್ನೂರು ಕ್ಷೇತ್ರದಿಂದ ಆಬೀದ್ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಇಲ್ಲಿ ಮುಸಲ್ಮಾನರ ಸಂಖ್ಯೆ ಅತ್ಯಧಿಕ ಸಂಖ್ಯೆಯಲ್ಲಿರುವುದು ಲಾಭದಾಯಕವಾಗಲಿದೆ.

ನರಸಿಂಹರಾಜಪುರದಲ್ಲಿ ಕಾಂಗ್ರೆಸ್‌ನ ಜಿ.ಪಂ. ಮಾಜಿ ಸದಸ್ಯೆ ಗಿರಿಜಮ್ಮ, ಬಿಜೆಪಿ ರೈತ ಮೋರ್ಚಾದ ಮಾಜಿ ಅಧ್ಯಕ್ಷ ಮಾಳೂರು ರಮೇಶ್, ಗ್ರಾ.ಪಂ. ಮಾಜಿ ಅಧ್ಯಕ್ಷ ಕೆ.ವಿ.ಜಯಕರ, ಜಯರಾಮ, ಈಚಿಕೆರೆ ಪ್ರಭಾಕರ, ಗೋಪಿ, ದೇವರಾಜ್‌ರಂಥ ಪ್ರಬಲರು ಜೆಡಿಎಸ್ ತೆಕ್ಕೆಗೆ ಬಿದ್ದಿದ್ದು ತಾಲ್ಲೂಕಿನಲ್ಲಿ ಜೆಡಿಎಸ್ ಪ್ರಾಬಲ್ಯ ಸಾಧಿಸುವ ಹವಣಿಕೆ ನಡೆಸಿದೆ. ಉಳಿದಂತೆ ತಾ.ಪಂ ಕ್ಷೇತ್ರಗಳಲ್ಲಿ ಶೃಂಗೇರಿಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸುತ್ತಿರುವ ದಿನಕರ ಸುರೇಂದ್ರ, ರೈತ ಸಂಘದ ಮಾರನಕೂಡಿಗೆ ನಟರಾಜ್ ಗಮನ ಸೆಳೆದಿದ್ದಾರೆ. ಕಡೂರು ತಾಲ್ಲೂಕಿನ ಸಿಂಗಟಗೆರೆ ಜಿ.ಪಂ.ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿರುವ ಲಕ್ಷ್ಮೀದೇವಿ ಭರವಸೆಯಲ್ಲಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲಿ ತಿಗಣೆಗಳ ಕಾಟವೇ ಹೆಚ್ಚಿನ ಸಂಖ್ಯೆಯಲ್ಲಿದೆ. ಭಿನ್ನಾಭಿಪ್ರಾಯವಿದ್ದವರು ಬೇರೆ ಪಕ್ಷದೆಡೆ ಒಲವು ತೋರುವುದು ಈ ಪಕ್ಷಕ್ಕೆ ಹೊಸತೇನಲ್ಲ. ಹಿಂ 1996ರಲ್ಲಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಿಂ ಕಾಂಗ್ರೆಸ್ ಪರ ಅಭ್ಯರ್ಥಿಯಾಗಿ ಡಿ.ಕೆ.ತಾರಾದೇವಿ ಸ್ಪರ್ಧಿಸಿದ್ದ ಅವರ ವಿರುದ್ಧ ಮತ ಚಲಾಯಿಸಲು ಜಿಲ್ಲೆಯ ಪ್ರಮುಖ ಮುಖಂಡರು ಷಡ್ಯಂತ್ರ ರೂಪಿಸಿದ್ದು ರಹಸ್ಯವಾಗಿ ಉಳಿದಿ ಅವತ್ತಿನ ಜನತಾದಳದ ಅಭ್ಯರ್ಥಿ ಬಿ.ಎಲ್.ಶಂಕರ ಕಾಂಗ್ರೆಸ್‌ನೊಳಗಿನ ಬಂಡಾಯದ ಲಾಭವನ್ನು ಯಶಸ್ವಿಯಾ ಪಡೆದಿದ್ದರು. ಕಳೆದ ಒಂದೂವರೆ ದಶಕದಿಂದ ಕಾಂಗ್ರೆ ಪಕ್ಷವು ಜಿಲ್ಲೆಯಲ್ಲಿ ಹಂತಹಂತವಾಗಿ ಅಳಿಯುತ್ತಲ ಬಂದಿದೆಯಾದರೂ ಅದಿನ್ನೂ ಆ ಪಕ್ಷದ ಮುಖಂಡರಿ ಅರ್ಥವಾಗಿಲ್ಲ.

ಜೆಡಿಎಸ್ ಜಿಲ್ಲೆಯಲ್ಲಿ ಅನಾಯಾಸವಾಗಿ ತಿದಿಯೊತ್ತುತ್ತಿ ಅದಕ್ಕೆ ಚೈತನ್ಯವೂ ದೊರೆತಿದೆ. ಪಕ್ಷದಲ್ಲಿ ಅಷ್ಟಾಗಿ ಹೆಚ್ಚಿ ಭಿನ್ನರ ಸಂಖ್ಯೆಯೂ ಕಂಡುಬರುತ್ತಿಲ್ಲ. ಈಗಷ್ಟೇ ಜೆಡಿಎಸ್‌ನ ಮುಖ ಹೊರಳಿಸಿ ನಿಂತಿರುವ ಮಹೇಂದ್ರ ಕುಮಾರನಿಂ ಲಾಭ ಸಿಗುವುದು ಅಷ್ಟಕ್ಕಷ್ಟೆ. ಆದರೂ ತರಿಕೆರೆ ಮತ ಕಡೂರು ಭಾಗದಲ್ಲಿ ಜೆಡಿಎಸ್ ಪ್ರಾಬಲ್ಯ ಸಾಧಿಸುವುದ ನಿಚ್ಚಳ. ಕಡೂರು ಹಾಸನ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರ ಆನೆ ಬಲ ದೊರೆತಿದೆ. ಇಲ್ಲಿನ ಬಹುತೇಕ ಜಿ.ಪಂ. ಮತ ತಾ.ಪಂ. ಕ್ಷೇತ್ರಗಳು ಇವತ್ತಿಗೂ ಜೆಡಿಎಸ್ ತೆಕ್ಕೆಯ ಭದ್ರವಾಗಿ ಉಳಿದಿದೆ. ಅಲ್ಲದೆ ಬಿಜೆಪಿ ಮತ್ತು ಕಾಂಗ್ರೆಸ ಭಿನ್ನರನ್ನು ತನ್ನೆಡೆ ಸೆಳೆದುಕೊಳ್ಳುವ ಚಾಣಾಕ್ಷತನ ಜೆಡಿಎಸ್‌ಗಿದ ಆ ಮಟ್ಟಿಗೆ ಅದು ಸದೃಢ.


ಇನ್ನು ಬಿಜೆಪಿಯದು ಭಿನ್ನರಾಗ. ಕಳೆದ ಹಲವ ಚುನಾವಣೆಗಳಲ್ಲಿ ಗೆದ್ದಿದ್ದನ್ನು ನೋಡಿದರೆ ಅದ ನಾಗಾಲೋಟಕ್ಕೆ ಇಲ್ಲಿ ತೆರೆ ಬೀಳಲಿರುವುದು ನಿಸ್ಸಂಶಯ ಪಕ್ಷದಲ್ಲಿ ಬೀದಿ ಕಾಳಗಕ್ಕಿಳಿಯುವ ಮಟ್ಟದಲ್ಲಿ ಭಿನ್ನರಿದ್ದಾರ ಆದರೆ ಹಿಂದಿಗಿಂತ ಹೆಚ್ಚಿನ ಸ್ಥಾನ ಗಳಿಸುವುದು ಮಾತ ಸತ್ಯ ಯಾಕೆಂದರೆ ಕಾಂಗ್ರೆಸ್ ಪಕ್ಷವು ಕಳೆದುಕೊಳ್ಳುವುದನ ಬಿಜೆಪಿ ಮತ್ತು ಜೆಡಿಎಸ್ ಗಳಿಸಿಕೊಳ್ಳುವುದು ಅಪಹಾಸ್ಯವಾ ಉಳಿದಿಲ್ಲ. ಇಲ್ಲಿನ ಹಲವು ಕ್ಷೇತ್ರಗಳು ಇವತ್ತಿಗೆ ತೀವ ಜಿದ್ದಾಜಿದ್ದಿನಿಂದ ಚುನಾವಣೆ ಎದುರಿಸುವ ಎಲ ತಯಾರಿಯನ್ನು ನಡೆಸಿದೆ. ಒಟ್ಟಾರೆ ಈ ಬಾರಿಯ ಚುನಾವಣೆಯಲ್ಲಿ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲೂ ಕೂ ಘಟಾನುಘಟಿಗಳು ಸ್ಪರ್ಧಿಸುತ್ತಿರುವುದರಿಂದ ತೀವ ಪೈಪೋಟಿಗೆ ಕಾರಣವಾಗಲಿದೆ. ಇಲ್ಲಿನ ಬೆಳವಣಿಗೆಯನ ಗಮನಿಸಿದರೆ ಹಣ, ಹೆಂಡ ನೀರಿನಂತೆ ಹರಿಯಲಿರು ಎಲ್ಲಾ ಕುರುಹುಗಳು ಗೋಚರಿಸುತ್ತಿವೆ.

• ಅಜೀಜ್ ಕಿರುಗುಂದ

ಕಲಬುರ್ಗಿ: ಎಲ್ಲರಲ್ಲೂ ಗೆಲ್ಲುವ ಗಡಿಬಿಡಿ


ಅಖಂಡ ಕಲಬುರ್ಗಿ (ಹೊಸ ಯಾದಗಿರಿ ಜಿಲ್ಲೆಯನ್ನೊಳಗೊಂಡು) ಜಿಲ್ಲಾ ಪರಿಷತ್ ಸ್ಥಾನವನ್ನು ತನ್ನ ಉಡಿಯಲ್ಲಿ ಹಾಕಿಕೊಂಡು ಸುರಪುರ ಮತಕ್ಷೇತ್ರದ ಶಾಸಕ ರಾಜೂಗೌಡ ಐದು ವರ್ಷಗಳವರೆಗೆ ನಿರಂತರವಾಗಿ ಆಟ ಆಡಿಕೊಂಡು ಬಂದಿದ್ದ. ಈತ ತನ್ನ ಕೈ ಬೆರಳಿನಿಂದ ತೋರಿದ ವ್ಯಕ್ತಿಯೆ ಅಧ್ಯಕ್ಷ, ಉಪಾಧ್ಯಕ್ಷನಾಗುವ ಸಂದರ್ಭವಿತ್ತು. ಆದರೆ ಇಂದು ಅಖಂಡ ಕಲಬುರ್ಗಿ ಜಿಲ್ಲೆ ಒಡೆದು ಯಾದಗಿರಿಯೂ ಒಂದು ಜಿಲ್ಲೆಯೆಂದು ಸರಕಾರ ಘೋಷಿಸಿಯಾಗಿದೆ. ಯಾದಗಿರಿ ಜಿಲ್ಲೆಯಲ್ಲಿ ಈಗ ಸದ್ಯ ಇರುವುದು ಮೂರು ತಾಲೂಕುಗಳು ಮಾತ್ರ. ಸುರಪುರವಂತೂ ರಾಜೂಗೌಡನ ಅಂದರೆ ಬಿಜೆಪಿಯ ತೆಕ್ಕೆಯಲ್ಲಿ ಇದೆ. ಇನ್ನುಳಿದ ಶಹಾಪುರ ಹಾಗೂ ಯಾದಗಿರಿ ಮತಕ್ಷೇತ್ರ ಮಾತ್ರ ಡಾ.ಎ.ಬಿ.ಮಲಕರೆಡ್ಡಿ ಹಾಗೂ ಶರಣಬಸ್ಸಪ್ಪಗೌಡ ದರ್ಶನಾಪುರ ಎಂಬ ಕಾಂಗ್ರೆಗಳ ಕೈಯ್ಯಲ್ಲಿದೆ.

ಹಿಂದೊಂದು ಸಂದರ್ಭದಲ್ಲಿ ಅಖಂಡ ಕಲಬುರ್ಗಿ ಜಿಲ್ಲಾ ಪಂಚಾಯತ್‌ನ ಕಿಂಗ್‌ಮೇಕರ್ ಆಗಿದ್ದ ರಾಜೂಗೌಡ ಈಗ ಅಷ್ಟು ಬಲಾಢ್ಯನಾಗಿ ಉಳಿದಿಲ್ಲ. ಈತ ಹಿಂದೆ ಸೇರಿದ್ದ ಬಿಜೆಪಿಯೆಂಬ ಚೆಡ್ಡಿಗಳ ಪಕ್ಷದ ಲಾಡಿಯಂತೂ ದಿನನಿತ್ಯ ಒಂದಿಲ್ಲೊಂದು ಕಾರಣಕ್ಕೆ ಸಡಿಲವಾಗುತ್ತ ನಡೆದಿದೆ. ಕಳೆದ ವರ್ಷ ನೆರೆಯಿಂದ ಸಂಕಷ್ಟಗೊಂಡು ಬೀದಿಗೆ ಬಂದಿದ್ದ ನಿರಾಶ್ರಿತರ ಬದುಕು ಇಂದಿಗೂ ಹಾಗೆಯೇ ಇದೆ. ಇದಲ್ಲದೆ ಎಲ್ಲರ ಕಣ್ಣ ಮುಂದೆಯೆ ಬಿಜೆಪಿ ಪಕ್ಷದ ಒಂದೊಂದೇ ಹಗರಣ ಬಯಲಾಗುತ್ತ ಚೆಡ್ಡಿಗಳ ಬಣ್ಣ ಬಯಲಾಗುತ್ತಿದೆ. ಅಂದಂತೆ ಸುರಪುರದ ಕಾಂಗ್ರೆಸ ಡಾ.ವೆಂಕಟಪ್ಪನಾಯಕ ಎಂಬ ಫ್ಯೂಡಲ್ ಗುಣಗಳ ವ್ಯಕ್ತಿ ಕೆಟ್ಟ ಮೇಲೆ ಬುದ್ಧಿ ಬಂತು ಎಂಬಂತೆ ತನ್ನ ಅರಮನೆಯನ್ನು ತೊರೆದು ಜನಸಂಪರ್ಕಕ್ಕೆ ಹಾತೊರೆಯುತ್ತಿದ್ದಾನೆ.



ಯಾದಗಿರಿಯ ಡಾ.ಎ.ಬಿ.ಮಲಕರೆಡ್ಡಿ ಹೇಳಿಕೇಳಿ ಹಿಂದೆ ಬಂದರೆ ಹಾಯದ ಮುಂದೆ ಬಂದರೆ ಒದೆಯದ ಸಂಭಾವಿತ ಗೋವು. ಆದರೆ ಇವರ ಹೆಸರಿನ ಮೇಲೆ ಅಳಿಮಯ್ಯ ಲಗಳಿಯ ಆಟಾಟೋಪ ಎಲ್ಲರಿಗೂ ಬೇಜಾರು ಬರಿಸಿದೆ. ಇದನ್ನು ಎನ್‌ಕ್ಯಾಷ್ ಮಾಡಿಕೊಳ್ಳಲು ಬಿಜೆಪಿಯ ಡಾ. ವೀರಬಸವಂತರೆಡ್ಡಿ ಎಲ್ಲಾ ರೀತಿಯ ಸ್ಕೆಚ್ ಹಾಕಿಕೊಂಡು ಜಿಲ್ಲಾ ಪಂಚಾಯತ್‌ನ ಗದ್ದುಗೆಯನ್ನು ತನ್ನ ಪಕ್ಷದತ್ತ ವಾಲಿಸಿಕೊಳ್ಳುವ ಸಲುವಾಗಿ ಸಾಕಷ್ಟು ತಾಲೀಮುಗಳನ್ನು ನಡೆಸಿಯಾಗಿದೆ.

ಶಹಾಪುರ ಮತಕ್ಷೇತ್ರದ ಶರಣಬಸಪ್ಪ ದರ್ಶನಾಪುರ ಹೇಳಿಕೇಳಿ ಲದ್ದು ಹೊಡೆದ ಗಿರಾಕಿ. ಆತ ಹಿಂದೆಯಾಗಲಿ ಮುಂದೆಯಾಗಲಿ ಕ್ಷೇತ್ರದ ಅಭಿವೃದ್ಧಿ ಮಾಡಬೇಕೆಂಬ ಇರಾದೆ ಇಟ್ಟುಕೊಳ್ಳದವ. ಆದರೆ ತಾನು ಕಾಯಂ ಆಗಿ ಕ್ಷೇತ್ರದಲ್ಲಿ ನೆಲೆಯೂರಬೇಕಾದರೆ ಏನೇನೂ ಮಾಡಬೇಕು ಎಂಬ ಚಾಣಾಕ್ಷ ನೀತಿಯನ್ನು ಅರಿತುಕೊಂಡವ. ಹಾಗಾಗಿ ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್‌ಗಳನ್ನು ತನ್ನ ಪಕ್ಷದ ಬುಟ್ಟಿಯಲ್ಲಿ ಹಾಕಿಕೊಂಡು ಮುನ್ನಡೆದರೆ ಮಾತ್ರ ತನ್ನ ಮುಂದಿನ ಶಾಸಕ ಸ್ಥಾನದ ನಡೆಗೆ ರಹದಾರಿಯಾಗುತ್ತದೆ ಎಂದು ತಿಳಿದುಕೊಂಡವ. ಹೀಗಾಗಿ ಜಿಪಂ ಮತ್ತು ತಾಪಂಗಳನ್ನು ಕಡೆಗಣಿಸದೆ ಸಕ್ರಿಯವಾಗಿ ತೊಡಗಿಕೊಂಡು ಉತ್ತಮ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿ ಅವರನ್ನು ಗೆಲ್ಲಿಸುವ ಇರಾದೆ ಇಟ್ಟುಕೊಂಡಿದ್ದಾನೆ.



ಈ ತಾಲೂಕಿನಲ್ಲಿ ಜೆಡಿಎಸ್ ಪಕ್ಷ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಸ್ಥಿತಿಯಲ್ಲಿ ಇದೆ. ಹಿಂದೆ ತಾಲೂಕು ಅಧ್ಯಕ್ಷನಾಗಿದ್ದ ಬಸವರಾಜ ಅರುಣಿ ಪಕ್ಷದ ಲೆಟರ್‌ಹೆಡ್ ಬಳಸಿಕೊಂಡು ಕಚೇರಿಯಿಂದ ಕಚೇರಿಗೆ ಅಂಡಲೆಯುತ್ತಿದ್ದ ದೃಶ್ಯ ಎಲ್ಲರ ಕಣ್ಣರಿಕೆಯಿಂದ ದೂರಸರಿದಿಲ್ಲ, ಪಕ್ಷ ಇಲ್ಲಿ ಚಿಗುರುವುದಿರಲಿ, ಅದು ಇರುವ ಮರ್ಯಾದೆಯನ್ನು ಮೂರಾಬಟ್ಟೆ ಮಾಡಿಕೊಳ್ಳಬದ್ದರೆ ಅಷ್ಟೇ ಸಾಕು. ಆದರೆ ಬಿಜೆಪಿ ಮಾತ್ರ ಇಲ್ಲಿ ಸದ್ದಿಲ್ಲದೆ ಚಿಗುರೊಡೆಯುತ್ತಿದೆ. ಇದಕ್ಕೆ ಬಹುಮುಖ್ಯ ಕಾರಣ ಶರಣಬಸ್ಸಪ್ಪ ದರ್ಶನಾಪುರನ ವ್ಯವಹಾರಗಳೇ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು.

ಈತ ಶಾಸಕನಾಗಿ ಆಯ್ಕೆಗೊಳ್ಳುವುದಕ್ಕೆ ಕೆಂಭಾವಿ ಮತಕ್ಷೇತ್ರವೇ ಈತ ಬೆಂಗಾವಲಾಗಿ ನಿಂತರೆ ಮಾತ್ರ ಶರಣಬಸ್ಸಪ್ಪ ಆಯ್ಕೆಗೊಳ್ಳುತ್ತಾನೆ. ಆದ ಇತ್ತೀಚೆಗೆ ಯಾಳಗಿಯಲ್ಲಿ ನಡೆದ ಶೇಖರಗೌಡರ ಕುಟುಂಬದ ಎರಡ ಭೀಕರ ಹತ್ಯೆಗಳ ಹಿಂದೆ ಶರಣಬಸ್ಸಪ್ಪ ಇದ್ದದ್ದು ಬಟಾಬಯಲಾಗಿರುವ ಸತ ಊರಲ್ಲಿ ಅವರವರಲ್ಲೇ ಜಗಳ ಹಚ್ಚಿ ಆ ಬೆಂಕಿಗೆ ಮೈಕಾಯಿಸಿಕೊಳ್ಳು ಶಾಸಕನ ಅಭಿಲಾಷೆಯನ್ನು ಗೊತ್ತು ಮಾಡಿಕೊಂಡ ಕೆಂಭಾವಿ ಪಟ್ಟಿಯ ಜ ಈ ಸಲ ಒಮ್ಮತದಿಂದ ರಾಜಶೇಖರ ಗೂಗಲ್ ಎಂಬ ವ್ಯಕ್ತಿಯನ್ನು ಬಿಜೆಪಿಯಿಂ ಅಭ್ಯರ್ಥಿಯಾಗಿ ನಿಲ್ಲಿಸಿದ್ದಾರೆ. ಬಹುಶಃ ಇದು ಜನರ ಆಶಯವಾದುದರಿಂ ಅದು ಕ್ಲಿಕ್ ಆಗುವ ಸಾಧ್ಯತೆಗಳೆ ಬಹಳ ಇವೆ.

ಇದೆಲ್ಲಕ್ಕಿಂತ ಮುಖ್ಯವಾಗಿ ಯಾದಗಿರಿ ಜಿಲ್ಲೆಯಲ್ಲಿರುವ 22 ಜಿಲ ಪಂಚಾಯತ್‌ಗಳ ಪೈಕಿ 13 ಕ್ಷೇತ್ರಗಳು ಮಹಿಳಾ ಮೀಸಲ ಕ್ಷೇತ್ರಗಳಾದ್ದರಿಂದ ಸಹಜವಾಗಿಯೆ ಚುನಾವಣೆರಂಗು ಸ್ವ ನೀರಸವಾಗಿದೆ. ಆದರೆ ತಮ್ಮ ಹೆಂಡಿರ ಸೆರಗಿನ ಚುಂಗು ಹಿಡಿದ ರಾಜಕೀಯ (ಹಣ ಗಳಿಕೆ) ಮಾಡಬೇಕೆಂದಿರುವ ಆಕಾಂಕ್ಷಿಗ ಹಿಂದೇನು ಸಣ್ಣದಲ್ಲ. ಒಂದು ಪಕ್ಷ ಟಿಕೆಟ್ ಕೊಡದೆ ಹೋದರೆ ಕ್ಷಣವೇ ಇನ್ನೊಂದು ಪಾರ್ಟಿಯ ಬಿ- ಫಾರ್ಮ್ ಪಡೆದು ಸ್ಪರ್ಧಿಸು ಅಭ್ಯರ್ಥಿಗಳಿಗೂ ಇಲ್ಲಿ ಕೊರತೆ ಇಲ್ಲವಾಗಿದೆ.

ಜಿಲ್ಲೆಯ 22 ಜಿ.ಪಂ. ಕ್ಷೇತ್ರಗಳಿಗೆ 155 ನಾಮಪತ್ರಗಳ ತಾ.ಪಂ.ನ 81 ಕ್ಷೇತ್ರಕ್ಕೆ 449 ನಾಮಪತ್ರಗಳು ಸಲ್ಲಿಕೆಯಾಗಿ ಎಂಬ ಸಂಗತಿ ಮಾತ್ರ ಎಲ್ಲರನ್ನೂ ಬೆರಗಾಗಿಸುತ್ತದೆ. ನಾಮಪ ಹಿಂದಕ್ಕೆ ಪಡೆಯುವ ಕೊನೆಯ ದಿನಗಳವರೆಗೂ ಜಿಪಂ ಹಾಗೂ ತಾಪಂ ಸಂಪೂರ್ಣ ಚಿತ್ರಣ ಕೊಡುವುದು ಕಷ್ಟ.

ಆದರೆ, ಮುಂದೆ ಶಾಸಕನಾಗಿ ಆಯ್ಕೆಯಾಗಲೇಬೇಕು ಎಂದ ಗುರಿಯನ್ನಿಟ್ಟುಕೊಂಡು ಹೊರಟ ಡಾ.ವೀರಬಸವಂತರೆಡ್ಡಿ ಮುದ್ನಾಳ ಡಾ.ವೆಂಕಟಪ್ಪನಾಯಕ ಹಾಗೂ ಶಹಾಪುರ ಮತಕ್ಷೇತ್ರ ಮಾಜಿ ಶಾಸಕ ಶಿವಶೇಖರಪ್ಪ ಪಾಟೀಲರ ಪುತ್ರ ಗುರು ಪಾಟೀಲ ಸಾಕಷ್ಟು ಹೋರಾಡಲೇಬೇಕಿದ

• ವಿಶ್ವಾರಾಧ್ಯ ಸತ್ಯಂಪೇಟ

ಹೆಗ್ಗಣವನಿಕ್ಕಿ ನೆಲಗಟ್ಟೆ ಕಟ್ಟಿದಂತಾಯ್ತು !

ಹಿಂದೂ ಧರ್ಮ ಇಂದು ಅಪಾಯದಲ್ಲಿದ್ದರೆ ಅದು ಕ್ರಿಶ್ಚಿಯನ್ ಮಿಷನರಿಗಳಿಂದಾಗಲೀ, ಲವ್ ಜಿಹಾದ್‌ನಿಂದಾಗಲೀ, ಭಯೋತ್ಪಾದಕ ದಾಳಿಗಳಿಂದಾಗಲೀ ಅಥವಾ ಧಾರ್ಮಿಕ ಪ್ರವೃತ್ತಿ ಕಡಿಮೆಯಾಗಿರುವ 'ಕಲಿಗಾಲ'ದ ಪ್ರಭಾವದಿಂದಾಗಲೀ ಅಲ್ಲ. ಜಗತ್ತೇ ಸಮಾನತೆ, ಮಾನವೀಯತೆಗಳ ಆಧಾರದ ಪ್ರಜಾಪ್ರಭುತ್ವವಾದಿ ಮೌಲ್ಯಗಳಿಗೆ ಎಚ್ಚೆತ್ತುಕೊಳ್ಳುತ್ತಿರುವ ಈ ಕಾಲದಲ್ಲೂ ಹೇಳುವುದನ್ನು ನೋಡಿದರೆ ನಾವೆತ್ತ ಸಾಗುತ್ತಿದ್ದೇವೆ ಎಂದು ಕೇಳಿಕೊಳ್ಳುವಂತಾಗುತ್ತದೆ. ದೇವನಿಗಿಂತ ಪೂಜಾರಿಯೇ ದೊಡ್ಡವನಾಗುತ್ತಿರುವ, ಭಕ್ತಿಗಿಂತ ಆಚರಣೆಗಳೇ ದೊಡ್ಡದಾಗುತ್ತಿರುವ ವೈರುಧ್ಯ ಇಂದು ನಮ್ಮ ಮುಂದಿದೆ.

ಎಂದಿನಿಂದ ನಡೆದು ಬಂದಿದೆಯೆನ್ನುವ ಕಾರಣಕ್ಕೆ ಎಲ್ಲವನ್ನೂ ಒಪ್ಪಲಾಗುವುದಿಲ್ಲ. ಹಳೆಯದೆಲ್ಲ ಪರಂಪರೆಯೆನಿಸಿಕೊಳ್ಳುವುದಿಲ್ಲ. ರೂಢಿಗತ ಆಚರಣೆಯೆಂದು



'ಅನಾದಿ' ಕಾಲದಿಂದ ನಡೆದುಬಂದಿದೆಯೆನ್ನಲಾದ ಕಾರಣಕ್ಕೆ ಅನಿಷ್ಟ ಸಂಪ್ರದಾಯಗಳನ್ನು ಹಾಗೇ ಉಳಿಸಿಕೊಂಡು ಬರಲು ಹವಣಿಸುತ್ತಿರುವ ದುಷ್ಟ ಮನಸ್ಸುಗಳಿಂದ ಅದು ಅಳಿವಿನಂಚಿನಲ್ಲಿದೆ.

ಇತ್ತೀಚೆಗೆ ಸುಬ್ರಹ್ಮಣ್ಯ ಷಷ್ಠಿಯ ದಿನ ಕುಕ್ಕೆ ಸುಬ್ರಹ್ಮಣ್ಯ ಹಾಗೂ ಚಿಕ್ಕಬಳ್ಳಾಪುರದ ಸುಬ್ರಹ್ಮಣ್ಯ ದೇವಸ್ಥಾನಗಳಲ್ಲಿ ಬ್ರಾಹ್ಮಣರು ಉಂಡುಬಿಟ್ಟ ಎಲೆಯ ಮೇಲೆ ಭಕ್ತಾದಿಗಳು ಉರುಳು ಸೇವೆ ಮಾಡಿದ್ದು ನೋಡಿ 'ಅಯ್ಯೋ, ಈ ಘನತೆವೆತ್ತ ಧರ್ಮದ ಸ್ಥಿತಿ ಹೀಗಾಗಿದೆಯಲ್ಲ' ಎಂದು ಮರುಗುವಂತಾಯಿತು. ಜಾತಿಮತವೆನ್ನದೇ ಎಲ್ಲ ಮತದವರು ಉಂಡ ಎಲೆ ಮೇಲೆ ಎಲ್ಲರೂ ಬಿದ್ದು ಉರುಳಾಡಿದ್ದರೆ ಆಧ್ಯಾತ್ಮ ಪ್ರೇರಿತ ಸಮಾನತೆಯ ವಿಲಕ್ಷಣ ಪ್ರದರ್ಶನವೆನ್ನಬಹುದಿತ್ತು. ಆದರೆ ಸಮಾನತೆ ಎಂಬ ಪದಕ್ಕೆ ತಮ್ಮ ಕನಸು ಮನಸಿನಲ್ಲೂ ಇಂಬುಗೊಡದ ಜನರು ಪ್ರತಿವರ್ಷ ತಮ್ಮ 'ಕ್ಷೇತ್ರಮಹಾತ್ಮೆ' ಹೆಚ್ಚಿಸಿಕೊಳ್ಳಲು ಇಂಥ ಮೌಢ್ಯದ ಆಚರಣೆಗಳಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಆದರೆ ಇಂತಹ ಆಚರಣೆಗಳಿಂದ ಧರ್ಮ ಸಂಸ್ಥಾಪನೆ ಆಗುವುದಿಲ್ಲ, ದೇವರು ಇಂಥ ಭೂಮಿಯಲ್ಲಿ ಮತ್ತೆ ಹುಟ್ಟಿ ಬರುವುದೂ ಇಲ್ಲ.


ಈ ರಿವಾಜಿನಲ್ಲಿ ಎರಡು ದುಷ್ಟತನಗಳು ಕಣ್ಣಿಗೆ ರಾಚುವಂತಿವೆ: ಒಂದು - ಬ್ರಾಹ್ಮಣರಿಗಾಗಿಯೇ ಪ್ರತ್ಯೇಕ ಭೋಜನ ಪಂಕ್ತಿ ಏರ್ಪಡಿಸುವುದು; ಎರಡು - ಅವರೆಲ್ಲ ಹೊಟ್ಟೆತುಂಬ ಉಂಡು ಬಿಟ್ಟ ಬಾಳೆಲೆ ಮೇಲೆ ಉಳಿದವರು ಉರುಳಿ ಹೊರಳಾಡಿದರೆ ಚರ್ಮ ರೋಗ ನಿವಾರಣೆಯಾಗುತ್ತದೆಂಬ ಸುಳ್ಳುಕತೆ ಹಬ್ಬಿಸಿ ಜಾತಿ ಮೇಲರಿಮೆಯನ್ನು ಕಾದುಕೊಳ್ಳುತ್ತಿರುವುದು. ಬ್ರಾಹ್ಮಣರಿಗೆ ಊಟ ಹಾಕುವುದಷ್ಟೇ ಪುಣ್ಯವಲ್ಲ, ಅವರು ಉಂಡು ಉಳಿಸಿದ ಶೇಷದ ಮೇಲೆ ಹೊರಳಾಡಿದರೆ ಇನ್ನೂ ಪುಣ್ಯ! ಈ ಮೌಢ್ಯದ ಪರಮಾವಧಿಯನ್ನು ಸಮರ್ಥಿಸುತ್ತ ನ್ಯಾಯಾಧೀಶರು, ವೈದ್ಯರು, ಎಂಜಿನಿಯರರೇ ಮೊದಲಾದ 'ಕಲಿತ', ಸಮಾಜದ ಕೆನೆಪದರದ ಜನರೂ ಪಾಲ್ಗೊಂಡಿದ್ದು ಹಾಗೂ ಅದನ್ನು ವಿರೋಧಿಸುವವರ ಪ್ರಯತ್ನವೇ ಹಾಸ್ಯಾಸ್ಪದ, ವ್ಯಕ್ತಿಸ್ವಾತಂತ್ರ್ಯದ ಹರಣ ಎಂಬಂತೆ ಮಾಧ್ಯಮಗಳ ಎದುರಿಗೆ ಕುರಿ-ಕೋಣ ಬಲಿ ಕೊಡಲು ಒಪ್ಪಿಬಿಡುತ್ತೇವೆಯೇ ನಾವು? ತುಂಬ ಜನ ಭಕ್ತರು ನಡೆದುಕೊಳ್ಳುತ್ತಾರೆಂಬ ಕಾರಣಕ್ಕೆ ದೇವದಾಸಿ ಪದ್ಧತಿಯನ್ನು ಬೆಂಬಲಿಸಬಹುದೆ? ಹಿಂದಿನಿಂದಲೂ ನಡೆದುಬರುತ್ತಿತ್ತೆಂದು ವಿಧವೆಯರ ತಲೆ ಈಗಲೂ ಬೋಳಿಸಿ ಎನ್ನಲು ಬರುವುದೇ? ಮಡಿಮಡಿಯೆಂದು ತಿಂಗಳಲ್ಲಿ ಮೂರುದಿನ ಹೆಣ್ಣುಮಕ್ಕಳನ್ನು ಆಫೀಸಿನಲ್ಲಿ ಹೊರಕೂರಲು ಹೇಳಬಹುದೆ? ನಮಗೆ ಬೇಕಾದ ಕಡೆಯೆಲ್ಲ ರಾಜಿಯಾಗಿ 'ಆಪದ್ಧರ್ಮ' ಅನುಸರಿಸುವ ನಾವು ಮನುಷ್ಯನ ಘನತೆ, ಆತ್ಮಗೌರವಕ್ಕೆ ಚ್ಯುತಿ ತರುವ 'ಮಡೆಸ್ನಾನ'ದಂತಹ ಕೆಟ್ಟ ಸಂಪ್ರದಾಯವನ್ನೇಕೆ ನಿಲ್ಲಿಸಬಾರದು? ಮನುಷ್ಯ ಮನುಷ್ಯರ ನಡುವಿನ ಅಸಮಾನತೆಯನ್ನು ಎತ್ತಿ ಹಿಡಿಯುವ ಪಂಕ್ತಿ ಭೋಜನವನ್ನು 'ಸಕಲ ಜೀವರಾಶಿಗಳ ಸೃಷ್ಟಿಕರ್ತ' ದೇವರ ಎದುರಿನಲ್ಲೂ ಏಕೆ ಮುಂದುವರಿಸಬೇಕು?

ಇದನ್ನು ಸರಿಯೆಂದು ಪ್ರತಿಪಾದಿಸುವವರಲ್ಲಿ ಎಲ್ಲ ವರ್ಗದ ಜನರೂ ಕಾಣುತ್ತಾರೆ. ಒಂದೆಡೆ ಶ್ರೇಣೀಕೃತ ಸಮಾಜದ ಮೇಲ್‌ಸ್ತರದ ಜನರು ಇಂಥದನ್ನು ತಮ್ಮ ಲಾಭಕ್ಕಾಗಿ ಮುಂದುವರೆಸಿಕೊಂಡು ಹೋಗಲು ಹುನ್ನಾರಗಳನ್ನು ಸೃಷ್ಟಿಸುತ್ತಿದ್ದರೆ, ಮತ್ತೊಂದೆಡೆ ಇದಕ್ಕೆ ಬಲಿಯಾದ ಸಮುದಾಯವೇ 'ಇರಲಿ, ಇದು ನಮ್ಮಿಚ್ಛೆಯಂತೇ ನಮ್ಮ ಒಳಿತಿಗಾಗಿಯೇ ನಡೆಯುತ್ತಿದೆ' ಎಂದು ಸಾರುತ್ತಾ ತನ್ನ ಕಣ್ಣಿಗೆ ಬಿದ್ದ ಸುಣ್ಣವನ್ನೂ ಬೆಣ್ಣೆಯೆಂದೇ ನಂಬಿದೆ. ಇದು ಪಾವ್ಲೋ ಫ್ರೇರೆ ಹೇಳಿದ 'ಮೌನ ಸಂಸ್ಕೃತಿ'. ಶೋಷಿತ ವರ್ಗವು ಹೋರಾಟಕ್ಕಿಳಿಯುವುದು ಒತ್ತಟ್ಟಿಗಿರಲಿ, ತಮ್ಮ ಶೋಷಕನಿಗೆ ಅನುಕೂಲವಾಗುವ ರೂಢಿಗಳನ್ನೇ ಅಪ್ರಜ್ಞಾಪೂರ್ವಕವಾಗಿ ಬೆಳೆಸಿಕೊಂಡು ಮೌನ ತಾಳುತ್ತಾ ಹೋಗುವ ಸಂಸ್ಕೃತಿ ಇದು. ಇಂಥದರ ವಿರುದ್ಧ ಬುದ್ಧನಿಂದ ಹಿಡಿದು ಆತ್ಮಗೌರವ, ಸಮಾನತೆಗಾಗಿ ಹೋರಾಡಿದ ಅಂಬೇಡ್ಕರ್‌ತನಕ ಎಲ್ಲರ ಪ್ರಯತ್ನಗಳನ್ನೂ ನುಂಗಿ ನೀರು ಕುಡಿದ ಸಮಾಜ ವ್ಯವಸ್ಥೆ ನಮ್ಮದು.

ಇಂಥ ಕಡೆ ಬದಲಾವಣೆ ಎಲ್ಲ ಕಡೆಗಳಿಂದ ಬರಬೇಕಿದೆ. 'ಮಡೆಸ್ನಾನ' ಮಾಡುವವನಲ್ಲಿ - ಆತ ಯಾವ ಜಾತಿಯವನೇ ಆಗಿರಲಿ - ಇಂಥ ಆಚರಣೆಗಳು ತನ್ನನ್ನು ದೇವರ ಹತ್ತಿರವಿರಲಿ, ಪೂಜಾರಿಯ ಆತ್ಮದ ಹತ್ತಿರವೂ ಕೊಂಡೊಯ್ಯಲಾರವು ಎಂಬ ಸತ್ಯ ಹೊಳೆಯಬೇಕಿದೆ. ಇಂಥ ಪದ್ಧತಿಯನ್ನು ಪೋಷಿಸುತ್ತಿರುವ ಪುರೋಹಿತಶಾಹಿಗಳೇ ಇದರ ಬದಲು ದೇವರಿಗಾಗಿ ಬೇರೆ ಸೇವೆ-ಪೂಜೆ-ಪ್ರಾರ್ಥನೆಯನ್ನು ಕೈಗೊಳ್ಳಬಹುದೆಂದು ಭಕ್ತಾದಿಗಳಿಗೆ ಸೂಚಿಸಬೇಕಾಗಿದೆ. ಇಂಥ ಸಾಮಾಜಿಕ ಬದಲಾವಣೆಗಳನ್ನು ನ್ಯಾಯಾಲಯ ಅಥವಾ ಕಾನೂನು ಜಾರಿಯಿಂದ ಮಾಡಲಾಗುವುದಿಲ್ಲ. ಒಟ್ಟಾರೆ ಸಮಾಜ ವ್ಯವಸ್ಥೆಯಲ್ಲಿ ಜನರ ಮನಸ್ಥಿತಿಯಲ್ಲಿಯೇ ಆಮೂಲಾಗ್ರ ಬದಲಾವಣೆ ಆಗಬೇಕು. ಅಂಥ ಬದಲಾವಣೆಗೆ ಇನ್ನೂ ಕಾಲ ಪಕ್ವವಾಗಿಲ್ಲವೆಂದಾದರೆ ಅಂಥ ಕಾಲ ಬರುವುದು ಯಾವಾಗ?

* * * * *

ಅನೇಕ ದಾರ್ಶನಿಕರು ಕಂಡುಕೊಂಡಂತೆ ಮನುಷ್ಯನಿಗೆ ಧರ್ಮ ಬೇಕು. ಹಿಂದೂ ಧರ್ಮದ ಕಟು ಟೀಕಾಕಾರರಾಗಿದ್ದ ಅಂಬೇಡ್ಕರ್ ಕೂಡಾ 'ಧರ್ಮ ಅಫೀಮಿದ್ದಂತೆ' ಎಂಬ ಕಾರ್ಲ್‌ಮಾರ್ಕ್ಸ್ ಮಾತನ್ನು ಒಪ್ಪುವುದಿಲ್ಲ. ಶೇ.90ರಷ್ಟು ಜನ ಬರಿಯ ಉಂಡುಟ್ಟು ನಲಿದರೆ ಜೀವನ ಸಾರ್ಥಕವಾಯಿತೆಂದು ಭಾವಿಸುವುದಿಲ್ಲ. ಅದರಲ್ಲೂ ಹಸಿವೆ ಬಡತನ ಎಲ್ಲಿ ಹೆಚ್ಚಿದೆಯೋ ಅಲ್ಲಿ ಧಾರ್ಮಿಕ ಶ್ರದ್ಧೆ ಪ್ರಭಾವ ದಟ್ಟವಾಗಿ ಕಾಣುತ್ತದೆ. ಸೋತವರನ್ನು ಯಾವಾಗಲೂ ಸುಲಭವಾಗಿ ಪ್ರಭಾವಿಸಬಹುದು, ಬದಲಿಸಬಹುದು ಅಥವಾ ಮೋಸಗೊಳಿಸಬಹುದು. ಇಂಥ ಅತೃಪ್ತ ಜನಸಮುದಾಯವಿರುವ ಕಡೆಯೇ ಹೊಸ ಧರ್ಮಗಳು - ಕ್ರಿಶ್ಚಿಯನ್ ಧರ್ಮವೂ ಸೇರಿದಂತೆ - ಹುಟ್ಟಿ ಬೆಳೆದಿವೆ. ಸ್ಥಾಪಿತ ಧರ್ಮದಿಂದ ತನ್ನ ಪರಿಸ್ಥಿತಿ ಸುಧಾರಣೆಯಾಗದೆಂದು ಅಂಥವನಿಗೆ ಎನಿಸಿದ್ದರೆ ಆಶ್ಚರ್ಯವಿಲ್ಲ. ಮತಾಂತರದ ಹಿಂದೆಯೂ ಇದೇ ಮನಸ್ಥಿತಿ ಇರುತ್ತದೆ. ಮತಾಂತರವನ್ನು ಕಟ್ಟಾ ವಿರೋಧಿಸುವವರು ಮೊದಲು ಜನಸಮುದಾಯ ಏಕೆ ಹಾಗೆ ವಾಲುತ್ತಿದೆಯೆಂದು ಅರಿತು, ತಮ್ಮ ಕೆಂಗಣ್ಣುಗಳನ್ನು ಮಿಷನರಿಗಳ ಮೇಲಿಂದ ಇತ್ತ ಸರಿಸುವುದು ಒಳಿತು.



ಸಮಾನತೆ ಪ್ರಕೃತಿ ಸಹಜವಲ್ಲವಾದರೆ, ಅದನ್ನು ಸಾಧಿಸಬೇಕು. ಏಕೆಂದರೆ ಅಸಮಾನತೆ ಒಪ್ಪಿತ ಮೌಲ್ಯವಲ್ಲ. ಶಾಸ್ತ್ರ - ಪುರಾಣ ಎಲ್ಲ ಓದಿ ತಿಳಿದವರು ಆತ್ಮಾವಲೋಕನ ಮಾಡಿಕೊಳ್ಳಲಿ. ತಮ್ಮ ಪ್ರತಿಯೊಂದು ಕ್ರಿಯೆಗೂ ಶಾಸ್ತ್ರಾಧಾರವಿದೆ ಎಂದು ಉಲ್ಲೇಖಿಸುವ ಜನ ಅವನ್ನೆಲ್ಲ ಸುಳ್ಳುಸುಳ್ಳಾಗಿ ತಮಗೆ ಬೇಕಾದ ಹಾಗೆ ಅರ್ಥೈಸಿಕೊಂಡಿ ದ್ದಾರೆನ್ನದೇ ವಿಧಿಯಿಲ್ಲ. 'ಆತ್ಮ' 'ಬ್ರಹ್ಮ' 'ವಸುಧೈವ ಕುಟುಂಬ'ದ ಬಗ್ಗೆ ಉದ್ಗ್ರಂಥಗಳೇ ಇದ್ದರೂ ಎಲ್ಲ ಮನುಷ್ಯರೂ ಸಮಾನರೆಂದು ಅವು ಹೇಳಲಿಲ್ಲವೇ? ವೇದ ಶಾಸ್ತ್ರಗಳ ಆಧಾರದ ಮೇಲೆ ಏನನ್ನಾದರೂ 'ಹೌದು' ಅಥವಾ 'ಅಲ್ಲ' ಎಂದು ವಾದಿಸಿ, ಸಾಧಿಸಿಬಿಡುವುದರಲ್ಲಿ ನಿಸ್ಸೀಮರು ನಾವು. ನಿಜ ಹೇಳಬೇಕೆಂದರೆ ಅಂಥ ಯಾವ ಪ್ರಾಮಾಣ್ಯವೂ ಅಪ್ರಸ್ತುತವಿಲ್ಲ, ಎಲ್ಲರೂ ಅವರವರ ಮನಸ್ಸಿನ ಪ್ರಮಾಣವನ್ನೊಮ್ಮೆ ಪ್ರಶ್ನಿಸಿಕೊಂಡು ಹೊರಬಂದರೆ ನಮಗೆ ಬೇಕಾಗಿರುವುದು ಮನದ ಪ್ರಮಾಣವೇ ಹೊರತು ಶಾಸ್ತ್ರ ಪ್ರಮಾಣವಲ್ಲ ಎಂಬುದು ಹೊಳೆಯುತ್ತದೆ. ದೇವನೂರು ಹೇಳುವ ತ್ರಿಜ ದೀಕ್ಷೆ - ಮಾನವೀಯತೆಯ ದೀಕ್ಷೆ - ಎಂದರೆ ಇದೇ.

ಧರ್ಮ ಜಾಗೃತಿಯುಂಟುಮಾಡುತ್ತಿರುವವರಿಗೇಕೆ ತಿಳಿಯುತ್ತಿಲ್ಲವೋ?! ಎಲ್ಲ ಜಾತಿ ಕಾಯಿಲೆಗಳನ್ನು ಒಳಗೇ ಮುಚ್ಚಿಟ್ಟುಕೊಂಡು ಹಿಂದೂ ಧರ್ಮದ ಪುನರುತ್ಥಾನ ಖಂಡಿತಾ ಸಾಧ್ಯವಿಲ್ಲ.

ಅದು 'ಹೆಗ್ಗಣವನಿಕ್ಕಿ ನೆಲಗಟ್ಟೆ ಕಟ್ಟಿದಂತೆ' ಕಾಣಾ ರಾಮನಾಥಾ..


* * * * *

ನೀಷೆ ನೆನಪಾಗುತ್ತಾನೆ. ನೀಷೆಯ ಹುಚ್ಚ ಜನರ ಮಧ್ಯೆ ನಿಂತು ಆರ್ತ ದನಿಯಲ್ಲಿ 'ದೇವರೆಲ್ಲಿ ಹೋದ? ನಾನು ಹೇಳುತ್ತೇನೆ ಕೇಳಿ. ನಾವೆಲ್ಲ ಸೇರಿ ಅವನನ್ನು ಕೊಂದು ಹಾಕಿದೆವು. ಹೌದು, ನಾನು ನೀವು ಎಲ್ಲರೂ ಕೊಲೆಪಾತಕಿಗಳು. ಇಂತಹ ಪಾತಕ ಎಸಗಲು ನಮಗೆ ಹೇಗೆ ಸಾಧ್ಯವಾಯಿತು? ಸಮುದ್ರದ ನೀರನ್ನೆಲ್ಲ ಒಮ್ಮೆಲೇ ಕುಡಿಯಲು ಹೇಗೆ ಸಾಧ್ಯವಾಯಿತು?' ಎಂದು ಕೇಳುತ್ತಿರುತ್ತಾನೆ.

ಹೌದು, ಎಲ್ಲರೂ ಕೊಲೆಪಾತಕಿಗಳು.

• ಡಾ. ಅನುಪಮ. ಎಚ್.ಎಸ್


ಕುಂದಾಪುರದಲ್ಲಿ ಕೋಮುವಾದಿಗಳ ಕೋಲಾಹಲ





'ನೀರು ಕೇಳಿ ಹಾಲು ಕೊಟ್ಟೇವು
ಕಾಶ್ಮೀರ ಕೇಳಿದರೆ ನಾಲಿಗೆ ಸೀಳೇವು'

- ಇಂತಹ ಬರಹವಿರುವ ಬ್ಯಾನರ್ ನಿಜಕ್ಕಾದರೆ ಎಲ್ಲಿರಬೇಕು? ಹೆಚ್ಚೆಂದರೆ ಇದನ್ನು ಉರ್ದು ಭಾಷೆಯಲ್ಲಿ ಬರೆದು ವಾಘಾ ಗಡಿಯಾಚೆ ಪಾಕಿಸ್ತಾನದಲ್ಲಿ ಪ್ರದರ್ಶಿಸಬೇಕು. ಕಾಶ್ಮೀರವನ್ನು ಸದ್ಯಕ್ಕೆ ಅದೇ ನೆಲದ ಕಾಶ್ಮೀರಿಗಳು ನಮ್ಮ ನೆಲವನ್ನು ನಮಗೆ ಬಿಟ್ಟು ಬಿಡಿ ಎಂದು ಹೋರಾಡುತ್ತಿದ್ದಾರೆ. ಅದನ್ನು ಬಿಟ್ಟರೆ ಆಗಾಗ ಕಾಶ್ಮೀರದ ಕುರಿತು ಕ್ಯಾತೆ ತೆಗೆಯುತ್ತಿರುವುದು ಪಾಕಿಸ್ತಾನ. ಕನಿಷ್ಠ ಕಾಶ್ಮೀರದ ಕುರಿತು ಇಷ್ಟಾದರೂ ಧಮಕಿಯನ್ನು ಸಂಘಪರಿವಾರ ಪಾಕಿಸ್ತಾನಕ್ಕೆ ಕೊಟ್ಟಿತಲ್ಲಾ ಎಂದು ತನ್ನಷ್ಟಕ್ಕೆ ತಾನಾದರೂ ಖುಷಿಪಡಬಹುದು. ಆದರೆ ಅಷ್ಟು ಎದೆಗಾರಿಕೆ ಸಂಘಪರಿವಾರಕ್ಕಿಲ್ಲ, ಅವರ ಅಜೆಂಡಾ ಭಾರತದ ಬಡ, ಅಸಹಾಯಕ ಮುಸಲ್ಮಾನರ ಬದುಕನ್ನು ನಾಶ ಮಾಡುವುದು ಮಾತ್ರ. ಮೇಲೆ ಕಾಣಿಸಿದ ಬರಹವನ್ನು ಹೊಂದಿದ್ದ ಬ್ಯಾನರ್ ಒಂದು ಮೊನ್ನೆ ಕುಂದಾಪುರದ ಅತ್ಯಂತ ಜನನಿಬಿಡ ಮತ್ತು ಕೋಮುಸೂಕ್ಷ್ಮ ಪ್ರದೇಶವೂ ಆಗಿರುವ ಶಾಸ್ತ್ರಿ ಸರ್ಕಲ್ ಬಳಿ ನಾಲ್ಕೈದು ದಿನಗಳ ಕಾಲ ಜನರ ಕಣ್ಣೆದುರೇ ಇತ್ತು.


ಸೈಯದ್

ಇಷ್ಟು ಮಾತ್ರವಲ್ಲ 'ಇಡೀ ಕುಂದಾಪುರದಾದ್ಯಂತ ಎಲ್ಲಿ ನೋಡಿದರಲ್ಲಿ ಕೇಸರಿ ಬಟ್ಟೆಗಳ ಮೇಲೆ ಬರೆದ ಅನೇಕ ಉದ್ರೇಕಕಾರಿ ಬ್ಯಾನರ್‌ಗಳನ್ನು ಹಾಕಲಾಗಿತ್ತು, ಪ್ರತಿಯೊಂದು ಬ್ಯಾನರ್ ನಲ್ಲಿಯೂ 'ವೈರಿ, ಗೋರಿ, ಕುತಂತ್ರ, ಆಕ್ರಮಣ, ಬಗ್ಗೆವು, ಕುಗ್ಗೆವು, ಹುನ್ನಾರ, ಸಮರ, ಯುದ್ಧ, ಸಿದ್ಧ' ಎಂಬ ಶಬ್ದಗಳಿದ್ದವು. ಇಡೀ ಕುಂದಾಪುರ ಪೇಟೆಯಲ್ಲಿ ಈ ಬ್ಯಾನರ್‌ಗಳೇ ಒಂದು ಉದ್ರೇಕದ ವಾತಾವರಣವನ್ನು ನಿರ್ಮಿಸಿದ್ದವು. ಕುಂದಾಪುರದ ಅನೇಕ ಪ್ರಜ್ಞಾವಂತ ಜನ 'ಇವರಿಗೆ ವೈರಿ ಯಾರು, ಕಾಶ್ಮೀರ ಕೇಳಿದವರು ಯಾರು, ಇವರು ಯಾರ ನಾಲಿಗೆ ಸೀಳುತ್ತಾರೆ, ಯಾರ ಗೋರಿ ಕಟ್ಟುತ್ತಾರೆ, ಇದೆಲ್ಲ ನಮಗೆ ಅರ್ಥವೇ ಆಗುತ್ತಿಲ್ಲ, ಇಂತಹ ಬ್ಯಾನರ್‌ಗಳನ್ನು ಹಾಕಲಿಕ್ಕೆ ಇಲ್ಲಿನ ಸ್ಥಳೀಯಾಡಳಿತ ಅನುಮತಿ ನೀಡಿದ್ದಾದರೂ ಯಾಕೆ, ಪೊಲೀಸ್ ಇಲಾಖೆಗೆ ಈ ಬ್ಯಾನರ್‌ಗಳು ಕಾಣಿಸು ತ್ತಿಲ್ಲವೇ' ಎಂದು ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಳ್ಳುತ್ತಿದ್ದರು. ಡಿಸೆಂಬರ್ 12ರಂದು ಕುಂದಾಪುರದಲ್ಲಿ ಮುಸಲ್ಮಾನರ ಮನೆ, ಅಂಗಡಿ ಮುಂಗಟ್ಟುಗಳ ಮೇಲೆ ದಾಳಿ ಮತ್ತು ದೈಹಿಕ ಹಲ್ಲೆಗಳು ನಡೆದ ನಂತರವಂತೂ ಈ ದೌರ್ಜನ್ಯಕ್ಕೆ ಮುನ್ನುಡಿಯಾಗಿ ಈ ಬ್ಯಾನರ್‌ಗಳನ್ನು ಹಾಕಲಾಗಿತ್ತು ಎಂಬುದು ಸ್ಪಷ್ಟವಾಯಿತು.

ಇಸ್ಲಾಮಿಕ್ ಉಗ್ರಗಾಮಿಗಳು, ದೊಡ್ಡಣ್ಣ ಅಮೆರಿಕ ಮತ್ತು ಭಾರತದ ಹಿಂದೂ ಮತಾಂಧ ಪಡೆ ಮುಸಲ್ಮಾನರೆಲ್ಲರಿಗೂ ಭಯೋತ್ಪಾದಕರು, ಉಗ್ರರು ಎಂದು ಏನೆಲ್ಲಾ ಆರೋಪ ಗಳನ್ನು ಹೊರಿಸಿವೆ. ಆದರೆ ವಾಸ್ತವ ನೋಡಿ. ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಪದೇಪದೇ ಭಜರಂಗಿ ಪಡೆ ಇಲ್ಲಿನ ಅಮಾಯಕ ಮುಸಲ್ಮಾನರ ಮೇಲೆ ದಾಳಿ ಮಾಡುತ್ತಲೇ ಇದೆ ಮತ್ತು ಮುಸಲ್ಮಾನರು ಪ್ರತೀ ಸಲ ಪೆಟ್ಟು ತಿಂದು ನೋವು, ನಷ್ಟ ಅನುಭವಿಸುತ್ತಿದ್ದಾರೆ. ಸಹಿಸಿಕೊಂಡು ತಣ್ಣಗೆ ಇರುತ್ತಾರೆ. ಯಾವಾಗ ಇವರ ಸಹನೆಯ ಕಟ್ಟೆ ಒಡೆಯುತ್ತದೆ ಎಂದು ಸಂಘಪರಿವಾರ ಹೊಂಚುಹಾಕಿ ಕೂತಿದೆ.

ಡಿಸೆಂಬರ್ 13ರಂದು ಕುಂದಾಪುರದಲ್ಲಿ ಹಿಂದೂ ಸಮಾಜೋತ್ಸವ (ಮತಾಂಧರ ಸಮ್ಮೇಳನ ಎಂದು ಓದಿಕೊಳ್ಳಿ)ಕ್ಕೆ ಸಿದ್ಧತೆಗಳು ನಡೆದಿತ್ತು. ಹಿಂದೂ ಸಮಾಜೋತ್ಸವಕ್ಕೆ ಸಿದ್ಧತೆಗಳು ಎಂದರೆ ಕುರ್ಚಿ, ಸ್ಟೇಜು, ಶಾಮಿಯಾನ ಇತ್ಯಾದಿ ಎಂದು ಭಾವಿಸಬೇಡಿ. ಅವರ ಸಿದ್ಧತೆಗಳು ಬೇರೆಯೇ ರೀತಿಯದು. ಹಿಂದೂ ಸಮಾಜೋತ್ಸವಕ್ಕೆ ಪೂರ್ವಭಾವಿಯಾಗಿ ಅಲ್ಲೊಂದು ಕೋಮುಗಲಭೆ ಆಗಬೇಕು, ಸಾಬರಿಗೆ ಕಲ್ಲು ಹೊಡೆಯಬೇಕು, ತಮ್ಮ ಬ್ಯಾನರ್ ತಾವೇ ಸುಟ್ಟುಕೊಂಡು 'ಅವರು' ಸುಟ್ಟರು ಎಂದು ಪುಕಾರು ಹರಡಬೇಕು, ಅಲ್ಪಸಂಖ್ಯಾತರ ಬೈಕು, ಕಾರು, ಸೊತ್ತುಗಳಿಗೆ ಹಾನಿ ಮಾಡಬೇಕು. ಹೀಗಾದಾಗ ಮಾತ್ರ ಹಿಂದೂ ಸಮಾಜೋತ್ಸವದ ಸಿದ್ಧತೆಗಳು ಪೂರ್ಣಗೊಳ್ಳುತ್ತವೆ. ಮೊನ್ನೆ ಕುಂದಾಪುರದಲ್ಲಿ ಡಿಸೆಂಬರ್ 12ರಂದು ಸಂಭವಿಸಿದ್ದು ಇದಕ್ಕೆ ಭಿನ್ನವಾಗಿಲ್ಲ.


ಪ್ರವೀಣ್

ಸಮಾಜೋತ್ಸವದ ಹಿಂದಿನ ದಿನ ಕೋಮುವಾದಿ ಪಡೆ ಬೈಕ್ ರ್‍ಯಾಲಿಯೊಂದನ್ನು ಹಮ್ಮಿಕೊಂಡಿತ್ತು. ಈ ಬೈಕ್ ರ್‍ಯಾಲಿಗೆ ಜಿಲ್ಲಾಡಳಿತದ ಅನುಮತಿ ಇರಲೇ ಇಲ್ಲ ಎಂಬುದನ್ನು ಗಮನಿಸಿ. ಮುಸಲ್ಮಾನರು ಹೆಚ್ಚಿರುವ ಪ್ರದೇಶಗಳಲ್ಲಿಯೇ ಈ ಬೈಕ್ ರ್‍ಯಾಲಿ ಹೋಗಬೇಕೆಂದು ಮೊದಲೇ ತೀರ್ಮಾನವಾಗಿತ್ತು. ಅಂತೆಯೇ ಮುಸಲ್ಮಾನರು ಸಾಕಷ್ಟು ಸಂಖ್ಯೆಯಲ್ಲಿರುವ ಕೋಡಿಗೆ ಈ ಬೈಕ್ ರ್‍ಯಾಲಿ ಬಂದಿದೆ. ಅದೇಕೊ ತಿಳಿಯದು, ಮಸೀದಿಗಳು-ಮುಸಲ್ಮಾನ ಹುಡುಗರು-ಹೆಂಗಸರನ್ನು ಕಂಡೊಡನೆ ಈ ಭಜರಂಗಿ ಪಡೆಯ ಎಲ್ಲ ದೈಹಿಕ, ಮಾನಸಿಕ ರೋಗರುಜಿನಗಳು ಬಹಿರಂಗಕ್ಕೆ ಬರುತ್ತವೆ. ಇವರ ಬೈಕ್ ರ್‍ಯಾಲಿಯ ಉದ್ದಕ್ಕೂ ಮುಸಲ್ಮಾನರ ವಿರುದ್ಧ ತೀರಾ ಅಸಹ್ಯ, ಅಶ್ಲೀಲ ಮತ್ತು ಅವಮಾನಕಾರಿ ಘೋಷಣೆಗಳನ್ನು ಕೂಗುತ್ತಾ ಸಾಗಿದ್ದಾರೆ. ಮುಸಲ್ಮಾನರಿಗೆ ಬಿಡಿ, ಕೇಳಿದ ಎಲ್ಲರಿಗೂ ಅದು ಅಸಹ್ಯವೆಂದು ಕಂಡಿದೆ. ಹೀಗೆ ಸಾಗಿದ ಇವರ ಬೈಕುಗಳು ಸಮುದ್ರ ತೀರದ ಕೋಡಿ ಎಂಬ ಪ್ರದೇಶಕ್ಕೆ ಬಂದಿವೆ. ಇದು ಮುಸಲ್ಮಾನರು ಸಾಕಷ್ಟು ಸಂಖ್ಯೆಯಲ್ಲಿರುವ ಊರು. ಇಲ್ಲಿಗೆ ಬಂದ ತಕ್ಷಣ ಇವರ ಅಟ್ಟಹಾಸ ತಾರಕಕ್ಕೇರಿದೆ. ರಸ್ತೆಯಲ್ಲಿ ತಮ್ಮಷ್ಟಕ್ಕೆ ತಾವು ಹೋಗುತ್ತಿದ್ದ ಅನೇಕ ಮುಸ್ಲಿಮ್ ಹೆಂಗಸರಿಗೆ 'ಏಯ್ ಬುರ್ಖಾ ತೆಗಿ ಸೂ..' ಎಂದು ನಿಂದಿಸುತ್ತಾ ಅವರ ಮೈಗೆ ಕೇಸರಿ ಬಾವುಟದಲ್ಲಿ ಬಡಿದಿದ್ದಾರೆ. ಮನೆಗೆ ಹೋಗುತ್ತಿದ್ದ ಮುಸ್ಲಿಮ್ ಹುಡುಗರ ಟೋಪಿಯನ್ನು ಕಿತ್ತೆಸೆದು ಕೇಕೆ ಹಾಕಿದ್ದಾರೆ. ಮಸೀದಿಯ ಬಳಿ ಇದ್ದ ಬೆರಳೆಣಿಕೆಯ ಸಂಖ್ಯೆಯ ಯುವಕರ ಎದುರು ಬೈಕ್ ನಿಲ್ಲಿಸಿಕೊಂಡು ರಕ್ತ ಕುದಿಯುವಷ್ಟು ಹೀನಾಯವಾಗಿ ಅವಹೇಳನ ಮಾಡಿದ್ದಾರೆ. 'ತಾಕತ್ತಿದ್ರೆ ಬಾರಾ ಸಾಯ್ಸ್ತಾ' ಎಂದು ಆಹ್ವಾನವನ್ನೂ ನೀಡಿದ್ದಾರೆ. ಆದರೂ ಮುಸ್ಲಿಮ್ ಹುಡುಗರ ತಾಳ್ಮೆ ಕೆಟ್ಟಿರಲಿಲ್ಲ, ಆದರೆ ಯಾವಾಗ ಭಜರಂಗಿ ಪಡೆ ತಮ್ಮತ್ತ, ತಮ್ಮ ಮನೆಗಳತ್ತ ಕಲ್ಲು, ಬಾಟಲಿ ಎಸೆಯ ತೊಡಗಿತೋ ಆಗ ಸುಮ್ಮನೆ ಇರುವುದು ಸಾಧ್ಯವಿರಲಿಲ್ಲ. ಆಗ ಅಲ್ಲಿದ್ದದ್ದು 10-12 ಮುಸ್ಲಿಮ್ ಯುವಕರು ಮತ್ತು ಒಂದಿಬ್ಬರು ಹಿರಿಯರು. ಅವರು ಸ್ವರಕ್ಷಣೆಗೆ ಮುಂದಾಗಿದ್ದಾರೆ.



ಹಲ್ಲೆಗೊಳಗಾದ ಅಂಗವಿಕಲ

ಮಸೀದಿಯ ಬಳಿ ಇದ್ದ ಅಂಗವಿಕಲ ರೋವರ್‌ರ ಮೇಲೆ ಹಲ್ಲೆ ಮಾಡಿದ ಈ ತಂಡ ಕೋಡಿಯ ಅನೇಕ ಮುಸಲ್ಮಾನರ ಮನೆಗಳ ಮೇಲೆ ಕಲ್ಲೆಸೆಯಿತು. ಅಲ್ಲಿಂದ ಆಚೆ ಬಂದ ಸುಮಾರು ನೂರು ಮಂದಿಯಷ್ಟು ಇದ್ದ ತಂಡ ಸೌಹಾರ್ದಭವನದ ಬಳಿ ಇದ್ದ ಗುಲ್ವಾಡಿ ಹೌಸ್‌ನ ಮರಿಯಾ ಎಂಬವರ ಮನೆಯ ಮೇಲೆ ಏಕಾಏಕಿಯಾಗಿ ಕಲ್ಲು ತೂರಾಟ ನಡೆಸಿದೆ. ಮನೆಯಲ್ಲಿದ್ದ ಮರಿಯಾ ಮುಂದೆ ಆಗಬಹುದಾದ ಅನಾಹುತವನ್ನು ಊಹಿಸಿ ತಕ್ಷಣ ಮನೆಯ ಎಲ್ಲ ಬಾಗಿಲುಗಳನ್ನು ಭದ್ರಪಡಿಸಿ ಮನೆಯೊಳಗೆ ಅಲ್ಲಾಹನ ಮೊರೆ ಹೋಗಿದ್ದಾರೆ. ಅಂದು ಮರಿಯಾ ಮನೆಯ ಬಾಗಿಲುಗಳನ್ನು ಭದ್ರ ಪಡಿಸಿರದಿದ್ದರೆ ಅದೆಂತಹ ಅನಾಹುತವಾಗುತ್ತಿತ್ತು ಎಂದರೆ ಅದನ್ನು ಯೋಚಿಸಿದರೆ ಮರಿಯಾ ಈಗಲೂ ಬೆಚ್ಚಿಬೀಳುತ್ತಾರೆ. ಮನೆಯ ಎದುರಿನ ಮತ್ತು ಹಿಂದಿನ ಬಾಗಿಲುಗಳನ್ನು ಮುಚ್ಚಿದರೂ ಸಹ ಕೋಮುವಾದಿ ಹುಡುಗರ ಮೃಗೀಯ ವರ್ತನೆ ಮುಂದುವರಿಯಿತು. ಅವರ ಮನೆಯ ಹಿತ್ತಿಲಿಗೆ ನುಗ್ಗಿ ಬಚ್ಚಲು ಕೋಣೆಯ ಬಾಗಿಲನ್ನು ಮುರಿದುಹಾಕಲಾಯಿತು. ಹಿಂಬದಿಯ ಬಾಗಿಲನ್ನು ಪಿಕಾಸಿಯಲ್ಲಿ ಒಡೆಯುವ ಪ್ರಯತ್ನವಾಯಿತು. ಮರಿಯಾ ಕೂಡ ಗಾಯಗೊಂಡರು. ಇಷ್ಟೆಲ್ಲ ಆಗುವಾಗ ಮನೆಯ ಒಳಗಿದ್ದ 85 ವರ್ಷ ಪ್ರಾಯದ ಹಣ್ಣು ಹಣ್ಣು ಮುದುಕ ಮರಿಯಾರ ಮಾವ ಸೈಯ್ಯದ್ ಬ್ಯಾರಿ ಅದೇನಾಗುತ್ತಿದೆ ಎಂದು ತಿಳಿಯದೆ ಎದುರಿನ ಬಾಗಿಲು ತೆರೆದರು ನೋಡಿ. ಇವರ ಮೇಲೂ ಕಲ್ಲು ಸೋಡಾ ಬಾಟಲಿಗಳನ್ನು ಎಸೆಯಲಾಯಿತು. ಬಚ್ಚಲು ಮನೆಯಲ್ಲಿದ್ದ ಬಕೆಟ್ ತಂದು ಸಯ್ಯದ್‌ರ ಮುಖಕ್ಕೆ ಎಸೆಯಲಾಯಿತು. ಅವರ ಎದೆ, ಕಾಲುಗಳಿಗೆ ಗಾಯವಾಯಿತು. ಸಯ್ಯದ್ ಬ್ಯಾರಿಯವರನ್ನು ನೋಡಿದರೆ (ಚಿತ್ರ ನೋಡಿ) ಅವರ ಮೇಲೂ ಹಲ್ಲೆ ಮಾಡಿದ ಈ ಭಜರಂಗಿ ಪಡೆಯ ಕ್ರೌರ್ಯ ಯಾವ ಪರಿಯದು ಎಂದು ತಿಳಿಯುತ್ತದೆ.

ಚೆಡ್ಡಿ ಪಡೆಯ ದೌರ್ಜನ್ಯ ಇಷ್ಟಕ್ಕೇ ನಿಲ್ಲಲಿಲ್ಲ. ಬೆಂಗಳೂರಿನಿಂದ ಕೋಡಿಗೆ ಬರುತ್ತಿದ್ದ ಕೋಡಿಯ ಅಮೀರ್ ಜಾನ್ ಎಂಬವರು ಪ್ರಯಾಣಿಸುತ್ತಿದ್ದ ಬಸ್ ತಡೆದು ಅದರಲ್ಲಿನ ಹಿಂದೂ ಪ್ರಯಾಣಿಕರನ್ನೆಲ್ಲ ಇಳಿಸಿ ಅಮೀರ್ ಜಾನ್ ಪತ್ನಿ ತಸ್ಲಾ ಮತ್ತು ಮಗಳು ಮಿಸ್ರಿ ಎಂಬವರ ಮೇಲೆ ಹಲ್ಲೆ


ಯಹಾಂ ಕೌನ್ ಹೈ ತೇರಾ?

ಕುಂದಾಪುರದಲ್ಲಿ ಅಮಾಯಕ ಮುಸಲ್ಮಾನರ ಮೇಲೆ ಹಲ್ಲೆ ನಡೆಯಿತು. ಸೊತ್ತು ಹಾನಿಯಾಯಿತು. ಆದರೆ ಇಲ್ಲಿನ ರಾಜಕೀಯ ಪಕ್ಷಗಳ ಬೇಜವಾಬ್ದಾರಿತನ ನೋಡಿ. ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟರು ಬಿಜೆಪಿಯಲ್ಲಿದ್ದರೂ ಬಿಜೆಪಿಯವರ ಹಾಗೆ ಅಲ್ಲ, ಅವರು ಜಾತ್ಯತೀತ ಮನೋಭಾವದವರು ಎಂದೆಲ್ಲ ಹೇಳಲಾಗುತ್ತದೆ. ಅದು ನಿಜವೂ ಇರಬಹುದು. ಆದರೆ ಅವರು ಈ ತನಕ ನೊಂದವರನ್ನು ಮಾತನಾಡಿಸುವ ತಮ್ಮ ಕರ್ತವ್ಯವನ್ನು ನಿಭಾಯಿಸಿಲ್ಲ. ಮುಸಲ್ಮಾನರು ಅನ್ಯಾಯಕ್ಕೆ ಒಳಗಾದಾಗ ಅವರು ಮಾತಮಾಡಿಸಿದ ಪ್ರಕರಣಗಳು ಬಹಳ ವಿರಳವೇ. ಇನ್ನು ಮೋಹನದಾಸ ಶೆಣೈ ಎಂಬ ಆರೆಸ್ಸೆಸ್ ಮನುಷ್ಯ ಈ ಊರಿನ ಪ್ರಥಮ ಪ್ರಜೆ. 'ಹಿಂದುತ್ವದ ಜಯಘೋಷ ಮೊಳಗಲಿ' ಎಂಬ ಘೋಷಣೆಯ ಬ್ಯಾನರ್ ಒಂದು ಅವರ ಹೆಸರಿನಲ್ಲಿಯೇ ಕುಂದಾಪುರದ ಬೀದಿಯಲ್ಲಿ ಕಾಣಿಸಿತ್ತು ಎಂದಮೇಲೆ ಅವರು ಮುಸ್ಲಿಮರನ್ನು ಮಾತನಾಡಿಸುವ ಪ್ರಶ್ನೆಯೆ ಇಲ್ಲ. ಈ ಊರಿನ ನಾಗರಿಕರಿಗೆ ತೊಂದರೆಯಾದಾಗ ಅವರು ಮುಸಲ್ಮಾನರು ಎಂಬ ಕಾರಣಕ್ಕೆ ಅವರ ಬಳಿ ಹೋಗದ, ಅವರ ಅಹವಾಲನ್ನು ಕೇಳದ ಪ್ರಥಮ ಪ್ರಜೆ, ತಾನು ಈ ಊರಿನ ಚೆಡ್ಡಿಗಳಿಗೆ ಮಾತ್ರ ಪ್ರಥಮ ಪ್ರಜೆ ಎಂದು ಸಾಬೀತುಪಡಿಸಿದ್ದಾರೆ. ಬಿಡಿ, ಇದೆಲ್ಲ ಹಲ್ಲೆಕೋರ ಭಜರಂಗಿಗಳ ಸಂಬಂಧಿಕರ ಕುರಿತಾಯ್ತು.


ಮೋಹನ್


ಚಂದ್ರಶೆಟ್ಟಿ

ಆದರೆ, ಕಾಂಗ್ರೆಸ್ ಪಕ್ಷಕ್ಕೆ ಏನಾಗಿದೆ? ಕುಂದಾಪುರದಲ್ಲಿ ನಾಲ್ಕು ಬಾರಿ ಶಾಸಕರು, ಈಗ ವಿಧಾನ ಪರಿಷತ್ ಸದಸ್ಯರೂ ಆಗಿರುವ ಎಐಸಿಸಿ ಸದಸ್ಯರಾಗಿರುವ ಪ್ರತಾಪಚಂದ್ರ ಶೆಟ್ಟಿ ಎಂಬವರು ಒಬ್ಬರಿದ್ದಾರೆ. ಸನ್ಮಾನ್ಯರು ಎಲ್ಲಿರುತ್ತಾರೆ, ಹೇಗಿರುತ್ತಾರೆ ಎಂದು ಕುಂದಾಪುರದ ಕಾಂಗ್ರೆಸಿಗರಿಗೇ ತಿಳಿದಿರುವುದಿಲ್ಲ, ಕರಾವಳಿಯಲ್ಲಿ ಕಾಂಗ್ರೆಸ್ ನಿರ್ನಾಮಗೊಳ್ಳಲು ಅಪಾರ ಕೊಡುಗೆ ನೀಡಿರುವ ಇವರು ಈಗ ರಾಷ್ಟ್ರಮಟ್ಟದಲ್ಲಿ ಬೆಳೆಯುತ್ತಿದ್ದಾರೆ. ಇವರು ಕೋಮುಗಲಭೆಗಳಲ್ಲಿ ಸಂತ್ರಸ್ತರಾದವರನ್ನು ಮಾತನಾಡಿಸುವುದನ್ನು ಬಿಟ್ಟು ತುಂಬಾ ವರ್ಷಗಳೇ ಸಂದಿವೆ. ಈ ಬಾರಿಯೂ ಅವರು ತಮ್ಮ ಈ 'ಚಾರಿತ್ರ್ಯ'ವನ್ನು ಕಾಪಾಡಿಕೊಂಡಿದ್ದಾರೆ. ಅಂದರೆ ಯಾರನ್ನೂ ಅವರು ಏನಾಯ್ತು ಎಂದು ಕೇಳಿಲ್ಲ.


ಗೋಪಾಲಪೂಜಾರಿ

ಇನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಗೋಪಾಲ ಪೂಜಾರಿಯವರ ಮನೆ ಕುಂದಾಪುರದಲ್ಲೇ ಇದೆ. ಮನುಷ್ಯ ಒಳ್ಳೆಯವರೆ. ಕರಾವಳಿಯ ಎಲ್ಲ ಸಜ್ಜನ ಕಾಂಗ್ರೆಸಿಗರ ಹಾಗೆ ಅವರಿಗೂ ಮುಸಲ್ಮಾನರ ನೋವನ್ನು ಕೇಳಲು ಸಮಯವಿಲ್ಲ ಆಸಕ್ತಿ ಇಲ್ಲ. ವಿನಯ ಕುಮಾರ ಸೊರಕೆ, ಆಸ್ಕರ್ ಫೆರ್ನಾಂಡಿಸ್ ಮುಂತಾದ ನಾಯಕರಿಗೆ ಸಭೆ ಸಮಾರಂಭಗಳಿಗೆ ಹಾಜರಾಗಲು ಸಮಯ ಸಾಕಾಗುವುದಿಲ್ಲ, ಅವರು ಇಲ್ಲಿಗೆ ಯಾಕೆ ಬಂದಾರು?


ಶ್ರೀನಿವಾಸಶೆಟ್ಟಿ

ಬಿಜೆಪಿ ಮತ್ತು ಸಂಘಪರಿವಾರದವರು ನಡೆಸುವ ಹಲ್ಲೆಯಲ್ಲಿ ನೋವುಂಡ ಸಾಬರನ್ನು ಮಾತನಾಡಿಸಿದರೆ ತಮ್ಮ ಹಿಂದೂ ಓಟುಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬುದು ಕಾಂಗ್ರೆಸ್ ಲೆಕ್ಕಾಚಾರ. ಬಹುಸಂಖ್ಯಾತ ಹಿಂದೂ ಓಟುಗಳನ್ನು ಕರಾವಳಿಯ ಕಾಂಗ್ರೆಸ್ ತನ್ನದೇ ಬೇಜವಾಬ್ದಾರಿತನದಿಂದ ಕಳೆದುಕೊಂಡು ವರ್ಷಗಳೇ ಉರುಳಿವೆ. ಇನ್ನು ಅವರು ಕಳೆದುಕೊಳ್ಳಲಿಕ್ಕೆ ಬಾಕಿ ಇರುವುದು ಇಲ್ಲಿನ ಮುಸಲ್ಮಾನರ ಓಟುಗಳನ್ನು ಮಾತ್ರ ಎಂಬುದು ಕಾಂಗ್ರೆಸ್ಸಿಗರಿಗೆ ಇನ್ನೂ ತಿಳಿದಂತಿಲ್ಲ.

ತನ್ನ ಗತದಿನಗಳ ಭವ್ಯ ಇತಿಹಾಸವನ್ನು ಮೆಲುಕು ಹಾಕುವುದರಲ್ಲೇ ಸುಖ ಕಾಣುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಈ ಊರಿನಲ್ಲಿ ತನ್ನ ಬೇರುಗಳನ್ನೇ ಕಳಚಿಕೊಂಡಿದೆ. ಯಾವ ಸಿಪಿಐ(ಎಂ) ನಾಯಕರೂ ಈ ತನಕ ಈ ದೌರ್ಜನ್ಯವನ್ನು ಖಂಡಿಸಿಯೂ ಇಲ್ಲ. ಅವರ ಪಕ್ಷ ನಿದ್ರೆಯಿಂದ ಏಳುವ ಲಕ್ಷಣಗಳೂ ಕಾಣಿಸುತ್ತಿಲ್ಲ.

ಕರಾವಳಿಯ ಹೆಚ್ಚಿನ ದಿನಪತ್ರಿಕೆಗಳಲ್ಲಿ ಈ ಘಟನೆಯಲ್ಲಿ ಕೋಡಿ ಮುಂತಾದ ಕಡೆ ನಡೆದ ದೌರ್ಜನ್ಯವನ್ನು ಕಾಣಿಸಿಯೇ ಇಲ್ಲ. 'ಮುಸ್ಲಿಮರು ಬೈಕ್ ರ್‍ಯಾಲಿಯ ಮೇಲೆ ಹಲ್ಲೆ ನಡೆಸಿದ್ದಕ್ಕೆ ಪ್ರತಿಯಾಗಿ ಈ ದೌರ್ಜನ್ಯ ನಡೆದಿದೆ' ಎಂಬ ಸುಳ್ಳು ವರದಿಗಳೇ ಪ್ರಕಟವಾಗಿವೆ. ಹಿಂಸೆ ನಡೆದ ಕ್ಷಣದಿಂದ ಸಂತ್ರಸ್ತರ ನೋವನ್ನು ಆಲಿಸುವ, ಅವರಿಗೆ ಕಿಂಚಿತ್ ನೆರವಾಗುವ ಮತ್ತು ದೌರ್ಜನ್ಯವನ್ನು ಖಂಡಿಸುವ ಪ್ರಯತ್ನವೇನಾದರೂ ನಡೆದಿದ್ದರೆ ಅದು ಕುಂದಾಪುರದ 'ಸಹಮತ' ಎಂಬ ಸಣ್ಣ ಸಂಘಟನೆಯ ಸದಸ್ಯರಿಂದ ಮಾತ್ರ. 'ಸಹಮತ' ಸಂಘಟನೆಗೆ ಇರುವ ಹೊಣೆಗಾರಿಕೆ, ಕಾಳಜಿ ಈ ಊರಿನ ರಾಜಕೀಯ ಪಕ್ಷಗಳಿಗೆ, ಇಲ್ಲಿನ ಸಮಾಜಸೇವಾ ಸಂಸ್ಥೆಗಳಿಗೆ ಇದ್ದಿದ್ದರೆ ಈ ಊರಿಗೆ ಕಿಡಿಗೇಡಿಗಳು ಹಚ್ಚುವ ಬೆಂಕಿಯನ್ನು ಬೇಗನೇ ಶಮನ ಮಾಡಲು ಸಾಧ್ಯವಿದೆ. ಅರ್ಥೈಸಿ ಹೇಳುವವರು ಬೇಕಾಗಿದ್ದಾರೆ.

'ಯಹಾಂ ಕೌನ್ ಹೆ ತೇರಾ' ಎಂದು ಕುಂದಾಪುರದ ಮುಸಲ್ಮಾನರು ತಮಗೆ ತಾವೇ ಪ್ರಶ್ನಿಸುತ್ತಿದ್ದಾರೆ.


ರವೂಫ್

ನಡೆಸಲಾಯಿತು. ಅವರನ್ನು ಆಸ್ಪತ್ರೆಗೆ ದಾಖಲಿಸಬೇಕಾಯ್ತು. ಮಹಮದ್ ಮಲಿಕ್ ಎಂಬ ಯುವಕನ ಬೈಕ್ ತಡೆದು ಆತನಿಗೆ ಚೂರಿಯಿಂದ ತಿವಿಯಲಾಯ್ತು. ಈ ರ್‍ಯಾಲಿಯಲ್ಲಿ ಭಜರಂಗದಳದ ನಾಯಕ ಗಿರೀಶನೂ ಇದ್ದ. ಸಂಗಮ್ ಪ್ರದೀಪ ಮತ್ತು ಚಿನ್ಮಯಿ ರಿಕ್ಷಾ ಸ್ಟಾಂಡಿನ ದಾಳಿಯ ನೇತೃತ್ವ ವಹಿಸಿದ್ದ. ಕೋಡಿಯ ಕೆಲವು ಮತಾಂಧ ಭಜರಂಗಿ ಹುಡುಗರೂ ಜೊತೆಗಿದ್ದರು. ಆನಗಳ್ಳಿ, ಕಂಡ್ಲೂರು, ಬಸ್ರೂರು ಮುಂತಾದ ಕಡೆಗಳಿಂದ ತಂಡಗಳು ಬಂದಿದ್ದವು. ಇಷ್ಟೆಲ್ಲ ದೌರ್ಜನ್ಯವನ್ನು, ಹಿಂಸೆಯನ್ನು ತಾನೇ ಮಾಡಿದ ಭಜರಂಗಿ ಪಡೆ ಕೋಡಿಯಿಂದ ಕುಂದಾಪುರ ಪೇಟೆಗೆ ಬರುವಾಗ ಮಾತ್ರ 'ಕೋಡಿಯಲ್ಲಿ ನಮ್ಮ ಬೈಕ್ ರ್‍ಯಾಲಿ ಶಾಂತವಾಗಿ ಸಾಗುತ್ತಿದ್ದಾಗ ಮುಸ್ಲಿಮರು ನಮ್ಮ ಮೇಲೆ ಕಲ್ಲೆಸೆದರು' ಎಂದು ಹಸಿಹಸಿ ಸುಳ್ಳನ್ನು ಹಬ್ಬಿಸಿತ್ತು. (ಮರುದಿನ ಹೆಚ್ಚಿನ ದಿನಪತ್ರಿಕೆಗಳಲ್ಲೂ ಈ ಹಸಿಸುಳ್ಳೇ ಪ್ರಕಟವಾಯಿತು). ಇವರ ಬೈಕ್ ರ್‍ಯಾಲಿ ಎಷ್ಟು 'ಶಾಂತವಾಗಿ' ಸಾಗಿತ್ತು ಎಂದು ಅದನ್ನು ಕಣ್ಣಾರೆ ಕಂಡ ಜನರು 'ಶಾಂತ' ಎಂಬ ಶಬ್ದಕ್ಕೆ ಕನ್ನಡ ಪದಕೋಶದಲ್ಲಿ ಬೇರೇನಾದರೂ ಹಿಂಸಾತ್ಮಕ ಅರ್ಥಗಳಿವೆಯೆ ಎಂದು ಹುಡುಕತೊಡಗಿದರು.

ಕುಂದಾಪುರಕ್ಕೆ ಬಂದ ಕೋಮುವಾದಿ ಪಡೆಯ ದಾಂಧಲೆ ಪೂರ್ವನಿಯೋಜಿತವಾಗಿತ್ತು. ಹಲವು ತಂಡಗಳಲ್ಲಿ ಬಂದ ಬೈಕ್ ಸವಾರರು ಕುಂದಾಪುರದ ಅನೇಕ ಮುಸಲ್ಮಾನರ ಅಂಗಡಿ ಗಳಿಗೆ ಕಲ್ಲೆಸೆದರು. ಶಾಸ್ತ್ರಿ ಸರ್ಕಲ್ ಬಳಿ ಇರುವ 'ಪಾದುಕಾಲಯ' ಎಂಬ ಹೆಸರಿನ ಪಾದರಕ್ಷೆಗಳ ಅಂಗಡಿ, ಅಪ್ಸರಾ ಫ್ಯಾಷನ್ ಕಾರ್ನರ್, ಕಾಲೇಜು ರಸ್ತೆಯಲ್ಲಿದ್ದ ಬ್ಯೂಟಿ ಕ್ವೀನ್, ಮುಖ್ಯ ರಸ್ತೆಯಲ್ಲಿದ್ದ ಡಿಸೈರ್ ಬಟ್ಟೆ ಮಳಿಗೆ, ನಿಶಾ ಫುಟ್‌ವೇರ್, ಜೆಮ್ ಸೇಲ್ಸ್ ಸೇರಿದಂತೆ ಹಲವಾರು ಮುಸಲ್ಮಾನರ ಅಂಗಡಿಗಳನ್ನು ಗುರುತಿಸಿ ದಾಳಿ ನಡೆಯಿತು. ಬಸ್ರೂರು ಮೂರುಕೈ ಬಳಿ ಇರುವ ಬಿರಿಯಾನಿ ಹೋಟೆಲ್ ಒಂದರ ಗಾಜು ಒಡೆದು ಮಾಲಕರ ಸ್ಕೂಟರ್‌ಗೆ ಬೆಂಕಿ ಹಾಕಲಾಯ್ತು. ನಾನಾ ಸಾಹೇಬ್ ರಸ್ತೆಯಲ್ಲಿ ಬ್ಯಾಂಕ್ ಉದ್ಯೋಗಿ ಶಫಿ ಅವರ ಮನೆಯ ಮೇಲೆ ಕಲ್ಲೆಸೆಯಲಾ ಯಿತು. ಅಬ್ದುಲ್ ಅಜ್ಗರ್ ಅವರ ಮನೆಗೂ ಹಾನಿಯಾಯಿತು. ಚರ್ಚ್ ರಸ್ತೆಯಲ್ಲಿ ಹೋಗುತ್ತಿದ್ದ ಬುರ್ಖಾಧಾರಿಗಳ ಮೇಲೆ ಹಲ್ಲೆ ನಡೆಸಲು ಮುಂದಾದಾಗ ಸ್ಥಳೀಯರು ಅವರನ್ನು ರಕ್ಷಿಸಿದರು. ಹೀಗೆ ಸುಮಾರು 15-20 ನಿಮಿಷದ ಕ್ಷಿಪ್ರ ಕಾರ್ಯಾಚರಣೆಯಲ್ಲಿ ಇಷ್ಟೆಲ್ಲ ನಡೆದುಹೋಯಿತು. ಆದಿತ್ಯವಾರವಾದ ಕಾರಣ ಅನೇಕ ಮುಸಲ್ಮಾನರ ಅಂಗಡಿಗಳು ತೆರೆದಿರಲಿಲ್ಲ. ಇಲ್ಲವಾದರೆ ಇನ್ನಷ್ಟು ಹಾನಿ ಸಂಭವಿಸುತ್ತಿತ್ತು.


ಗಿರೀಶ್

ಶಾಸ್ತ್ರಿ ಸರ್ಕಲ್ ಕುಂದಾಪುರದ ಭಜರಂಗಿಗಳ ಅಡ್ಡೆ. ಪಾದುಕಾಲಯದ ಮಾಲಕ ಮೊಹಮ್ಮದ್ ಗೌಸ್ ಅವರು ಕಳೆದ 30ಕ್ಕೂ ಹೆಚ್ಚು ವರ್ಷಗಳಿಂದ ಶಾಸ್ತ್ರಿ ಸರ್ಕಲ್‌ನ ವೈಶಾಲಿ ಕಾಂಪ್ಲೆಕ್ಸ್‌ನಲ್ಲಿ ಪಾದರಕ್ಷೆಗಳ ವ್ಯವಹಾರ ನಡೆಸುತ್ತಿದ್ದಾರೆ. ಕುಂದಾಪುರ ತಾಲೂಕಿನಲ್ಲಿ ಅವರ ಮುಖ ಪರಿಚಯ ಇಲ್ಲದವರು ಯಾರೂ ಇರಲಿಕ್ಕಿಲ್ಲ. ಅವರಿಗೆ ಸುಮಾರು 60 ವರ್ಷ ಪ್ರಾಯವಾಗಿದೆ. ಅಪ್ಸರಾ ಫ್ಯಾಷನ್ ಕಾರ್ನರ್‌ನ ಮಹಮ್ಮದ್ ರಫೀಕ್ ಸಾಹೇಬರು 23 ವರ್ಷಗಳಿಂದ ಅದೇ ಕಟ್ಟಡದಲ್ಲಿ ಸೌಂದರ್ಯವರ್ಧಕಗಳ ಅಂಗಡಿಯನ್ನಿಟ್ಟುಕೊಂಡಿದ್ದಾರೆ. ರಫೀಕ್ ಮತ್ತು ಗೌಸ್ ಇಬ್ಬರೂ ಜೊತೆಯಾಗಿ 'ಯಕ್ಷ ಮಿತ್ರರು' ಎಂಬ ಕೂಟ ಕಟ್ಟಿಕೊಂಡು ಪ್ರತಿ ವರ್ಷ ಯಕ್ಷಗಾನ ತಾಳಮದ್ದಳೆ ಪ್ರದರ್ಶನವನ್ನು ಏರ್ಪಡಿಸುತ್ತಾರೆ. ಇವರಿಬ್ಬರ ಅಂಗಡಿಯಲ್ಲಿ ಇವರು ಯಾವಾಗಲೂ ಮಾತನಾಡುವುದು ಮಹಾಭಾರತ, ರಾಮಾಯಣದ ಯಕ್ಷಗಾನ ಪ್ರಸಂಗಗಳ ಬಗ್ಗೆ. ಹೊಸ ಯಕ್ಷಗಾನದ ಸಿ.ಡಿಗಳು ಬಂದರೆ ಇವರ ಬಳಿ ಒಂದು ಪ್ರತಿ ಇದ್ದೇ ಇರುತ್ತದೆ. ಇವರ ಹೆಚ್ಚಿನ ಹರಮಾಹ್ಕರೆಲ್ಲ ಹಿಂದೂಗಳು. ಮುಸಲ್ಮಾನರು ಮುಖ್ಯವಾಹಿನಿಗೆ ಬರಬೇಕೆನ್ನುವ ಸಂಘಪರಿವಾರ ಎಲ್ಲ ರೀತಿಯಿಂದಲೂ ಕುಂದಾಪುರದ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ರಫೀಕ್ ಮತ್ತು ಗೌಸ್‌ರ ಅಂಗಡಿಗಳನ್ನು ಕೂಡ ಮೊನ್ನೆ ಧ್ವಂಸ ಮಾಡಿದೆ. ಈ ಹಿಂದೆಯೂ ಅನೇಕ ಬಾರಿ ಶಾಸ್ತ್ರಿ ಸರ್ಕಲ್‌ನಲ್ಲಿ ಎಲ್ಲರಿಗೂ ಸುಲಭವಾಗಿ ಸಿಗುವ ಇವರ ಅಂಗಡಿಗಳ ಮೇಲೆ ಕೋಮುವಾದಿ ಪಡೆ ದಾಳಿ ನಡೆಸಿದೆ. ಈ ಬಾರಿಯಂತೂ ಗೌಸ್ ಸಾಹೇಬರು ಮತ್ತು ಅವರ ಮಗನಿಗೆ ನಡು ಮಧ್ಯಾಹ್ನ ನೂರಾರು ಜನರ ಸಮ್ಮುಖದಲ್ಲಿ ಭಜರಂಗಿಗಳು ಯದ್ವಾತದ್ವಾ ಥಳಿಸಿದ್ದಾರೆ. ಹುಸೇನ್ ಹೈಕಾಡಿಯ ಮಾಲಕತ್ವದ ಬ್ಯೂಟಿ ಕ್ವೀನ್‌ನಿಂದ ಹಣ, ವಸ್ತುಗಳನ್ನು ಕೂಡ ದೋಚಲಾಗಿದೆ. ಹುಸೇನ್ ಹೈಕಾಡಿ ಕುಂದಾಪುರದಲ್ಲಿ ಅತ್ಯಂತ ಚಟುವಟಿಕೆಯಿಂದ ಇರುವವರು. ಜೇಸೀಸ್, ರೋಟರಿ ಮಾತ್ರವಲ್ಲದೆ ಇನ್ನಿತರ ಹಲವಾರು ಸಂಘಸಂಸ್ಥೆಗಳ ಮೂಲಕ ಎಲ್ಲರಿಗೂ ಚಿರಪರಿಚಿತರು. ಸಂಘ ಪರಿವಾರದಲ್ಲೂ ಇವರ ಮಿತ್ರರು ಸಾಕಷ್ಟು ಜನರಿದ್ದಾರೆ. ಇಂಥವರನ್ನೂ ಕೋಮುವಾದಿಗಳು ಬಿಡಲಿಲ್ಲ. ಬ್ಯೂಟಿ ಕ್ವೀನ್ ದಾಂಧಲೆಯಲ್ಲಿ ಹುಸೇನ್‌ಗೆ ಸುಮಾರು ಮೂರು ಲಕ್ಷ ರೂಪಾಯಿ ನಷ್ಟವಾಗಿದೆ. ಕುಂದಾಪುರದಲ್ಲಿ ಇಂತಹದೊಂದು ದಾಳಿ ನಡೆಸಿ ಹಿಂದೂ ಸಮಾಜೋತ್ಸವಕ್ಕೆ ಒಂದು ರಭಸ ತರುವುದು ಕೋಮುವಾದಿಗಳ ಹುನ್ನಾರವಾಗಿತ್ತು ಎಂಬುದೀಗ ಬಯಲಾಗಿದೆ.

ಇಷ್ಟೆಲ್ಲ ಹಿಂಸೆ ನಡೆಯುತ್ತಿದ್ದರೂ ಪೊಲೀಸರು ಮೂಕ ಪ್ರೇಕ್ಷಕರಾಗಿದ್ದರು ಎಂದು ಕೋಡಿಯ ಜನರು ಹೇಳುತ್ತಿದ್ದಾರೆ. ಬೈಕ್ ರ್‍ಯಾಲಿ ನಡೆಯುತ್ತಿದ್ದಾಗ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರೇ ಇರಲಿಲ್ಲ. ಒಂದು ಸುತ್ತು ದಾಂಧಲೆ ಮುಗಿಸಿ ಹೊರಟಿದ್ದ ಭಜರಂಗಿಗಳು ಪೊಲೀಸರು ಬಂದ ಮೇಲೆ ಪುನಃ ಅವರ ಜೊತೆ ಬಂದು ಹಲ್ಲೆ ಮುಂದುವರಿಸಿದರು. ಹಲ್ಲೆಕೋರರೊಬ್ಬನ ಬೈಕ್ ಸೈಯ್ಯದ್ ಸಾಹೇಬರ ಹಿತ್ತಿಲಿನಲ್ಲಿ ಬಿದ್ದಿತ್ತು. ಅವರ ಮನೆಯಲ್ಲಿದ್ದ ಹೆಂಗಸರು ಕನಿಷ್ಟ ಪಕ್ಷ ಈ ಬೈಕ್ ಯಾರದು ಅಂತ ಗೊತ್ತಾದರೆ ಹಲ್ಲೆಕೋರರನ್ನು ಹುಡುಕಲು ನೆರವಾಗುತ್ತದೆ ಎಂದು ಭಾವಿಸುತ್ತಿದ್ದಾಗಲೇ ಸ್ವತಃ ಪೊಲೀಸರೇ ಹಿತ್ತಿಲಿನಿಂದ ಆ ಬೈಕ್ ತಂದು ಭಜರಂಗಿಗಳಿಗೆ ಕೊಟ್ಟರಂತೆ! ಭಜರಂಗಿಗಳು ನಮ್ಮ ಹೆಂಗಸರು, ಮನೆಗಳ ಮೇಲೆ ಹಲ್ಲೆ ನಡೆಸುತ್ತಿದ್ದಾಗ ಅವರನ್ನು ತಡೆಯುವ ಬದಲು ಕುಂದಾಪುರ ಪೊಲೀಸ್ ವೃತ್ತ ನಿರೀಕ್ಷಕ ಮದನ್ ಗಾಂವ್ಕರ್ ತಮ್ಮತ್ತಲೇ ಪಿಸ್ತೂಲು ತೋರಿಸಿದರು ಎಂದು ಹೇಳುವ ಕೋಡಿಯ ನಾಗರಿಕರು ಸರ್ಕಲ್ ಇನ್ಸ್‌ಪೆಕ್ಟರ್ ಅವರ ವರ್ತನೆಯ ಬಗ್ಗೆ ಖೇದ ವ್ಯಕ್ತಪಡಿಸು ತ್ತಾರೆ. ಕೊನೆಗೆ ಉಡುಪಿ ಜಿಲಾ ಎಸ್ಪಿ ಪ್ರವೀಣ್ ಪವಾರ್ ಮಧ್ಯಪ್ರವೇಶವಾದ ನಂತರವೇ ಮುಸ್ಲಿಮರು ಕೊಂಚ ನೆಮ್ಮದಿಯ ಉಸಿರು ಬಿಡುವಂತಾಯ್ತು. ಪ್ರವೀಣ್ ಪವಾರ್ ಪರಿಸ್ಥಿತಿಯನ್ನು ಕ್ಷಿಪ್ರವಾಗಿ ನಿಯಂತ್ರಣಕ್ಕೆ ತಂದರು. ಸಂಜೆ ನಡೆದ ಶಾಂತಿಸಭೆಯಲ್ಲಿ ಮರುದಿನದ ಹಿಂದೂ ಸಮಾಜೋತ್ಸವಕ್ಕೆ ಎಸ್ಪಿ ಖಡಾಖಂಡಿತವಾಗಿಯೂ ಅನುಮತಿ ನೀಡುವುದಿಲ್ಲ ಎಂದು ಹೇಳಿದರು. ಆದರೆ ಇಲ್ಲಿನ ಕೆಲವು ಪ್ರಚಾರ ಪ್ರಿಯ ಔಟ್‌ಡೇಟೆಡ್ ಮುಸ್ಲಿಮ್ ನಾಯಕರು, ಅಬ್ಬೇಪಾರಿ ಕಾಂಗ್ರೆಸಿಗರ ಸಮ್ಮತಿಯ ಮೇರೆಗೆ ಕೊನೆಗೂ ಹಿಂದೂ ಸಮಾಜೋತ್ಸವ ನಡೆಯಿತು. ಸೆಕ್ಷನ್ 144 ಜಾರಿಯಲ್ಲಿದ್ದರೂ ಮತಾಂಧರ ಸಮ್ಮೇಳನ ನಡೆಯಿತು. ಶಾಂತಿಸಭೆಯ ವಿಚಿತ್ರವೆಂದರೆ ಅಲ್ಲಿ ಶಾಂತಿ ಬಯಸುವವರನ್ನು ಬಿಟ್ಟು ಉಳಿದವರೆಲ್ಲ ಇದ್ದರು. ಅನುಮತಿ ಇಲ್ಲದೆ ಬೈಕ್ ರ್‍ಯಾಲಿ ನಡೆಸಿದ ಧುರೀಣರೂ ಪೊಲೀಸರ ಎದುರಿಗೆ ಕೂತು ಸಲಹೆ ಸೂಚನೆಗಳನ್ನು ಕೊಟ್ಟರು. ಇದು ಕರಾವಳಿಯ ಶಾಂತಿ ಸಭೆಗಳಲ್ಲಿ ಮಾತ್ರ ಸಾಧ್ಯ.

ಕುಂದಾಪುರದಲ್ಲಿ ಈ ಹಿಂದೆ ಸೂಜಿಗಲಭೆ ನಡೆದಾಗ ಅಪಾರ ಹಿಂಸಾಚಾರವನ್ನು ಮುಸ್ಲಿಮರು ಅನುಭವಿಸಿದ್ದರು. ತದನಂತರವೂ ಅನೇಕ ಸಂದರ್ಭಗಳಲ್ಲಿ ಇಲ್ಲಿ ಹಲ್ಲೆ, ಹಾನಿ, ದೌರ್ಜನ್ಯ ನಡೆದಿದೆ. ರಾಮಮಂದಿರ, ಗೋಹತ್ಯೆ, ಮತಾಂತರ, ಕಾಶ್ಮೀರ, ಭಯೋತ್ಪಾದನೆ, ಬಾಬಾ ಬುಡಾನ್‌ಗಿರಿ ಮುಂತಾದ, ತಮ್ಮ ದಿನನಿತ್ಯದ ಬದುಕಿಗೆ ಯಾವ ಸಂಬಂಧವಿಲ್ಲದ, ಈ ಎಲ್ಲ ವಿಚಾರಗಳಿಗೂ ಇಲ್ಲಿನ ಮುಸಲ್ಮಾನರು ಪದೇಪದೇ ಭಯಭೀತರಾಗುತ್ತಾರೆ, ಹಿಂಸೆ, ಹಾನಿಗೆ ಒಳಗಾಗುತ್ತಾರೆ. ಹಿಂದು ಸಮಾಜೋತ್ಸವ, ಭಜರಂಗದಳದ ರ್‍ಯಾಲಿ ನಡೆಯುವಾಗಲಂತೂ ಕರಾವಳಿಯ ಊರುಗಳ ಎಲ್ಲ ಮುಸಲ್ಮಾನರಂತೆ ಕುಂದಾಪುರದ ಮುಸಲ್ಮಾನರು, ಕ್ರೈಸ್ತರು ಮುಂದೇನು ಕಾದಿದೆಯೋ ಎಂದು ಆತಂಕದಲ್ಲಿರುತ್ತಾರೆ. ಹೆಚ್ಚಿನ ಬಾರಿ ಅವರ ಆತಂಕ ನಿಜವಾಗಿದೆ. ಈ ಬಾರಿ ಕೂಡ. ಪ್ರತಿ ಬಾರಿಯೂ ಒಂದಲ್ಲ ಒಂದು ನೆವದಿಂದ ತಮ್ಮ ಅಂಗಡಿ, ಮನೆಗಳು ಮತ್ತು ಜೀವಗಳ ಮೇಲೆ ಹಾನಿ ನಡೆಸಿದರೆ ಕುಂದಾಪುರದ ಮೊಹಮ್ಮದ್ ಗೌಸ್, ರಫೀಕ್, ಹುಸೇನ್, ಅಕ್ಬರ್, ಅನ್ವರ್, ಮರಿಯಾ ತರಹದ ಅಮಾಯಕರು ಅದೆಷ್ಟು ಬಾರಿ ತಮ್ಮ ಬದುಕನ್ನು ಮತ್ತೆ ಮತ್ತೆ ಕಟ್ಟಿಕೊಳ್ಳುವುದು? ಅದೆಷ್ಟು ಬಾರಿ ಅಳುವುದು? ಅದೆಷ್ಟು ಬಾರಿ ನೋವು ಅನುಭವಿಸುವುದು? ಅದೆಷ್ಟು ಬಾರಿ ಕತ್ತಿಗೆ ಕೊರಳೊಡ್ಡುವುದು? ಒಮ್ಮೆ ಅವರ ಜಾಗದಲ್ಲಿ ನಿಂತು ಯೋಚಿಸಿ. ಅದೆಷ್ಟು ಭಯಾನಕ ಮತ್ತು ಯಾತನೆಯ ಬದುಕು. ಕುಂದಾಪುರದ ಮತ್ತು ಕರಾವಳಿಯ ಮುಸಲ್ಮಾನರು ಪಡುವ ಈ ಕೋಮು ಹಿಂಸೆಯ ಬವಣೆ ಮುಗಿಯುವುದು ಯಾವಾಗ?

ಶಹರ್ ಉಜಡಾ ತೊ ಫಿರ್ ಬಸ್ ಜಾಯೆಗಾ ಲೇಕಿನ್


ಹಮಾರಾ ಘರ್ ನ ಫಿರ್ ಆಬಾದ್ ಹೋಗಾ

• ಶ್ರವಣ

ಮೈಸೂರು ರೇಸ್ ಕ್ಲಬ್ ವಂಚಕರಿಗೆ ಸಚಿವ ರಾಮದಾಸ್ ಸಾಥ್..!



ಮೈಸೂರಿನ ಜೂಜುಕೋರರ ಮಹಾ ಅಡ್ಡೆಯಾಗಿರುವ ಮೈಸೂರು ರೇಸ್ ಕ್ಲಬ್ (ಎಂ.ಆರ್.ಸಿ) ಲಿಮಿಟೆಡ್ ಕರಾರಿನ ಅವಧಿ ಮುಗಿದು ನಾಲ್ಕು ವರ್ಷಗಳೇ ಕಳೆದಿದೆ. ಕರಾರನ್ನು ನವೀಕರಿಸದೆ; ಹಲವು ವರ್ಷಗಳಿಂದ ನೆಲಬಾಡಿಗೆಯನ್ನೂ ನೀಡದೆ ಸರ್ಕಾರಕ್ಕೆ ವಂಚಿಸುತ್ತಾ ಬರಲಾಗಿದೆ. ಸರ್ಕಾರದ ವಶವಾಗಬೇಕಾಗಿದ್ದ 153.39 ಎಕರೆ ಜಮೀನನ್ನು ಅಕ್ರಮವಾಗಿ ತಮ್ಮ ವಶದಲ್ಲಿಟ್ಟುಕೊಂಡಿರುವುದಲ್ಲದೆ, ಜೂಜು ದಂಧೆ ಸರಾಗವಾಗಿ ನಡೆಯುತ್ತಿದೆ. ಕ್ಲಬ್ ನ ಅಧಿಪತಿಗಳು ಸಚಿವ ರಾಮದಾಸರನ್ನು ಬಳಸಿಕೊಂಡು ಸಿಎಂ ಯಡ್ಡಿಯ ಜೊತೆ ಡೀಲು ಕುದುರಿಸಿ ಇಡೀ ಜಾಗವನ್ನೇ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಹೊಂಚುಹಾಕಿದ್ದಾರೆ.



ಮೈಸೂರಿನ ರಾಜರುಗಳ ಮತ್ತು ಅವರ ಸಂಬಂಧಿಕರ ಸುಖಲೋಲುಪತೆಗೆ ಮೈಸೂರು ರೇಸ್ ಕ್ಲಬ್‌ಗೆ ಸರ್ವೆ ನಂ.4ರಲ್ಲಿ 153.39 ಎಕರೆ ಜಮೀನನ್ನು 1976ರಲ್ಲಿ 20 ವರ್ಷಗಳಿಗೆ ಲೀಸ್‌ಗೆ ಪಡೆಯಲಾಯಿತು. ಇದು ನೂರಾರು ರೈತರಿಗೆ ಸಿಗಬೇಕಿದ್ದ ಸರ್ಕಾರಿ ಆಸ್ತಿ. ಈ ಕ್ಲಬ್‌ನ ಕಮಿಟಿಯಲ್ಲಿ ಜಯಚಾಮರಾಜೇಂದ್ರ ಒಡೆಯರ್ ಸಂಬಂಧಿಕರೇ ಹೆಚ್ಚು ತುಂಬಿಕೊಂಡಿದ್ದರಿಂದ ಈ ಅಪಾರ ಪ್ರಮಾಣದ ಭೂಮಿಯನ್ನ ವಿರೋಧವೇ ಇಲ್ಲದೆ ನೀಡಲಾಯಿತು. ಶ್ರೀಮಂತರ ಮೋಜಿಗಾಗಿ ಹಲವು ದಲಿತ ಮತ್ತು ಬಡ ರೈತರುಗಳನ್ನೇ ಓಡಿಸಿದ ಕೀರ್ತಿ ಮೈಸೂರಿನ ಮಹಾರಾಜರ ಸಂಬಂಧಿಕ ಮೋಜುಕೋರರಿಗೆ ಸಲ್ಲಬೇಕು. ಮೊದಮೊದಲು ಕೆಲವೇ ಶ್ರೀಮಂತ ಕುದುರೆ ರೇಸ್ ಜೂಜುಕೋರರ ತಾಣವಾಗಿದ್ದ ಇದರಲ್ಲಿ ಕಾಫಿ ಪ್ಲಾಂಟರುಗಳು, ರಾಜಕೀಯ ಪುಢಾರಿಗಳು, ಸಣ್ಣಪುಟ್ಟ ಉದ್ದಿಮೆದಾರರು ಕಾಣಿಸಿಕೊಂಡರು. ನಂತರ ಕಾಲೇಜುಗಳ ಪ್ರೊಫೆಸರ್‌ಗಳಿಂದ ಹಿಡಿದು ಸಣ್ಣಪುಟ್ಟ ಉದ್ದಿಮೆದಾರರೂ ಆಟೋಚಾಲಕರವರೆಗೂ ಈ ಜೂಜು ಕೇಂದ್ರಕ್ಕೆ ಬರತೊಡಗಿದರು.




ಇಲ್ಲಿ ಕೈಬದಲಾಗುತ್ತಿದ್ದ ಲಕ್ಷಗಟ್ಟಲೆ ಜೂಜುಹಣ, ಕೆಲವೇ ವರ್ಷಗಳಲ್ಲಿ ದಿನವೊಂದಕ್ಕೆ ಕೋಟಿಗಳನ್ನೂ ದಾಟಿತು. ಇದರಿಂದಾಗಿ ರೇಸ್‌ಕ್ಲಬ್‌ನ ಆಡಳಿತ ಮಂಡಳಿಗೆ ಲಾಭದ ಹೊಳೆ ಹರಿಯತೊಡಗಿತು. ಇದರ ಪರಿಣಾಮ ಮೈಸೂರಿನ ನೂರಾರು ಕುಟುಂಬಗಳು ಬೀದಿಗೆ ಬಿದ್ದವು, ಕೆಲವರು ಪಾಪರ್ ಚೀಟಿ ತೆಗೆದುಕೊಂಡು ಊರು ಬಿಟ್ಟರು. ಜೊತೆಗೆ ಅಕ್ರಮವಾಗಿ ಗಾಲ್ಫ್ ಕ್ಲಬ್ ಎಂಬ ಹೊಸ ಅಂಗಡಿ ಶುರುವಿಟ್ಟುಕೊಂಡು ಗಾಲ್ಫ್ ಆಟವಾಡಲು ಬರುವವರಿಂದ ಸ್ವದೇಶಿಗರು, ವಿದೇಶಿಗರು ಎನ್ನದೆ ಹಣ ಕಿತ್ತುಕೊಳ್ಳುತ್ತಿದ್ದಾರೆ. ಎಂ.ಆರ್.ಸಿಯನ್ನ ಬಲ್ಲವರ ಪ್ರಕಾರ ಕ್ಲಬ್‌ನವಾರ್ಷಿಕ ಆದಾಯ 200 ಕೋಟಿಗಳು ಮೀರುತ್ತದೆ. ಎಂ.ಆರ್.ಸಿಯು ತನ್ನ ಸದಸ್ಯರನ್ನ ಹೆಚ್ಚಿಕೊಂಡು ಸದಸ್ಯತ್ವ ಶುಲ್ಕದ ಹೆಸರಿನಲ್ಲಿ ಲಕ್ಷಗಟ್ಟಲೇ ವಸೂಲಿ ಮಾಡಿ ಎಂ.ಆರ್.ಸಿ ಅಧ್ಯಕ್ಷ ಕಾಂತರಾಜ್, ಶಂಕರ್‌ರಾವ್, ವೈ.ಬಿ. ಗಣೇಶ್ ತಿಜೋರಿ ತುಂಬಿಸಿಕೊಂಡು ಕೊಬ್ಬಿಹೋಗಿದ್ದಾರೆ. ಶಂಕರ್‌ರಾವ್ ಎಂಬ ಈಗಿನ ಅಧ್ಯಕ್ಷ ತನ್ನ ಬಾಲ್ಯದ ಗೆಳೆತನದ ಸೆಂಟಿಮೆಂಟಿನಲ್ಲಿ ಸಿ.ಎಂ. ಯಡ್ಡಿಯ ಪ್ರಭಾವ ಬಳಸಿ ಮೆಂಬರ್‌ಶಿಪ್ ದಯಪಾಲಿಸಿಕೊಂಡವ.

ಕಡಕ್ ಡಿಸಿ ಹರ್ಷಗುಪ್ತಾ ಸರ್ಕಾರಕ್ಕೆ ವಂಚಿಸಿ ಜೂಜು ನಡೆಸುತ್ತಿದ್ದ ಎಂ.ಆರ್.ಸಿ.ಯನ್ನ ಜಿಲ್ಲಾಡಳಿತದ ವಶಕ್ಕೆ ತೆಗೆದುಕೊಳ್ಳಲು ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದ್ದರು. ಈಗ ಯಡ್ಡಿ ಬಾಲ್ಯದ ಗೆಳೆಯ ಶಂಕರ್‌ರಾವ್‌ನನ್ನೇ ಎಂ.ಆರ್.ಸಿ.ಯ ಅಧ್ಯಕ್ಷನನ್ನಾಗಿಸಲಾಗಿದೆ. ಈತನ ಮೂಲಕ ಮೈಸೂರಿನ ಉಸ್ತುವಾರಿ ಹೊತ್ತಿರುವ ಸಚಿವ ರಾಮದಾಸ್‌ರ ಜೊತೆ ಡೀಲು ಕುದುರಿಸಿ 153.39 ಎಕರೆ ಸರ್ಕಾರಕ್ಕೆ ಸೇರಬೇಕಾಗಿದ್ದ ಜಮೀನನ್ನ ವಂಚಕರ ಪಾಲಾಗುವಂತೆ ಕಡುಭ್ರಷ್ಟ ಸಿ.ಎಂ. ಯಡ್ಡಿಯ ಮೂಲಕ ಡಿಸಿಗೆ ಆದೇಶ ಬರುವಂತೆ ನೋಡಿಕೊಳ್ಳಲಾಗಿದೆ.

ಎಂ.ಆರ್.ಸಿ.ಯ ಲೀಸ್ ಅವಧಿ 2006ಕ್ಕೆ ಮುಗಿದಿದೆ. ಡಿಸಿ ಮಣಿವಣ್ಣನ್ ಜಾಗಖಾಲಿ ಮಾಡಲು ನೋಟೀಸ್ ನೀಡಿದಾಗ ಎಂ.ಆರ್.ಸಿ.ಯ ಆಡಳಿತ ಮಂಡಳಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಈ ಭೂಮಿಯನ್ನು ತಮಗೇ ನೀಡಬೇಕೆಂದು ರಿಟ್ ಸಲ್ಲಿಸಿತ್ತು. (ರಿಟ್ ಅರ್ಜಿ ಸಂ:8908/2008) ಇದಕ್ಕೆ ಎಂ.ಆರ್.ಸಿ ಮುಖಕ್ಕೆ ಮಂಗಳಾರತಿ ಎತ್ತಿ 4.8.2008ರಂದು ರಿಟ್‌ಅನ್ನು ವಜಾಗೊಳಿಸಿ ಗುತ್ತಿಗೆ ನೀಡಿರುವ ಜಮೀನನ್ನ 3 ತಿಂಗಳೊಳಗಾಗಿ ಸರ್ಕಾರದ ವಶಕ್ಕೆ ನೀಡಲು ಆದೇಶಿಸಿತ್ತು. ಆದಾಗಿ 4 ವರ್ಷ ಈ ಜಾಗ ಖದೀಮರ ಬಳಿಯೇ ಇತ್ತು. ಪ್ರಗತಿಪರ ಮುಖಂಡ ಲಕ್ಷ್ಮಣ್ ಮುಂತಾದವರೆಲ್ಲಾ ಇದನ್ನು ಡಿ.ಸಿ.ಹರ್ಷಗುಪ್ತಾ ಗಮನಕ್ಕೆ ತಂದಾಗ ಇದರ ಬಗ್ಗೆ ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರನ್ನ ಕರೆಸಿ ವಾರದೊಳಗೆ ಜಾಗ ಖಾಲಿಮಾಡಲು ನೋಟಿಸ್ ನೀಡಲು ಸೂಚಿಸಿದ್ದಾರೆ. ಅದರಂತೆ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ರಾಯ್ಕರ್ ಎಂ.ಆರ್.ಸಿ.ಲೈಸೆನ್ಸ್ ರದ್ದುಗೊಳಿಸಿದ್ದರು.

ಕೆಪಿಟಿಸಿಎಲ್, ಅಬ್ಕಾರಿ, ಪಿಡಬ್ಲ್ಯೂಡಿ, ಮೂಡಾ ಸೇರಿದಂತೆ ತಮ್ಮ ತಮ್ಮ ಕರ್ತವ್ಯ ಮಾಡುವಷ್ಟರಲ್ಲಾಗಲೇ ಸಚಿವ ರಾಮದಾಸ್ ಜೊತೆ ಶಂಕರ್‌ರಾವ್, ಡಾ. ಸಿ.ಡಿ.ಶ್ರೀನಿವಾಸ್‌ಮೂರ್ತಿ, ಗಣೇಶ್, ಉದಯ ಶಂಕರ್ ಸಹೋದರ ಜೋಡಿಗಳು, ಅಡ್ಡಕಸುಬಿನ ದುಡ್ಡಿನಿಂದಲೇ ಕುಬೇರನಾಗಿರುವ ಅನಂತರಾಜ್‌ಅರಸ್ ಮತ್ತಿತರನ್ನೊಳಗೊಂಡ ಈ ಗ್ಯಾಂಗ್ ಲ್ಯಾಂಡ್ ಡೀಲ್ ಮಾಸ್ಟರ್ ರಾಮದಾಸ್‌ಗೆ 10 ಕೋಟಿರೂಗಳ ಡೀಲ್ ಮುಂದಿಟ್ಟು ಸಿ.ಎಂ.ನಿಂದ ಯಥಾಸ್ಥಿತಿ ಕಾಪಾಡಲು ತಡೆಯಾಜ್ಞೆ ಆದೇಶ ಹೊರಡಿಸಿದ್ದಾರೆ ಎಂಬ ಸುದ್ದಿಯಿದೆ.

ಇದ್ಯಾವುದನ್ನೂ ಲೆಕ್ಕಿಸದ ಡಿಸಿ ಹರ್ಷಗುಪ್ತರವರು ಸಿಎಂ ಆದೇಶವನ್ನ ಸರಿಯಾಗೇ ಅರ್ಥೈಸಿ ಜಿಲ್ಲಾಡಳಿತದ ವಶಕ್ಕೆ ತೆಗೆದುಕೊಳ್ಳುವ ಉತ್ಸಾಹ ತೋರುತ್ತಿದ್ದಂತೆಯೇ ಸಿ.ಎಂ.ರ ಒತ್ತಡದಿಂದ ಮತ್ತೆ ಪ್ರಿನ್ಸಿಪಲ್ ಸೆಕ್ರೆಟರಿಯಿಂದ ನವೀಕರಣ ಮಾಡಲು ಮತ್ತೊಂದು ಆದೇಶ ಹೊರಡಿ ಸರ್ಕಾರದ ವಶವಾಗುತ್ತಿದ್ದ ಸಾವಿರಾರು ಕೋಟಿ ಬೆಲೆಯ ಜಮೀನು ಕೈತಪ್ಪುವಂತೆ ಮತ್ತೊಂದು ಹಗರಣ ಮಾಡಿ ತಮ್ಮ ಪಾಪಕೃತ್ಯದಲ್ಲಿ ಮುಳುಗೆದ್ದಿದ್ದಾರೆ. ಎಂ.ಆರ್.ಸಿ.ಯ ವಂಚನೆಯ ವಿರುದ್ಧ ಸಮರ ಸಾರಿರುವ ಲಕ್ಷ್ಮಣ್ ತಮ್ಮ ಜೊತೆಗೆ ಮೈಸೂರಿನ ಪ್ರಗತಿಪರರನ್ನು ಒಟ್ಟುಗೂಡಿಸಿ ಚಳವಳಿ ಮಾಡಲು ಅಣಿಯಾಗಿದ್ದಾರೆ.



ಎಂ.ಆರ್.ಸಿ. ಗೆ ನೀಡಿರುವ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಬೇಕೆಂದೂ, ಇಲ್ಲದಿದ್ದರೆ ಹೋರಾಟ ಮಾಡುವುದಾಗಿಯೂ ಕೆ.ಆರ್.ನಗರದ ಶಾಸಕ ಸಾ.ರಾ. ಮಹೇಶ್ ಅಬ್ಬರಿಸಿದ್ದಾರೆ. ಈ ಬಗ್ಗೆ ಹಲವು ಅನುಮಾನಗಳಿವೆ ಎಂದು ಸಾರಾ ಮಹೇಶ್‌ನನ್ನು ಬಲ್ಲವರು ಮಾತನಾಡಿಕೊಳ್ಳುತ್ತಿದ್ದಾರೆ. 153.39 ಎಕರೆ ಚಿನ್ನದ ಬೆಲೆಯ ಭೂಮಿ ಜೂಜುಕೋರರಿಗೆ ಲ್ಯಾಂಡ್ ಮಾಫಿಯಾದವರ ಪಾಲಾಗದೆ, ಸಾರ್ವಜನಿಕ ಉದ್ದೇಶಗಳಿಗೆ ಬಳಕೆಯಾಗುವಂತಾಗಲಿ. ಇಲ್ಲದಿದ್ದರೆ ಮೈಸೂರಿನ ಜನರು ಮುಂಬರುವ ಚುನಾವಣೆಗಳಲ್ಲಿ ಖದೀಮರಿಗೆ ತಕ್ಕ ಪಾಠ ಕಲಿಸಲಿದ್ದಾರೆ.

ವಿಜಯ ಕರ್ನಾಟಕದೊಳಗೂ ಭಿನ್ನಮತೀಯರು!
ವಿಭಟ್ಟರ 4 ಕೋಟಿಯ ಬಂಗಲೆಯು

ಒಂದು ಅಂದಾಜಿನ ಪ್ರಕಾರ ವಿಜಯ ಕರ್ನಾಟಕದ ಬೆಂಗಳೂರು ಕಚೇರಿಯಲ್ಲಿರುವ ನೂರಾಹತ್ತು ಮಂದಿ ಸಿಬ್ಬಂದಿಯ ಪೈಕಿ ಅರವತ್ತು ಜನ ಬ್ರಾಹ್ಮಣರು. ಅದರಲ್ಲೂ ಹವ್ಯಕ ಬ್ರಾಹ್ಮಣ ಪತ್ರಕರ್ತರೇ ಇದ್ದಾರೆ. ಕಳೆದ ಮೂರ್ನಾಲ್ಕು ವರ್ಷದಲ್ಲಂತೂ ವಿಭಟ್ಟರು ಬ್ರಾಹ್ಮಣರನ್ನೇ ಹುಡುಕುಡುಕಿ ವಿಜಯ ಕರ್ನಾಟಕಕ್ಕೆ ಸೇರಿಸಿಕೊಂಡಿದ್ದಾರೆ. ಪತ್ರಿಕೆಯೊಂದರ ಆರೋಗ್ಯ ಕೆಡಲು ಇಷ್ಟು ಸಾಕು.




ಪಾರ್ವತೀಶ ಮತ್ತು ಸಂತೋಷ್ ಬಾಗಿಲಗದ್ದೆ

ಕರ್ನಾಟಕದ ಕೆಲವು ಬಿಜೆಪಿ ಭಿನ್ನಮತೀಯ ಶಾಸಕರು ಯಾವ ರೀತಿ ತ್ರಿಶಂಕು ಸ್ವರ್ಗದಲ್ಲಿದ್ದಾರೋ ಅದೇ ತರದ ಪರಿಸ್ಥಿತಿ ವಿಜಯ ಕರ್ನಾಟಕದೊಳಗೂ ಕೆಲವರಿಗೆ ಉಂಟಾಗಿದೆ.

ವಿಶ್ವೇಶ್ವರ ಭಟ್ಟರ ಶಿಷ್ಯಗಣ ಅದು. ವಿಭಟ್ಟರ ಜೊತೆಯಲ್ಲೇ ಯತೀರಾಜ್, ತ್ಯಾಗರಾಜ್, ಪ್ರತಾಪ್ ಸಿಮ್ಹ ಮುಂತಾದ ಜುಟ್ಟರಿಗೆಲ್ಲಾ ಫೆನಾಯಿಲ್ ಕುಡಿಸಿ ಆಚೆಗೆ ದಬ್ಬಲಾಯಿತಲ್ಲ....

ಅದಾದ ತಕ್ಷಣದಲ್ಲೇ ಒಂದು ವಿಫಲ ಬಂಡಾಯದ ಪ್ರಯತ್ನ ಭಟ್ಟರ ಶಿಷ್ಯರಿಂದ ಆಗಿದೆ. ವಿಕದ ಬೆಂಗಳೂರು ಕಚೇರಿಯಲ್ಲಿ ಕ್ರೈಮ್ ಸುದ್ದಿ ಬರೆಯುವ ರಾಘವೇಂದ್ರ, ಇನ್ನೊಬ್ಬ ಚೈತನ್ಯ ಹೆಗಡೆ, ಮಹೇಶ್ ಯರಗೋಡು, ಮಂಜುನಾಥ ಯಾನೆ ಕೆರೆಮಂಜು ಮುಂತಾದವ ಮೇಲೆ ವಿಭಟ್ಟರು ಪರಕಾಯ ಪ್ರವೇಶ ಮಾಡಿ ಎಂತದ್ದೋ ಚಾಲೂ ತೋರಿಸಲು ಪ್ರಯತ್ನಿಸಿದ್ದಾರೆ.



ತ್ಯಾಗರಾಜ



ಅದರ ಪ್ರತಿಫಲವೆಂಬಂತೆ ಟೈಮ್ಸ್ ಧಣಿಗಳೀಗ 18-20 ಮಂದಿ ಪತ್ರಕರ್ತರ ಲಿಸ್ಟ್ ಒಂದನ್ನು ರೆಡಿ ಮಾಡಿಕೊಂಡಿದ್ದಾರೆ.

ವಿಭಟ್ಟರ ಖಾಸಾಶಿಷ್ಯರಿವರು. ಭ್ರಷ್ಟಾಚಾರ, ರೋಲ್‌ಕಾಲ್, ಡೀಲ್‌ಗಳಲ್ಲಿ ಪಳಗಿರುವ ಈ ಪುಣ್ಯಾತ್ಮರಲ್ಲಿ ಬಹುತೇಕರು ವಿಭಟ್ಟರ ಸ್ವಜಾತಿ ಹವ್ಯಕ ಬಾಂಧವರು. ಅಂದಹಾಗೆ ಈ ಲಿಸ್ಟು ಒಂಥರಾ ಬಲಿ ಪಟ್ಟಿಯಿದ್ದಂತೆ. ಪಟ್ಟಿಯಲ್ಲಿರುವ ಮಂದಿಯನ್ನು ಒಂದು ಗುಂಪಿನ ನಂತರ ಇನ್ನೊಂದರಂತೆ ಕಂತುಗಳಲ್ಲಿ ಗೇಟ್‌ಪಾಸ್ ಕೊಡಲು ಆಡಳಿತಮಂಡಳಿ ತಯಾರಾಗುತ್ತಿದೆ.

ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ

ಹೀಗೆ ಟೈಮ್ಸ್ ಧಣಿಗಳು ತಯಾರಿಸಿರುವ ಬಲಿ ಪಟ್ಟಿಯು ಮುಂದಿನ ಆರು ತಿಂಗಳಲ್ಲಿ ಹತ್ತಿರತ್ತಿರ ನೂರರ ಸಂಖ್ಯೆ ತಲುಪಬಹುದೆಂಬ ರೂಮರ್‌ಗಳಿವೆ. ಇವರಲ್ಲಿ ಬಹುತೇಕರು ಚೆಡ್ಡಿ ಪತ್ರಕರ್ತರಾಗಿರುತ್ತಾರೆ. ಸದ್ಯಕ್ಕೆ ಸೋಡಾ ಚೀಟಿ ಪಡೆಯುವವರ ಪಾಡೇನಾಗಿದೆಯೆಂದರೆ ವಿಭಟ್ಟರ ಟೀಂ ತಕ್ಷಣದಲ್ಲಿ ಯಾವುದೇ ಪ್ರಾಜೆಕ್ಟ್ ಪ್ಲಾನ್ ಮಾಡಿಲ್ಲವಾದ್ದರಿಂದ ಇವರೆಲ್ಲಾ ವಿಕ ತ್ಯಜಿಸಿ ಭಟ್ಟರ ಹಿಂದೆ ಹೋದರೂ ಬೀದಿಯಲ್ಲೇ ನಿಲ್ಲಬೇಕಾಗುತ್ತದೆ. ಹಾಗಾಗಿ ವಿಕದೊಳಗೆ ಉಳಿಯೋಣವೆಂದರೆ ಮ್ಯಾನೇಜ್‌ಮೆಂಟಿನ ಕೆಂಗಣ್ಣು ಇವರೆಲ್ಲರ ಮೇಲೆ ಈಗಾಗಲೇ ಬಿದ್ದಾಗಿದೆ.

ಭಟ್ಟರು ಡಿಸ್‌ಮಿಸ್ ಆದ ಮೊದಲ ವಾರ ವಿಕದ ಈ ಭಿನ್ನಮತೀಯರು ಅಂದರೆ ಭಟ್ಟರ ನಿಷ್ಠರು ಒಂದು ಗುಂಪಾಗಿ ಬಂಡಾಯವೆದ್ದು ವಿಕ ತ್ಯಜಿಸುವ ಯೋಚನೆ ಮಾಡಿದ್ದರು. ಆದರೆ ತಕ್ಷಣದಲ್ಲಿ ಅದು ಜಾಣತನದ ತೀರ್ಮಾನವಾಗಲಾರದೆನಿಸಿದ್ದರಿಂದ ವಿಕದೊಳಗೇ ಇದ್ದುಕೊಂಡು ವಿಭಟ್ಟರ ಜೆರಾಕ್ಸ್‌ನಂತೆ ವರ್ತಿಸಲು ಶುರು ಮಾಡಿದ್ದರು. ಅಂತದ್ದೇ ಒಂದು ಸಂದರ್ಭದಲ್ಲಿ ಡಿಸೆಂಬರ್ 12 ರ ಭಾನುವಾರದ ಸಂಚಿಕೆಯ 8ನೇ ಪುಟದಲ್ಲಿ ನಚಿಕೇತನೆಂಬುವನು ಪ್ರತಾಪ ಸಿಮ್ಹನ ವಿರುದ್ಧ ಹಾಗೂ ವಿಭಟ್ಟರ ಬಗ್ಗೆ ಕೆಲ ನಿಷ್ಠೂರ ಅಭಿಪ್ರಾಯ ವ್ಯಕ್ತಪಡಿಸಿದ್ದ ಪತ್ರಕರ್ತ ರವಿ ಬೆಳಗೆರೆಯನ್ನು ಗುರಿ ಮಾಡಿಕೊಂಡು ಒಂದು ಲೇಖನ ಪ್ರಕಟವಾಗುವಂತೆ ನೋಡಿಕೊಂಡ.

ಅದನ್ನು ನಿಜವಾಗಲೂ ಬರೆದವನು ಚೈತನ್ಯ ಹೆಗಡೆ!

ದಿನಪತ್ರಿಕೆಯೊಂದರ ವ್ಯಕ್ತಿತ್ವಕ್ಕೆ ಹೊಂದದಂತಿದ್ದ ಈ ಲೇಖನ ವಿಜಯ ಕರ್ನಾಟಕದ ಮೇಲೆ ಮಾಲೀಕರಿಗೆ ಇನ್ನೂ ಕಂಟ್ರೋಲ್ ಸಿಕ್ಕಿಲ್ಲ ಎಂಬುದಕ್ಕೆ ಸಾಕ್ಷಿಯಾಗಿತ್ತು. ಆದರೆ ಹೊಸ ಸಂಪಾದಕ ರಾಘವನ್‌ಗೆ ಈ ಬೀದಿಜಗಳ ಬೇಕಿರಲಿಲ್ಲ. ಹಾಗಾಗಿ ಅವರು ಹವ್ಯಕ RSS ಬಾಲಕ ಚೈತನ್ಯನನ್ನು ಕರೆದು ಬೆಂಡೆತ್ತಿದ್ದಾರೆ. ಚೈತನ್ಯನ ಹೆಸರು ಅವತ್ತೇ ಬಲಿಪಟ್ಟಿಗೂ ಸೇರ್ಪಡೆಯಾಯಿತು.

ಟ್ಯಾಬ್ಲಾಯ್ಡ್ ಡೈಲಿ ಅಂತೆ!

ಮತ್ತೊಂದೆಡೆ ತನ್ನ 'ತಂಗಿ'ಯನ್ನೇ ಮದುವೆಯಾಗಿರುವ ಆದರ್ಶ ಹಿಂದೂ ವೀರ ಪ್ರತಾಪ ಸಿಮ್ಹ ತನ್ನ ಬ್ಲಾಗ್‌ನಲ್ಲಿ ಅನೇಕ ಹಿಂದೂ ಬಾಲಕರಿಗೆ ಸಂದೇಶವೊಂದನ್ನು ಕಳಿಸಿ 'wait for few months, we will come back with a very very big project" ಎಂದಿದ್ದಾನೆ.

ಇನ್ನೊಬ್ಬ ಉಚ್ಚಾಟಿತ ಪತ್ರಕರ್ತ ತ್ಯಾಗರಾಜ ಎಂಬುವನು ತನ್ನ ಕೋಟ್ಯಾಂತರ ರೂಪಾಯಿಗಳ ಆಸ್ತಿಪಾಸ್ತಿಗಳ ಬಗ್ಗೆ ಏನು ಮಾತಾಡದೆ "ನಾವು ಈಗ ವಿಕ ಬಸ್‌ನಿಂದ ಕೆಳಗಿಳಿದಿರುವುದು ವಿಮಾನ ಹತ್ತಲು" ಎಂದು ಹೇಳಿಕೊಂಡು ತಿರುಗುತ್ತಿದ್ದಾನೆ.

ತಲೆಯಲ್ಲಿ ಮಲ
ಕೈಯಲ್ಲಿ ಜಲ!

ವಿಶ್ವೇಶ್ವರ ಭಟ್ಟರು ಸಾಕಿಕೊಂಡಿದ್ದ ಹವ್ಯಕರ ಹಿಂಡಿನಲ್ಲಿದ್ದ ಪ್ರಳಯಾಂತಕ ಮಾಣಿ ರಾಧಾಕೃಷ್ಣ ಭಡ್ತಿ!



ತಲೆ ತುಂಬಾ ಹಿಂದೂತ್ವದ ಮಲ ತುಂಬಿಕೊಂಡಿದ್ದ ಈತ ಪ್ರತೀ ವಾರ ಜಲ ಸಂರಕ್ಷಣೆಯ ಬಗೆಗೊಂದು ಕಾಲಮ್ಮು ಹರಿಸುತ್ತಿದ್ದ. ರಾಮಚಂದ್ರಾಪುರ ಮಠದ ನಿಯತ್ತಿನ ಭಕ್ತನಾಗಿರುವ ಈತ ಜಲ ಸಂರಕ್ಷಣೆಗಿಂತಲೂ ಸೆಗಣಿ ಸ್ವಾಮಿ ರಾಘವೇಶ್ವರನ ರಕ್ಷಣೆಗೆ ನಿಂತದ್ದೇ ಹೆಚ್ಚು. ಖುದ್ದು ಈತನ ಸಹೋದ್ಯೋಗಿಗಳೇ 'ಇಂವ ರಾಂಚಂದ್ರಾಪುರ ಮಠದ ಪಿಆರ್‌ಓ' ಅಂತ ಆಡಿಕೊಳ್ಳುತ್ತಿದ್ದರು.

ರಾಘವೇಶ್ವರನ ರಕ್ಷಣೆಯನ್ನೇ ತನ್ನ ಪತ್ರಿಕೋದ್ಯಮದ ಧ್ಯೇಯವಾಗಿಸಿಕೊಂಡಿದ್ದ ಮಹಾನುಭಾವ ಭಡ್ತಿ ಸಾಧ್ಯವಾದಾಗಲೆಲ್ಲ ರಾಘವನ ಪರ ಸುದ್ದಿ ಕೆರೆದ. ಸ್ವಾಮಿಯ ಖಾದಿಗಂಟದ ಅಸಹ್ಯವನ್ನೆಲ್ಲ ಕೊಡವಿ ಬಚಾವಾಗಿಸಲೆತ್ನಿಸಿದ. ಈತನ ಈ ಕಾಯಿಲೆ ಉಲ್ಬಣಿಸಿದ್ದು ಯಡ್ಡಿಯ ಚೆಡ್ಡಿ ಸರ್ಕಾರ ರಾಮಚಂದ್ರಾಪುರಮಠಕ್ಕೆ ಗೋಕರ್ಣ ದೇವಾಲಯವನ್ನು ಅಡವಿಟ್ಟ ಸಂದರ್ಭದಲ್ಲಿ. ಗೋಕರ್ಣ ದೇವಾಲಯ ರಾಮಚಂದ್ರಾಪುರ ಮಠಕ್ಕೆ ಹಸ್ತಾಂತರವಾದುದನ್ನು ವಿರೋಧಿಸಿ ಜನ ಪ್ರತಿಭಟಿಸಿದರು. ಇದು ಪ್ರಜಾವಾಣಿ ಮುಂತಾದ ಪತ್ರಿಕೆಗಳಲ್ಲಿ ವರದಿಯಾಯಿತು. ಆದರೆ ವಿಜಯ ಕರ್ನಾಟಕದಲ್ಲಿ ಮಾತ್ರ ಭಡ್ತಿ 'ಈ ವಿಚಾರವನ್ನ ಜನ ಸ್ವಾಗತಿಸಿದ್ದಾರೆ' ಎಂಬರ್ಥದಲ್ಲಿ ವರದಿ ಬರೆಸಿದ್ದ! ಇಂಥವನು ರಾಘವೇಶ್ವರ ಗೋಕರ್ಣದ ಮೇಲೆ ದಂಡೆತ್ತಿ ಹೋಗಿ ಹುಂಡಿ ಲೂಟಿ ಹೊಡೆದರೆ ಅದರ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ.

ಗೋಕರ್ಣ ಹಸ್ತಾಂತರ ಸಂಬಂಧ ಅದರ ಕೆಲ ಪೂಜಾರಿಗಳು ರಾಮಚಂದ್ರಾಪುರ ಮಠದ ವಿರುದ್ಧ ದಾವೆ ಹೂಡಿದ್ದರು. ಅವರನ್ನೆಲ್ಲ ಹಣಿಯಲು ಭಡ್ತಿ ಒಂದು ತಂತ್ರ ರೂಪಿಸಿದ. ಅದರಂತೆ ಗೋಕರ್ಣದ ಹಲವು ಯುವಕರು ರಾಘವೇಶನ ವಿರುದ್ಧ ಸೆಕ್ಸ್ ಸಿಡಿಯನ್ನು ತಯಾರಿಸುತ್ತಿದ್ದಾರೆ ಎಂದು ಆರೋಪಿಸಿ ಅವರನ್ನು ಬಂಧಿಸಿದ್ದು. ಈ ಭಡ್ತಿ ಎಂತಹ ಖದೀಮನೆಂದರೆ ಆ ಹಗರಣದಲ್ಲಿ ಕರ್ನಾಟಕದ ಹಿರಿಯ ಪತ್ರಕರ್ತರಾಗಿರುವ ಈಗ CNN FBNನಲ್ಲಿ ಹಿರಿಯ ಹುದ್ದೆಯಲ್ಲಿರುವ ಡಿ.ಪಿ.ಸತೀಶ್ ಎಂಬುವವರನ್ನ ಫಿಕ್ಸ್ ಮಾಡಲು ಹವಣಿಸಿದ್ದ. ಆದರೆ ಗೋಪಾಲ್ ಹೊಸೂರ್ ಜಿಲ್ಲೆಯಲ್ಲಿದ್ದ ಕಾರಣ ಭಡ್ತಿಯ 'ಜಲ ಬಾಧೆ'ಗೆ ಬ್ರೇಕ್ ಬಿತ್ತು.

ರಾಮಚಂದ್ರಾಪುರ ಮಠದ ಅಸಹ್ಯವನ್ನು ಯಾರ್ಯಾರು ವಿರೋಧಿಸುತ್ತಾರೋ ಅಂಥವರಿಗೆಲ್ಲಾ ಕಿರುಕುಳ ಕೊಡುವುದು ಭಡ್ತಿಯ ಜಾಯಮಾನ. ಸಾಗರದಲ್ಲಿ ಮಣ್ಣಿನ ವಾಸನೆ ಎಂಬ ಪತ್ರಿಕೆಯ ಮೂಲಕ ಮಠಕ್ಕೆ ಅಟಕಾಯಿಸಿಕೊಂಡ ಅ.ರಾ. ಶ್ರೀನಿವಾಸ್ ಕೂಡ ಇಂತಹುದೇ ಕಿರುಕುಳ ಅನುಭವಿಸಿದ್ದರು. ಅವರನ್ನು ವಿಪರೀತವಾಗಿ ಕಾಡಿಸಿದ ಭಡ್ತಿ ಪತ್ರಿಕೆಯನ್ನೇ ನಿಲ್ಲಿಸಿಬಿಟ್ಟಿದ್ದ!

ಈತ ಪತ್ರಿಕಾಧರ್ಮವನ್ನೇ ಯಾವ ಪರಿ ತನ್ನ ತೆವಲಿಗೆ ಬಲ್ಕಿಬೀಳಿಸಿದ್ದನೆಂದರೆ, ಸತ್ಯವನ್ನು ಕುರುಹೇ ಇಲ್ಲದಂತೆ ತಿರುಚಿ ಬಿಡುತ್ತಿದ್ದ. ಅದಕ್ಕೆ ಗೋಕರ್ಣ ಹಸ್ತಾಂತರ ವಿಚಾರದಲ್ಲಿ ಹುಬ್ಬಳ್ಳಿ-ಧಾರವಾಡ ವಿಭಾಗೀಯ ಪೀಠ ನೀಡಿದ ತೀರ್ಪು ಸ್ಪಷ್ಟ ಉದಾಹರಣೆ. ಆ ತೀರ್ಪು ವಾಸ್ತವವಾಗಿ ಸೆಗಣಿ ಸ್ವಾಮಿಯ ವಿರುದ್ಧವಿತ್ತು. ಆದರೆ ಭಡ್ತಿ ವಿಕದಲ್ಲಿ ರಾಘವೇಶ್ವರನ ಪರ ತೀರ್ಪು ಅಂತಲೇ ಪ್ರಕಟಿಸಿದ್ದ.

ಸೆಗಣಿ ರಾಘವನ ಭಾವ ಜಗದೀಶ ಹವ್ಯಕ ಹುಡುಗಿಯರಿಗೆ ಲೈಂಗಿಕ ಕಿರುಕುಳ ಕೊಟ್ಟು ಪರಾರಿಯಾದನಲ್ಲಾ? ಆ ಬಗ್ಗೆ ಪೋಷಕರೇ ದೂರು ನೀಡಿ ತಿರುಗಿ ಬಿದ್ದರೂ ವಿಕದಲ್ಲಿ ಆ ಬಗ್ಗೆ ಪುಟ್ಟದೊಂದು ವರದಿಯೂ ಪ್ರಕಟವಾಗಿರಲಿಲ್ಲ. ಆ ಪವಾಡದ ಹಿಂದಿದ್ದದ್ದು ಇದೇ ಭಡ್ತಿ!

ತಾನೇ ಸಾಕಿದ ಹವ್ಯಕ ಮಾಣಿ ಭಡ್ತಿ ಸೆಗಣೀಲಿ ಬಿದ್ದು ಕೈಕಾಲು ಬಡಿದರೂ ವಿಭಟ್ಟರು ಅಖಂಡ ಮೌನ ಧರಿಸಿ ತೆಪ್ಪಗಿದ್ದರು. ಅದಕ್ಕೀಗ ತಕ್ಕುದಾದ ಬೆಲೆ ತೆತ್ತಿದ್ದಾರೆ.

ಸುದ್ದಿ ಮನೆ ಕತೆ
ಅಂತೆ-ಕಂತೆ

ಕನ್ನಡದ ಪತ್ರಿಕೆ ಹಾಗೂ ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಈಗ ಅಂತೆಕಂತೆಗಳದ್ದೇ ಭರಾಟೆ:

ವಿಭಟ್ಟರ ಕೋಮುವಾದಿ ಗ್ಯಾಂಗ್ ಹೊಸ ಟ್ಯಾಬ್ಲಾಯ್ಡ್ ಡೈಲಿ ಮಾಡುತ್ತಾರೆಂಬ ರೂಮರ್ ಒಂದಾದರೆ ಸುವರ್ಣ ಚಾನಲ್‌ನ ರಂಗನಾಥ್ ಕಸ್ತೂರಿ ಚಾನಲ್ ಸೇರುವ ಸುದ್ದಿಯೂ ಹರಿದಾಡುತ್ತಿದೆ. ಸುವರ್ಣ ಚಾನೆಲ್‌ನ ಮಾಲೀಕ ರಾಜೀವ್ ಚಂದ್ರಶೇಖರ್ ಯಾವ ಕಾರಣಕ್ಕೋ ಏನೋ ರಂಗನಾಥರನ್ನು ಕರೆದು ತರಾಟೆಗೆ ತೆಗೆದುಕೊಂಡರೆಂಬ ಕಾರಣಕ್ಕೆ ಈ ಬೆಳವಣಿಗೆ ಆಗುತ್ತಿದೆ ಎನ್ನಲಾಗಿದೆ. ಕಸ್ತೂರಿ ಟಿವಿ ಸಂಸ್ಥೆ ಸದ್ಯದಲ್ಲೇ ಕಸ್ತೂರಿ ನ್ಯೂಸ್ ಚಾನಲ್ ಶುರು ಮಾಡುತ್ತಿದ್ದಾರೆ. ಅದರೊಂದಿಗೆ 'ಸೂರ್ಯೋದಯ' ಎನ್ನುವ ದಿನಪತ್ರಿಕೆಯನ್ನು ಮಾಡುವ ಯೋಚನೆ ಅವರಿಗಿದೆ. ಬಹಳ ಹಿಂದೆ ಗುರುಟೀಕ್ ಸಂಸ್ಥೆಯ ಗಂಗಾಧರ್ ಈ ಸೂರ್ಯೋದಯ ನಡೆಸುತ್ತಿದ್ದರು.

ಒಂದು ವೇಳೆ ರಂಗನಾಥ್ ಕಸ್ತೂರಿಗೆ ಹೋದರೆ ನ್ಯೂಸ್ ಚಾನಲ್ ಹಾಗೂ ಡೈಲಿ ಎರಡನ್ನೂ ನೋಡಿಕೊಳ್ಳುತ್ತಾರಂತೆ!

ಈ ನಡುವೆ ರೆಡ್ಡಿ-ರಾಮುಲು ದಂಪತಿಗಳದ್ದೂ ಒಂದು ಡೈಲಿ ಪೇಪರ್ ಜನ್ಮ ತಾಳಲಿದೆ ಎಂಬ ರೂಮರುಗಳಿವೆ. ಅದರ ಹೆಡ್ ಯಾರಾಗಿರುತ್ತಾರೆ ಟೇಲ್ ಯಾರೆಂಬುದು ಇನ್ನೂ ಖಚಿತವಾಗಿಲ್ಲ.

ಅತ್ತ ವಿಜಯ ಸಂಕೇಶ್ವರ್‌ಗೆ 2011 ರ ಡಿಸೆಂಬರ್‌ವರೆಗೂ ಹೊಸ ಡೈಲಿ ಮಾಡಲು ಅವಕಾಶಗಳಿಲ್ಲ. ವಿಜಯ ಕರ್ನಾಟಕವನ್ನು ಟೈಮ್ಸ್‌ನವರಿಗೆ ಮಾರಿದಾಗ ಹೊಸ ಮಾಲೀಕ ಹಾಕಿದ್ದ ಷರತ್ತದು. ಈ ನಡುವೆ ಹೊಸ ಟಿವಿ ಚಾನಲ್ ಮಾಡಲು ಸರ್ವೆ ನಡೆಸುತ್ತಿರುವ ಸಂಕೇಶ್ವರ್ ಬೇರೆ ಬೇರೆ ಟಿವಿ ಚಾನಲ್ ಆಫೀಸ್‌ಗಳಿಗೆ ಭೇಟಿ ಕೊಡುತ್ತಿದ್ದಾರೆ. ಅವರು ವಿಜಯ ಕರ್ನಾಟಕ ಶುರು ಮಾಡುವ ಮೊದಲು ಪ್ರಜಾವಾಣಿ, ಉದಯವಾಣಿ, ಎಕ್ಸ್‌ಪ್ರೆಸ್ ಕಚೇರಿಗಳ ಒಳಹೊಕ್ಕು ಬಂದಿದ್ದರು. ಲಂಕೇಶ್ ಕಚೇರಿಗೂ ಬಂದಿದ್ದರು. ಯಾವ್ಯಾವ ಪತ್ರಿಕೆಯ ಆಫೀಸು, ಸಿಬ್ಬಂದಿ, infrastructure ಹೇಗೇಗಿದೆ, ಟರ್ನ್ ಓವರ್ ಎಷ್ಟು ಎಂಬುದನ್ನು ಪತ್ತೆಹಚ್ಚಿಯೇ ಸಂಕೇಶ್ವರ್ ಮುಂದಿನ ಹೆಜ್ಜೆ ಇಡುವ ಪೈಕಿ.



ರಂಗನಾಥ್

ಅವರು ಮೊನ್ನೆ ಸುವರ್ಣ ಚಾನಲ್ ಆಫೀಸ್ ನೋಡಲು ಬರುತ್ತೇನೆಂದಾಗ ರಂಗನಾಥ್ ಬೇಡ ಅಂದು ವಾಪಸ್ ಕಳಿಸಿದರಂತೆ.

ಇದೆಲ್ಲದರ ಸಾರಾಂಶವಿಷ್ಟೆ.

ವಿಭಟ್ಟರು ಒಂದು ಹೊಸ ದಿನಪತ್ರಿಕೆ ಶುರುಮಾಡಲು ಯೋಚಿಸುತ್ತಿದ್ದಾರಂತೆ. ...ಮ ಟ್ಯಾಬ್ಲಾಯ್ಡ್ ಶೈಲಿನ ಡೈಲಿ! ಅಂತಾದ್ದೊಂದು ಸಣ್ಣ ಆಕಾರದ ಡೈಲಿಗೆ ...ರ್ಕೆಟ್ ಇದೆ ಎಂಬುದು ಭಟ್ಟರ ನಂಬಿಕೆ.

...ಪ್ರತಾಪ ಸಿಮ್ಹ ಹೇಳಿಕೊಂಡು ತಿರುಗುತ್ತಿರುವ ಟ್ಯಾಬ್ಲಾಯ್ಡ್ ಅಂದರೆ ...ವೇನೇ!

ಇದಕ್ಕೂ ಮುನ್ನ ನಡೆದದ್ದೇನೆಂದರೆ ವಿಕದಿಂದ ಡಿಸ್‌ಮಿಸ್ ಆದ ವಿಭಟ್ಟರು ...ರ್ಜೆಂಟಾಗಿ ಬಳ್ಳಾರಿ ಜನಾರ್ದನ ರೆಡ್ಡಿಯನ್ನು ಹೋಗಿ ಭೇಟಿಯಾಗಿದ್ದರು. ...ಡ್ಡಿ ಚಾನಲ್ಲಿಗೂ ಅಥವಾ ರೆಡ್ಡಿಯ ಹೊಸ ಡೈಲಿಗೊ ತೂರಿಕೊಳ್ಳುವ ...ಯೋಚನೆ ಭಟ್ಟರಿಗಿತ್ತು, ಆದರೆ ರೆಡ್ಡಿ ಯಾವುದೇ ಖಚಿತ ಭರವಸೆ ಕೊಡಲಿಲ್ಲ, ...ರಡನೇ ಸಾರಿ ವಿಭಟ್ಟರು ಫೋನ್ ಮಾಡಿದಾಗ ರೆಡ್ಡಿ ನಿರ್ಲಕ್ಷಿಸಿ ಫೋನ್ ...ನ್ನ ರಿಸೀವ್ ಮಾಡಿಲ್ಲ. ಹೀಗೆ ಈಶಾನ್ಯ ಬಾಗಿಲು ಮುಚ್ಚಿದ ಮೇಲೆ ...ಭಟ್ಟರು ಉತ್ತರ ದಿಕ್ಕಿನತ್ತ ತಲೆ ಹಾಕಿದರು. ಬಿಜೆಪಿ ಸಂಸದ ಪ್ರಭಾಕರ ...ಕೋರೆಯನ್ನು ಹಿಡಿದು ಹೊಸ ಡೈಲಿ ಮಾಡಿಸುವ ಯೋಚನೆ ಭಟ್ಟರಿಗಿತ್ತು.

ಆದರೆ ಯಡ್ಡಿ ಜೊತೆ ಕ್ಲೋಸಾಗಿರುವ ಕೋರೆಗೆ ಯಡ್ಡಿಯ ವಿರೋಧಿ ...ಭಟ್ಟರೊಂದಿಗೆ ವ್ಯವಹಾರ ಬೇಕಿರಲಿಲ್ಲ. ಈ ನಡುವೆ ರಾಜೀವ ಚಂದ್ರಶೇಖರನ್ನು ...ಸಂಪರ್ಕಿಸಿದ ವಿಭಟ್ಟರು ಸುವರ್ಣ ಚಾನಲ್ ಮುಖ್ಯಸ್ಥರಾಗಲು ನೋಡಿದರು. ...ಲ್ಲಿ ಮಾಲೀಕ ರಾಜೀವನೂ ಮುಖ್ಯಸ್ಥ ರಂಗನಾಥ್‌ಗೂ ಇತ್ತೀಚೆಗೆ ವಿಶ್ವಾಸ ...ಕಮೆಯಾಗಿದೆ. ಒಂದು ಸಣ್ಣ ಮುನಿಸಿನ ಜಗಳವೂ ಆಗಿದೆ. ಬೇಸರಗೊಂಡ ...ರಂಗನಾಥ ಕಸ್ತೂರಿ ಟಿವಿಯ ಹೊಸ ನ್ಯೂಸ್ ಚಾನಲ್ ಸೇರಲು ...ಯೋಚಿಸುತ್ತಿದ್ದಾರಂತೆ ಎಂಬ ಸುದ್ದಿ ಹಬ್ಬಿದ್ದೇ ತಡ ವಿಭಟ್ಟರು ಸುವರ್ಣ ...ಚಾನಲ್‌ನತ್ತ ಹೊರಟಿದ್ದರು. ಆದರೆ ಅದು ಮುಂದುವರೆಯಲಿಲ್ಲ. ಇನ್ನು ...ವಿಜಯ ಸಂಕೇಶ್ವರ್ ಏನಾದರೂ ಹೊಸ ಪತ್ರಿಕೆ ಮಾಡುತ್ತಾರಾ ಎಂತಲೂ ಈ ...ಕುಂಪು ವಿಚಾರಿಸಿದೆ. ಆದರೆ ಸಂಕೇಶ್ವರ್ ಈಗ ಹೊಸ ಟಿವಿ ಚಾನಲ್ ...ಮಾಡುವ ಹುಮ್ಮಸ್ಸಿನಲ್ಲಿದ್ದಾರೆ. ಅವರಿಗೂ ಭಟ್ಟರಾಗಲಿ ಅವರ ತಂಡವಾಗಲೀ ...ಬೇಕಿಲ್ಲ.

ಹೀಗೆ ನಾಲ್ಕು ದಿಕ್ಕಿನಲ್ಲೂ ಎಲ್ಲಾ ಬಾಗಿಲೂ ಬಂದ್ ಆದ ಮೇಲೆ ...ವಿಭಟ್ಟರಿಗೆ ಉಳಿದಿದ್ದೊಂದೇ ದಾರಿ: ಅದು ಸ್ವಂತ ಪತ್ರಿಕೆ ಮಾಡುವುದು.

ವಿಕದಲ್ಲಿ ಬ್ರಾಹ್ಮಣರದ್ದೇ ಮೆಜಾರಿಟಿ

ಟೈಮ್ಸ್ ಧಣಿಗಳು 'ಆಪರೇಷನ್ ವಿಭಟ್ಟ' ಶುರು ಮಾಡಿ ಸಕ್ಸೆಸ್ ಆದ ...ನಂತರ ಭಟ್ಟರಿದ್ದಾಗ ವಿಜಯ ಕರ್ನಾಟಕದೊಳಗೆ ಏನೇನು ...ಅನಾಹುತಗಳಾಗಿದ್ದವೆಂಬುದು ಈಗ ಒಂದೊಂದಾಗಿ ಹೊರಬೀಳುತ್ತಿದೆ.

ವಿಭಟ್ಟರ ಬ್ರಾಹ್ಮಣ ಸ್ವಜಾತಿ ಪ್ರೇಮವೆಂಬ ಕಾಯಿಲೆಯೂ ಅದರಲ್ಲೊಂದಾಗಿದೆ. ಒಂದು ಅಂದಾಜಿನ ಪ್ರಕಾರ ವಿಜಯ ಕರ್ನಾಟಕದ ಬೆಂಗಳೂರು ...ಕಚೇರಿಯಲ್ಲಿರುವ ನೂರಾಹತ್ತು ಮಂದಿ ಸಿಬ್ಬಂದಿಯ ಪೈಕಿ ಅರವತ್ತು ಜನ ...ಬ್ರಾಹ್ಮಣರು. ಅದರಲ್ಲೂ ಹವ್ಯಕ ಬ್ರಾಹ್ಮಣ ಪತ್ರಕರ್ತರೇ ಇದ್ದಾರೆ. ಕಳೆದ ...ಐದಾರು ವರ್ಷದಲ್ಲಂತೂ ವಿಭಟ್ಟರು ಬ್ರಾಹ್ಮಣರನ್ನೇ ಹುಡುಕುಡುಕಿ ...ವಿಜಯ ಕರ್ನಾಟಕಕ್ಕೆ ಸೇರಿಸಿಕೊಂಡಿದ್ದಾರೆ. ಪತ್ರಿಕೆಯೊಂದರ ಆರೋಗ್ಯ ಕೆಡಲು ...ಇಷ್ಟುಸಾಕು. ನೀವು ಪ್ರಜಾವಾಣಿಯೋ, ವಾರ್ತಾಭಾರತಿಯ ಕಚೇರಿಯಲ್ಲೋ ...ಒಮ್ಮೆ ಚೆಕ್ ಮಾಡಿ ನೋಡಿ, ಅಲ್ಲಿನ ಸಿಬ್ಬಂದಿಯಲ್ಲಿ ನಾನಾ ಜಾತಿ, ವರ್ಗದ ...ಹಿನ್ನೆಲೆಯ ಜನ ಇರುತ್ತಾರೆ. ಕರ್ನಾಟಕದ ಮೂಲೆಮೂಲೆಗಳಿಂದ ಬಂದಿರುವವರು ...ಪತ್ರಕರ್ತರಾಗಿ ದುಡಿಯುತ್ತಿದ್ದಾರೆ. ಆದರೆ ವಿಭಟ್ಟರು ಮಲೆನಾಡಿನ ಹವ್ಯಕ ಬ್ರಾಹ್ಮಣರನ್ನೇ ಆರಿಸಿ ವಿಕದೊಳಗೆ ತುಂಬಿಕೊಂಡು ತಮ್ಮ ಗಲೀಜು ಜಾತಿವಾದ ತೋರಿಸಿಕೊಂಡರು. ಈ ಗುಂಪಿನ ಬಹುತೇಕ ಮಟುಗಳು ಕೌಬಾಯ್ ರಾಘವೇಶ್ವರ ಸ್ವಾಮಿಯ ಶಿಷ್ಯರೂ ಹೌದು. ಹಾಗಾಗಿ ರಾಗವೇಶ್ವರನ ಮಠದೊಳಗೆ ಸೆಕ್ಸ್ ಸ್ಕ್ಯಾಂಡಲ್‌ಗಳಾದರೂ, ಗೂಂಡಾಗಿರಿ ನಡೆದರೂ ವಿಜಯ ಕರ್ನಾಟಕ ಅದನ್ನೆಲ್ಲಾ ಬರೆಯದೆ ಪತ್ರಿಕಾ ಧರ್ಮಕ್ಕೂ ಮೋಸ ಮಾಡುತ್ತಿತ್ತು.

ಕೇವಲ ಬೆಂಗಳೂರು ಕಚೇರಿ ಮಾತ್ರವಲ್ಲದೆ ವಿಕಗೆ ರಾಜ್ಯಾದ್ಯಂತ ಇರುವ ಐನೂರಕ್ಕೂ ಹೆಚ್ಚು ಸಿಬ್ಬಂದಿಗಳ ಪೈಕಿ ಬ್ರಾಹ್ಮಣರೇ ಜಾಸ್ತಿ ಇರುವುದು ನಿಜ. ಇದು ಕೇವಲ ಪ್ರತಿಭೆಗೆ ಸಂಬಂಧಿಸಿದ್ದಲ್ಲ. ಟೈಮ್ಸ್ ಧಣಿಗಳು ಇದರ ಬಗ್ಗೆಯೂ ಈಗ ತನಿಖೆ ನಡೆಸುತ್ತಿದ್ದಾರೆ.

ವಿಶ್ವೇಶ್ವರ ಭಟ್ ಎಂಬ ಸಾಮಾಜಿಕ ಅಪರಾಧಿ



ಕೇವಲ ಹತ್ತೇ ದಿನಗಳಲ್ಲಿ ವಿಜಯ ಕರ್ನಾಟಕದ content ನಲ್ಲಿ ಬದಲಾವಣೆ ಕಾಣಿಸಿಕೊಳ್ಳಲು ಶುರುವಾಗಿದೆ. ಸಂಪಾದಕೀಯ, ಕಾಲಂಗಳು, ಓದುಗರ ಪತ್ರಗಳಲ್ಲಿರುತ್ತಿದ್ದ ಹಸೀಹಸೀ ಹಿಂದೂ ಕೋಮುವಾದಿ ನಿಲುವುಗಳು ಕಡಿಮೆಯಾಗಿವೆ. ಸಂಪಾದಕೀಯದ ಅಕ್ಕಪಕ್ಕದ ಪುಟಗಳನ್ನು ಯಾವಾಗಲೂ ಆಕ್ರಮಿಸಿಕೊಂಡಿರುತ್ತಿದ್ದ RSS ಎಲಿಮೆಂಟುಗಳು ಕಾಣೆಯಾಗಿದ್ದಾರೆ.

ಇದೊಂದು ಗಮನಾರ್ಹ, ಸ್ವಾಗತಾರ್ಹ ಬದಲಾವಣೆ.

ಕರ್ನಾಟಕದ ನಂಬರ್ ಒನ್ ದಿನಪತ್ರಿಕೆಯಾಗಿದ್ದ ವಿಜಯ ಕರ್ನಾಟಕದ ವಿಶ್ವೇಶ್ವರ ಭಟ್ ಮತ್ತವರ ಕೋಮುವಾದಿ ಟೀಂನವರ ಸಮಾಜ ವಿರೋಧಿ ನಿಲುವುಗಳು ಇಡೀ ಕನ್ನಡ ದಿನಪ್ರತಿಕಾ ಮಾಧ್ಯಮವನ್ನೇ ಧೃತಿಗೆಡಿಸಿತ್ತು. ಪ್ರಜಾವಾಣಿಯಂತಹ ಸೆಕ್ಯುಲರ್ ದಿನಪತ್ರಿಕೆಗಳೂ ಕೂಡಾ ಕೋಮುವಾದಿ ವಿರೋಧಿ ನಿಲುವು ತಳೆಯಲು ಹಿಂಜರಿಯುವಂತೆ ಪರೋಕ್ಷ ಒತ್ತಡವನ್ನು ವಿಕ ಬಳಗ ಹೇರುತ್ತಿತ್ತು. ವಿಕಗಿದ್ದ ಪ್ರಸಾರ ಸಂಖ್ಯೆ, ಹರಿದುಬರುತ್ತಿದ್ದ ಜಾಹೀರಾತುಗಳು, ಓದುಗರ ಮೇಲೆ ಹೇರುತ್ತಿದ್ದ ಕೋಮುವಾದಿ ಅಜೆಂಡಾಗಳು ಉಳಿದ ಡೈಲಿಗಳ ಮೇಲೆ ಅದೆಷ್ಟು ಪರಿಣಾಮ ಬೀರಿದ್ದವೆಂದರೆ ಅನೇಕ ನಿರ್ಣಾಯಕ ಸಂದರ್ಭಗಳಲ್ಲಿ ಖಚಿತ ಜನಪರ ನಿಲುವು ತಳೆಯಲಾಗದಂತೆ ಇಕ್ಕಟ್ಟಿನ ಸನ್ನಿವೇಶ ನಿರ್ಮಾಣವಾಗುತ್ತಿತ್ತು.



ಇಡೀ ಸಮಾಜವೇ ಕೋಮುವಾದಿಯಾಗಿ ಬದಲಾಗುತ್ತಿರುವಾಗ ತಾವು ಆ ಟ್ರೆಂಡ್‌ನ ವಿರುದ್ಧ ನಿಲ್ಲುವುದು ಕ್ಷೇಮವಲ್ಲವೆಂಬ ಭಾವನೆ ಇತರ ಡೈಲಿಗಳಲ್ಲಿ ಮೂಡುವಂತೆ ವಿಭಟ್ಟರ ಗ್ಯಾಂಗ್ ಮಾಡಿತ್ತು.

ಹಾಗೆ ನೋಡಿದರೆ ಟೈಮ್ಸ್ ಗುಂಪಿನ ಎಲ್ಲಾ ಪತ್ರಿಕೆಗಳೂ ವಿಕದಂತೆ ಹಸಿಹಸಿ ಕೋಮುವಾದಿಯಾಗಿರಲಿಲ್ಲ. ಉಷಾಕಿರಣ, ಬೆಂಗಳೂರು ಮಿರರ್, ವಿಜಯ ಟೈಮ್ಸ್, ಕನ್ನಡ ಟೈಮ್ಸ್ ಆಫ್ ಇಂಡಿಯಾ, ಈಗಿನ ವಿಜಯ ನೆಕ್ಸ್ಟ್ ಪತ್ರಿಕೆಗಳಿಗೆ ಕೋಮುವಾದ ಒಂದು ಪ್ರಮುಖ ಅಜೆಂಡಾ ಆಗಿರಲೇ ಇಲ್ಲ. ಆದರೆ ವಿಜಯ ಕರ್ನಾಟಕ ವಿಭಟ್ಟರ ಕೈಲಿತ್ತಾದ್ದರಿಂದ ಅದು ಜನವಿರೋಧಿ ನಿಲುವು ತಾಳಿ ಸಂಪೂರ್ಣ RSS ಪಾಂಪ್ಲೆಟ್ ರೀತಿ ಬದಲಾಗಿತ್ತು. RSSನ ಅಜೆಂಡಗಳಾದ ದಲಿತ ವಿರೋಧಿ, ಮುಸ್ಲಿಂ-ಕ್ರಿಶ್ಚಿಯನ್ ವಿರೋಧಿಯಾಗಿ ಹಿಂದುಳಿದ ವರ್ಗಗಳ ಮಹಿಳೆಯರ ವಿರುದ್ಧ ವಿಕ ಬಿಟ್ಟೂಬಿಡದೆ ದಾಳಿ ನಡೆಸುತ್ತಾ ಹೋಯಿತು. ಮುಸ್ಲಿಂ ಹಾಗೂ ಕ್ರಿಶ್ಚಿಯನ್ನರ ವಿರುದ್ಧ ಸುಳ್ಳು ಸುದ್ದಿಗಳನ್ನು ಪ್ರಕಟಿಸುವುದರಲ್ಲಿ ವಿಕ ಎಕ್ಸ್‌ಪರ್ಟ್ ಆಗಿಹೋಗಿತ್ತು. ವಿಭಟ್ಟರು ಎಂತಾ ಆತ್ಮವಂಚನೆಯ ಜರ್ನಲಿಸಂ ಮಾಡುತ್ತಿದ್ದರೆಂದರೆ ಅನೇಕ ಕೋರ್ಟ್ ಪ್ರಕರಣ; ವಿಚಾರಣೆ ಹಾಗೂ ತೀರ್ಪುಗಳ ಸುದ್ದಿಗಳನ್ನೇ ತಿರುಚಿ ಅದಕ್ಕೆಲ್ಲಾ ಕೋಮುವಾದಿ ಮತ್ತು ಪುರೋಹಿತರ ಹಿತಾಸಕ್ತಿ ರಕ್ಷಿಸುವ ಆಯಾಮ ನೀತಿ ಪ್ರಕಟಿಸುತ್ತಿದ್ದರು.

ವರ್ಷಾನುಗಟ್ಟಲೆ ನಡೆದ ಈ ರೀತಿಯ ನೀಚ ಕೆಲಸದಿಂದಾಗಿ ಕನ್ನಡ ಪತ್ರಿಕೋದ್ಯಮ ಮಾತ್ರವಲ್ಲದೆ ಇಡೀ ಸಮಾಜದ ಸ್ವಾಸ್ಥ್ಯವೇ ಹಾಳಾಗಿಹೋಗಿದೆ. ಈ ಸಾಮಾಜಿಕ ಅಪರಾಧವೆಸಗಿದ ಆರೋಪಿ ವಿಶ್ವೇಶ್ವರ ಭಟ್.

ವಿಭಟ್ಟರ 4 ಕೋಟಿಯ ಬಂಗಲೆ

ವಿಶ್ವೇಶ್ವರ ಭಟ್ಟರನ್ನು ಡಿಸ್‌ಮಿಸ್ ಮಾಡುವ ಮುನ್ನ ಟೈಮ್ಸ್ ತನಿಖಾ ತಂಡ ಪತ್ತೆಹಚ್ಚಿದ ಸಂಗತಿಗಳಲ್ಲಿ ವಿಭಟ್ಟರ ನಾಲ್ಕು ಕೋಟಿ ರೂಪಾಯಿ ಬೆಲೆಯ ಅಪೂರ್ಣ ಬಂಗಲೆಯ ವಿಚಾರವೂ ಸೇರಿಕೊಂಡಿತ್ತು ಎನ್ನಲಾಗಿದೆ. ಬೆಂಗಳೂರಿನ ಮೈಸೂರು ರಸ್ತೆಯ ರಾಜರಾಜೇಶ್ವರಿನಗರದ ಬಳಿ ಇರುವ ಬಿಮೆಲ್ ಲೇಔಟ್‌ನಲ್ಲಿದೆ ಈ ಬಂಗಲೆ. 40x60 ವಿಸ್ತೀರ್ಣದ ಸೈಟಿನಲ್ಲಿ ನಿರ್ಮಿಸಲಾಗುತ್ತಿರುವ ಈ ಬಂಗಲೆ ಅತ್ಯಂತ ದುಬಾರಿಯ ಗ್ರಾನೈಟ್ ಕಲ್ಲುಗಳು ಹಾಗೂ ಸಂಪೂರ್ಣ ಟೀಕ್ ಮರ ಬಳಸಿ ನಿರ್ಮಾಣವಾಗುತ್ತಿದೆ.

ವಿಕದಲ್ಲಿದ್ದ ಕೆಲವರಿಗೆ ತಮ್ಮ ಆಸ್ತಿ ಹೇಗೆ ಬೆಳೆಸಿಕೊಳ್ಳಬೇಕೆಂಬ ಟ್ರಿಕ್ ಚೆನ್ನಾಗಿಯೇ ಗೊತ್ತಿತ್ತು. ಉದಾಹರಣೆಗೆ ಹುಬ್ಬಳ್ಳಿ ಬ್ಯೂರೋ ಚೀಫ್ ಆಗಿದ್ದ ಯತಿರಾಜ್ ಬೆಂಗಳೂರಿನ ಡಾಲರ್ಸ್ ಕಾಲನಿಯಲ್ಲಿ ಮನೆ ಕಟ್ಟುತ್ತಿದ್ದಾಗ ಇಂತದ್ದೇ ಕ್ವಾಲಿಟಿಯ ಟೈಲ್ಸ್ ಬೇಕೆಂದು ಕಾಯುತ್ತಾ ಮನೆ ನಿರ್ಮಾಣ ಕೆಲಸವನ್ನೇ ನಿಲ್ಲಿಸಿದ್ದ. ಕೊನೆಗೆ ಕಟ್ಟಾ ನಾಯ್ಡು ತನ್ನ ಅಂಗಡಿಯಿಂದ ಲಕ್ಷಾಂತರ ರೂ. ಬೆಲೆಯ ಟೈಲ್ಸ್ ಕಳಿಸಿದ ಮೇಲೆಯೇ ಯತಿರಾಜನ ಮನೆ ಕೆಲಸ ಮುಂದುವರೆದಿತ್ತು.



ವಿಭಟ್ಟರ 4 ಕೋಟಿ ರೂ. ಬೆಲೆಯ ಭವ್ಯ ಬಂಗಲೆ...

ಇಲ್ಲಿನ ಪ್ರಶ್ನೆ ಏನೆಂದರೆ ವಿಭಟ್ಟರು ವಿಜಯ ಕರ್ನಾಟಕದ ಮಾಲೀಕರೇನಾಗಿರಲಿಲ್ಲ. ಡೈಲಿಯ ಸಂಪಾದಕರಾಗಿ ತಿಂಗಳಿಗೆ ಒಂದೂವರೆಯೋ ಎರಡು ಲಕ್ಷವೋ ಸಂಬಳ ಪಡೆಯುತ್ತಿದ್ದ ಈತ ನಾಲ್ಕು ಕೋಟಿ ರೂಪಾಯಿ ಖರ್ಚು ಮಾಡಿ ಅಂತಹ ಬೃಹತ್ ಬಂಗಲೆ ಕಟ್ಟಲು ಹೇಗೆ ಸಾಧ್ಯವಾಯಿತೆಂಬುದೇ ಯಕ್ಷ ಪ್ರಶ್ನೆ?

ಇಷ್ಟೊಂದು ಅಗಾಧ ಮೊತ್ತವನ್ನು ತಾನು ಹೇಗೆ ಗಳಿಸಿದೆ ಎಂಬ ಬಗ್ಗೆ ವಿಭಟ್ಟರು ಕರ್ನಾಟಕದ ಜನತೆಗೆ ಹೇಳಬೇಕಿರುವುದು ಅವರ ನೈತಿಕ ಜವಾಬ್ದಾರಿಯೂ ಹೌದಲ್ಲವೆ?

ಮಾಜಿ ಸಚಿವ ಅರವಿಂದ ಲಿಂಬಾವಳಿ, ಖದೀಮ ಕಟ್ಟಾ ನಾಯ್ಡು, ಜನತಾದಳದ ಒಬ್ಬ ನಾಯಕ-ಹೀಗೆ ಅನೇಕರು ತಾವು ವಿಭಟ್ಟರ ಮನೆ ನಿರ್ಮಾಣಕ್ಕೆ ದುಡ್ಡು ಕೊಟ್ಟಿದ್ದಾಗಿ ಈಗ ಹೇಳಿಕೊಂಡು ತಿರುಗುತ್ತಿದ್ದಾರೆ.

ಇದು ನಿಜವಾ ಭಟ್ಟರೆ?



ಡೀಲ್ ಮಾಸ್ಟರ್ ದೇವಶೆಟ್ಟಿ!

ವಿಶ್ವೇಶ್ವರ ಭಟ್ ಕಿಕ್‌ಔಟ್ ಆದ ಬಳಿಕ ಟೈಮ್ಸ್ ಆಡಳಿತ ಮಂಡಳಿ ಮಿಕ್ಕ ಒಂದಷ್ಟು ಮಂದಿ ಭ್ರಷ್ಟರನ್ನೂ ಹೊರಗಟ್ಟಿದೆ. ಆದರೆ ಅಕ್ಷರಗಳ ಮೂಲಕವೇ ಕೋಟಿ ಸಂಪಾದಿಸಿದ ಇನ್ನೊಂದಷ್ಟು ಮಂದಿ ಕಡು ಭ್ರಷ್ಟರು ವಿಕದಲ್ಲೇ ಅಡ್ಡೆ ಹಾಕಿದ್ದಾರೆ. ಅಂಥವರಲ್ಲಿ ಮಹೇಶ್ ದೇವಶೆಟ್ಟಿ ಮೊದಲಿಗ.



ವಿಕದ ಸಿನಿಮಾ ವರದಿಗಾರನಾಗಿದ್ದ ಮಹೇಶ್ ದೇವಶೆಟ್ಟಿಯ ವಸೂಲಿ ವೃತ್ತಾಂತ ಅಸಹ್ಯಕರವಾಗಿದೆ. ಈತ ಗಾಂಧಿನಗರದಾದ್ಯಂತ ಕಾಸಿಗಾಗಿ ಬಾಯಗಲಿಸಿಕೊಂಡು ಓಡಾಡಿದ್ದೇ ಹೆಚ್ಚು. ಬರಬರುತ್ತ ಈತನ ಬರವಣಿಗೆಯ ಪ್ರತಿಭೆಯೆಲ್ಲಾ ನಿರ್ಮಾಪಕರುಗಳ ಕಾಲಬುಡದಲ್ಲಿ ಸಂಪೂರ್ಣವಾಗಿ ಬಸಿದು ಹೋಯ್ತು. ಇದೆಲ್ಲದರ ಫಲವೆಂಬಂತೆ ದೇವಶೆಟ್ಟಿಯೀಗ ಬೆಂಗಳೂರಿನ ಹೊಸಕೆರೆಹಳ್ಳಿ ಏಸುಗುಡ್ಡದ ಎರಡೆರಡು ಸೈಟುಗಳ ಒಡೆಯ!

ಈತ ಅದ್ಯಾವ ರೀತಿಯಲ್ಲಿ ವಸೂಲಿಗಿಳಿದನೆಂದರೆ, ವಿಕದ ಸಿನಿಮಾ ಪುಟಗಳಲ್ಲಿ ವಂಚನೆಯ ವಾಸನೆ ಓದುಗನಿಗೇ ಬಡಿಯುವಷ್ಟರ ಮಟ್ಟಿಗೆ, ಸಿನಿಮಾಗಳ ಸ್ಟಿಲ್ ಫೋಟೋ ಹಾಕುವುದರಿಂದ ಹಿಡಿದು ಪ್ರಚಾರ, ಸಿನಿಮಾ ವಿಮರ್ಶೆಗಳಿಗೆಲ್ಲಾ ಇಂತಿಷ್ಟು ಅಂತ ಫಿಕ್ಸ್ ಮಾಡಿಬಿಟ್ಟಿದ್ದ. ಆತನ ವ್ಯವಹಾರ ಶುರುವಾಗುತ್ತಿದ್ದುದೇ 50 ಸಾವಿರದಿಂದ!

ಇನ್ನು, ವಾರಕ್ಕೊಂದು ಸಾರಿ ಪ್ರಕಟವಾಗುವ ಸಿನಿಮಾ ವಿಮರ್ಶೆಗೆ ಅಂಕ ಕೊಡುವ ವ್ಯಾಧಿ ವಿಕಕ್ಕೆ ಅಂಟಿಕೊಂಡಿದ್ದರ ಹಿಂದೆ ದೇವಶೆಟ್ಟಿಯ ನೆರಳಿದೆ. ಒಂದಂಕ ಇಂತಿಷ್ಟು ಅಂತ ಫಿಕ್ಸ್ ಮಾಡಿದ ಆತ ಅತ್ಯಂತ ದರಿದ್ರ ಚಿತ್ರಗಳಿಗೆ ಮನಸಾರಿ ಮಾರ್ಕ್ಸ್ ಕೊಟ್ಟು ಬರೆದ. ನಿಜಕ್ಕೂ ಒಳ್ಳೆಯ ಚಿತ್ರಗಳನ್ನು ಲೋ ಲೆವೆಲ್‌ಗಿಳಿಸಿ ಹಣಿದ. ಇದಕ್ಕೆ ಪುನೀತ್ ಅಭಿನಯದ 'ಜಾಕಿ' ಚಿತ್ರವೇ ಸಾಕ್ಷಿ. ಈ ಚಿತ್ರದ ಬಗ್ಗೆ ರಾಜ್ಯಾದ್ಯಂತ ಮೆಚ್ಚುಗೆ ವ್ಯಕ್ತವಾದರೂ ದೇವಶೆಟ್ಟಿ ಅದನ್ನ ಹೀಗಳೆದಿದ್ದ. ಇದಕ್ಕೆ ಕಾರಣ ರಾಜ್ ನಿರ್ಮಾಣ ಸಂಸ್ಥೆಯಿಂದ ಹಾಗೂ ರಾಕ್‌ಲೈನ್ ಪ್ರೊಡಕ್ಷನ್ಸ್‌ಗಳಿಂದ ದೇವಶೆಟ್ಟಿಗೆ ಕಾಸು ಹೊಡೆಯಲಾಗುವುದಿಲ್ಲ!

ಇತ್ತೀಚೆಗಂತೂ ದೇವಶೆಟ್ಟಿ ತೀರಾ ಬಹಿರಂಗವಾಗೇ ಡೀಲಿಗಿಳಿದಿದ್ದ. 'ಕಿಚ್ಚ-ಹುಚ್ಚ' ಸಿನಿಮಾ ಪ್ರಚಾರಕ್ಕಾಗಿ ಕೊಬ್ರಿ ಮಂಜುನಿಂದ ಒಂದಷ್ಟು ಗೆಬರಿಕೊಂಡಿದ್ದ. 'ವೀರ ಪರಂಪರೆ' ಚಿತ್ರದ ನಿರ್ದೇಶಕ ಎಸ್. ನಾರಾಯಣ್‌ರಿಂದಲೂ ಹೀಗೆಯೇ ಹಣ ಕೇಳಿದ್ದ. ಆದರೆ ನಾಣಿ ಸೀದಾ ದೂರು ನೀಡಿದ್ದೇ, ದೇವಶೆಟ್ಟಿಯ ಸಿನಿಮಾ ವಸೂಲಿ ದಂಧೆಗೆ ಬ್ರೇಕ್ ಬಿದ್ದು ಡೆಸ್ಕ್‌ಗೆ ಹಿಂಬಡ್ತಿ ಪಡೆದ.

ಇಂಥ ಆಸಾಮಿಯನ್ನು ಟೈಮ್ಸ್ ಆಡಳಿತ ಮಂಡಳಿ ಅದ್ಯಾವ ಉದ್ದೇಶಕ್ಕೆ ಕೆಲಸದಲ್ಲಿಟ್ಟುಕೊಂಡಿದೆಯೋ ತಿಳಿಯುತ್ತಿಲ್ಲ. ಈ ರೀತಿಯ ಒಂದೇ ಒಂದು ಅಸಹ್ಯ ಒಳಗಿದ್ದರೂ ಸಾಕು ವಿಕ ಇನ್ನೊಂದು ರೌಂಡು ಹೊಲಸೇಳುವುದು ಖಚಿತ.

ಹಾವೇರಿ: ಪೊಲೀಸ್ ಇಲಾಖೆಯ ಪಾಪಿ ಪಿಂಡಗಳು



ಹಾವೇರಿಯ ಪೊಲೀಸರು ಖಾಕಿ ಬಟ್ಟೆಯ ಮರ್ಯಾದೆಯನ್ನ ಅಕ್ಷರಶಃ ಹರಾಜಿಗಿಟ್ಟಿದ್ದಾರೆ. ಜಿಲ್ಲಾ ಎಸ್ಪಿ ಡಾ. ಚಂದ್ರಗುಪ್ತಾನ ಕಣ್ಮುಂದೆಯೇ ರಣ ಹಸಿವಿನ ಅಧಿಕಾರಿಗಳು, ಪೇದೆಗಳು ಹಣ ಸುಲಿಯುತ್ತಿದ್ದಾರೆ. ಹಾಯಾಗಿದ್ದ ಹಾವೇರಿಯನ್ನ ಹೆಚ್ಚುವರಿ ಎಸ್ಪಿ ಎಮ್.ಎಮ್. ಅಗಡಿ ಮತ್ತು ಡಿವೈಎಸ್ಪಿ ಎಸ್.ಎಸ್. ಖೋತ್ ಇಬ್ಬರೂ ಹರಿದು ಮುಕ್ಕಿದ್ದಾರೆ.

ಕೊಲೆ, ದರೋಡೆ, ಅತ್ಯಾಚಾರದಂತಹ ಪ್ರಕರಣಗಳು ಇಲ್ಲಿನ ಪೊಲೀಸರಿಗೆ ಮೃಷ್ಟಾನ್ನ ಭೋಜನ ಹಾಕುತ್ತಿವೆ. ಮಟ್ಕಾ, ಇಸ್ಪೀಟ್, ವೇಶ್ಯಾವಾಟಿಕೆಯ ಅಡ್ಡೆಗಳ ಮಾಮಾಗಳೊಂದಿಗೆ ತಿಂಗಳಿಗೆ ಇಷ್ಟು ಅಂತ ಡೀಲ್ ಕುದುರಿಸಿಕೊಂಡು ಖಾಕಿಗಳು ಲಕ್ಷ, ಲಕ್ಷ ಹಣ ಸುಲಿಯುತ್ತಿದ್ದಾರೆ. ರೈತರ ಮೇಲೆ ಗುಂಡು ಹಾರಿಸಿ, ಖೋಟಾ ನೋಟಿನ ಖದೀಮರೊಂದಿಗೆ ನೆಂಟಸ್ತಿಕೆ ಹೊಂದಿ ರೆಡ್‌ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದ ಹಾವೇರಿ ಪೊಲೀಸರು ಇದೀಗ ದರೋಡೆಗೆ ನಿಂತುಬಿಟ್ಟಿದ್ದಾರೆ.



ಈ ಹಿಂದೆ ಇದ್ದ ಎಸ್ಪಿ ವಿಕಾಸಕುಮಾರ ಮಂತ್ರಿ ಉದಾಸಿಯೊಂದಿಗೆ ಜಗಳವಾಡಿ ಇಲ್ಲಿಂದ ಕಾಲ್ಕಿತ್ತ, ಅವನ ಜಾಗೆಗೆ ಒಂದು ವರ್ಷದ ಹಿಂದೆ ಬಂದಿರುವ ಎಸ್ಪಿ ಡಾ. ಚಂದ್ರಗುಪ್ತ ಪಕ್ಕಾ ಡಮ್ಮಿ ಗಿರಾಕಿ. ಹೀಗಾಗಿ ಇಡೀ ಇಲಾಖೆಯನ್ನ ಹೆಚ್ಚುವರಿ ಎಸ್ಪಿ ಮಲ್ಲಣ್ಣ ಅಗಡಿ ನುಣ್ಣಗೆ ಬೋಳಿಸುತ್ತಿದ್ದಾನೆ. ಇವನ ಜೊತೆಗೆ ಶಿಗ್ಗಾಂವಿ ವಿಭಾಗದ ಡಿವೈಎಸ್ಪಿ ಎಸ್.ಎಸ್. ಖೋತ್ ಹಗಲು ರಾತ್ರಿ ಎನ್ನದೇ ಲೂಟಿಗೆ ನಿಂತಿದ್ದಾನೆ.



ಮಲ್ಲಣ್ಣನ ಪವಾಡಗಳು

ಸರ್ವೀಸ್‌ನ ಮುಕ್ಕಾಲು ಭಾಗವನ್ನ ಹಾವೇರಿ ಜಿಲ್ಲೆಯಲ್ಲೇ ಕಳೆದ ಅಗಡಿ ಮಲ್ಲಣ್ಣ ರಾಣೇಬೆನ್ನೂರಿನಲ್ಲಿ ಇನ್ಸ್‌ಪೆಕ್ಟರ್ ಆಗಿ ಅಲ್ಲೇ ಡಿವೈಎಸ್ಪಿಯಾಗಿ ಕೋಟಿ ಕೋಟಿ ದುಡಿದವನು. ಅಕ್ರಮ ಕುಳಗಳಿಗೆ ಆಶ್ರಯದಾತ ಎಂತಲೆ ಹೆಸರಾಗಿರುವ ಮಲ್ಲಣ್ಣ ರಾಣೇಬೆನ್ನೂರಿನ ಹತ್ತಿರದ ಕುಮಾರಪಟ್ಟಣಂನಲ್ಲಿ ಮಟ್ಕಾ ದಂಧೆಯನ್ನ ಜೀವಂತವಾಗಿಟ್ಟ ಕೀರ್ತಿ ಹೊಂದಿದ್ದಾನೆ. ಅಲ್ಲಿಯ ಮಟ್ಕಾ ದೊರೆ ಬೀರಪ್ಪ ಹಾಕಿದ ಎಂಜಲು ಕಾಸಿನಿಂದಲೆ ಈತ ಈಗ ಕೋಟಿಗೆ ತೂಗುತ್ತಿದ್ದಾನೆ. ಇಂಥಾ ಮಲ್ಲಣ್ಣ ಜಿಲ್ಲಾ ಉಸ್ತುವಾರಿ ಮಂತ್ರಿ ಸಿ.ಎಂ. ಉದಾಸಿಯ ಪರಮಾಪ್ತ ಶಿಷ್ಯ. ಹೀಗಾಗಿ ಮಂತ್ರಿ ಸಾಹೇಬರು ಇವನನ್ನು ಪ್ರಮೋಷನ್ ಮೇಲೆ ಹೆಚ್ಚುವರಿ ಎಸ್ಪಿಯನ್ನಾಗಿ ಹಾವೇರಿಯಲ್ಲೇ ಉಳಿಸಿಕೊಂಡು ಲೂಟಿಗೆ ಹಚ್ಚಿದ್ದಾರೆ. ಸರಿ ಸುಮಾರು ತಿಂಗಳಿಗೆ 30 ಲಕ್ಷ ಎಣಿಸುವ ಮಲ್ಲಣ್ಣ ಇಲ್ಲಿಯವರೆಗೆ ಮೇಯಿದ್ದಕ್ಕೆ ಲೆಕ್ಕವೇ ಇಲ್ಲ. ಜಿಲ್ಲೆಯಲ್ಲಿ ನಡೆದ ಯಾವುದೇ ದೊಡ್ಡ ಪ್ರಕರಣಗಳು ಎಸ್ಪಿ ಚಂದ್ರಗುಪ್ತನ ಕಿವಿ ಮುಟ್ಟದೇ ಮಲ್ಲಣ್ಣನಿಗಷ್ಟೇ ತಾಕುತ್ತವೆ. ಇಲ್ಲಿ ಏನಾಗುತ್ತಿದೆ ಎಂಬ ಸಾಮಾನ್ಯ ಅರಿವು ಕೂಡಾ ಎಸ್ಪಿಗೆ ಗೊತ್ತಿಲ್ಲ.

ಛೇಲಾ ಅಧಿಕಾರಿಗಳ ಚಿಲ್ಲರೆ ಕೆಲಸ

ಇಡೀ ಜಿಲ್ಲೆಯಲ್ಲಿ ಒಬ್ಬನೇ ಒಬ್ಬ ಪ್ರಾಮಾಣಿಕ ಪೊಲೀಸ್ ಅಧಿಕಾರಿ ಕಾಣಸಿಗುವುದಿಲ್ಲ. ರಣಹಸಿವಿನ ಲೂಟಿಯಲ್ಲಿ ಪದವಿ ಪಡೆದವರನ್ನೆ ಇಲ್ಲಿ ಪ್ರತಿಷ್ಠಾಪಿಸಲಾಗಿದೆ. ತಿಂಗಳ "ಟಾರ್ಗೆಟ್" ಹಣವನ್ನ ತಂದು ಮುಟ್ಟಿಸಲಾಗದ ಅಧಿಕಾರಿಗಳನ್ನು ತಕ್ಷಣದಲ್ಲೇ ಇಲ್ಲಿಂದ ಓಡಿಸಲಾಗುತ್ತದೆ. ರಿಕವರಿ ಪ್ರಕರಣಗಳ ತನಿಖೆಯಲ್ಲಿ ರೆಕಾರ್ಡ್ ಮಾಡಿರುವ ಹಾವೇರಿ ಶಹರ ಠಾಣೆಯ ಇನ್ಸ್‌ಪೆಕ್ಟರ್ ಮುರುಗೇಂದ್ರಯ್ಯ ಸದ್ಯ ಮೂರೂ ಬಿಟ್ಟು ನಿಂತಿದ್ದಾನೆ. ರಿಕವರಿ ಹಣದಲ್ಲಿ ಅರ್ಧಕ್ಕಿಂತ ಹೆಚ್ಚು ಹಣಕ್ಕೆ ಕತ್ರಿ ಹಾಕುವ ಈ ಆಸಾಮಿ ಅಡಿಷನಲ್ ಎಸ್ಪಿ ಅಗಡಿಯ ರೈಟ್ ಹ್ಯಾಂಡ್. ಇವನ ಕೈಕೆಳಗೆ ಕೆಲಸ ಮಾಡುವ ಪಿ.ಐ.ಗಳಾದ ಗೋವಿಂದಪ್ಪ, ಇಂಗಳೆಗಳು ಹಾವೇರಿ ಜನರಿಗೆ ಅಕ್ಷರಶಃ ಹೇಸಿಗೆ ತರಹ ಕಾಣುತ್ತಿದ್ದಾರೆ. ಮಟ್ಕಾ ಬುಕ್ಕಿಗಳಾದ ದಾದಾಪೀರ ಅಂಗಡಿ, ಶಫೀ ಹುಲಗೂರ, ಪಾಷಾ ಅಂಗಡಿ, ಹಾವೇರಿಯ ನಾಗೇಂದ್ರನಮಟ್ಟಿ, ಸುಭಾಸ ಸರ್ಕಲ್ ಹಂಸಭಾವಿ ಏರಿಯಾದಲ್ಲಿ ಬಿಂದಾಸ್ ಆಗಿ ಮಟ್ಕಾ ಮತ್ತು ಇಸ್ಪೇಟ್ ಅಡ್ಡೆಗಳನ್ನ ಮುರುಗೇಂದ್ರಯ್ಯನ ಕೃಪೆಯಿಂದ ನಡೆಸುತ್ತಿದ್ದಾರೆ. ಇನ್ನು ಗ್ರಾಮೀಣ ಠಾಣೆಯ ಪಂಪಾಪತಿ ಮತ್ತು ಮಹಾಂತೇಶ ಎಂಬ ಹುಳಿಗಳಿಬ್ಬರು ಜೀಪು ಹತ್ತಿದರೆಂದರೆ ಬೇಟೆ ಶುರುವಾಯಿತು ಅಂತಾನೆ ಅರ್ಥ!





ಅಕ್ರಮ ದಂಧೆಯ ತವರೂರು ಎನ್ನುವಂತಾಗಿರುವ ಹಾನಗಲ್ಲನಲ್ಲಿ ತಳ ಊರಿರುವ ಸಿಪಿಐ ಟಿ.ರಾಜಪ್ಪ ಮತ್ತು ಪಿಐ ಚಿದಾನಂದ ಠಾಣೆಯಲ್ಲಿನ ಪ್ರಕರಣಗಳಿಗಿಂತ ಹುಲಿಗಿನಕೊಪ್ಪದಲ್ಲಿ ನಡೆಯುವ ಕಳ್ಳಭಟ್ಟಿ, ಮಟ್ಕಾ ಮತ್ತು ಮೊಬೈಲ್ ಕಳ್ಳರನ್ನ ಕೆಲಸಕ್ಕೆ ಹಚ್ಚುವುದರಲ್ಲೇ ಬ್ಯುಸಿಯಾಗಿರುತ್ತಾರೆ. ಅಬಕಾರಿ ವಿಶೇಷ ತಂಡ ಈ ಗ್ರಾಮದ ಮೇಲೆ ದಾಳಿ ಮಾಡಿ ಕಳ್ಳಭಟ್ಟಿಯನ್ನ ನಾಶಪಡಿಸಿ, ಕೇಸು ದಾಖಲಿಸಿದರೆ ಮಾರನೆಯ ದಿನವೇ ಟಿ.ರಾಜಪ್ಪ ಅದನ್ನು ಮತ್ತೆ ಪ್ರಾರಂಭಿಸಿ ಬಹದ್ದೂರ ಎನಿಸಿಕೊಂಡವನು.

ಮಾಂಸದಡ್ಡೆಗೆ ಮಾವನ ಊರು ಎಂಬಂತಾಗಿರುವ ರಾಣೇಬೆನ್ನೂರಿನಲ್ಲಿ ಇನ್ಸ್‌ಪೆಕ್ಟರ್ ಗಿರೀಶ ಮೂರ್ತಿ ಹಾಯಾಗಿ ಕಾಲ ಕಳೆಯುತ್ತಿದ್ದಾನೆ. ತುಮ್ಮಿನಕಟ್ಟಿ, ಹಲಗೇರಿ ಕ್ರಾಸ್, ಕೋಟೆ ಬಾಗಿಲ, ಮಾಕನೂರುಗಳಲ್ಲಿ ಮಟ್ಕಾ ದೊರೆ ಬೀರಪ್ಪನ ಅಡ್ಡೆಗಳು ರಾಜಾರೋಷವಾಗಿ ತಲೆ ಎತ್ತಿವೆ. ಇದನ್ನೆಲ್ಲಾ ನಿಂತು ನಡೆಸುವ ಬೆನ್ನೂರಿನ ಪೊಲೀಸರಿಗೆ ತಿಂಗಳಿಗೆ ... ಲಕ್ಷ ಮಾಮೂಲಿ ಫಿಕ್ಸ್ ಆಗಿದೆ ... ಊರು ಸುಟ್ಟರೂ ಹನುಮಪ್ಪ ... ಎಂಬಂತೆ ಜಿಲ್ಲೆಯಿಂದ ಸ್ವಲ್ಪ ದೂರ ... ಹಿರೇಕೆರೂರಿನಲ್ಲಿ ಇನ್ಸ್‌ಪೆಕ್ಟರ್ ಪಿಐ ಬಸವರಾಜ ಕಲ್ಲಮ್ಮನವರ ... ಕಟ್ಟಿಗೆ ಸಾಗಾಣಿಕೆ, ಕಳ್ಳಭಟ್ಟಿ ಇವ... ತಿಂಗಳಿಂದ ತಿಂಗಳಿಗೆ ಲಕ್ಷಾಧೀಶ್ವ...ತ್ತಿದ್ದಾರೆ. ಬ್ಯಾಡಗಿಯಲ್ಲಿ ಇನ್ಸ್‌ಪೆಕ್ಟರ್ ... ಗೌಡ ನಕಲಿ ಖಾರದಪುಡಿ ದಂಧೆಯ ಹಣ ಸುಲಿ...ಬಲು ಖಾರ ಎನಿಸಿದ್ದಾನೆ. ಇವರೆಲ್ಲಾ ಅಗಡಿ ಸಾ... ಇನ್‌ಕಮ್ ಹೆಚ್ಚಿಸುವ ನಿಷ್ಠಾವಂತ ಅಧಿಕಾರಿಗಳು.

ಖೋತನ ಭಂಟ ಸೋಮ!

ಡಿವೈಎಸ್ಪಿ ಖೋತನ ಲೂಟಿ ಪುರಾಣಕ್ಕೆ ... ಇತಿಹಾಸವೇ ಇದೆ. ಇತ್ತೀಚೆಗಷ್ಟೆ ಮಹಿಳಾ ಪೇದೆ ... ಐರಣಿ ಎಂಬುವಳಿಗೆ ಜೀವನದಲ್ಲಿ ಜಿಗುಪ್ಸೆ ಹು... ಹಾಗೆ 'ಟಾರ್ಚರ್' ಕೊಟ್ಟಿದ್ದಾನೆ. ಇವನ ಕಾಟ ತಾ... ಪೇದೆ ರೇಣುಕಾ ಆತ್ಮಹತ್ಯೆಗೆ ಯತ್ನಿಸಿ ಕೆ... ಬದುಕುಳಿದಿದ್ದಾಳೆ. ಈ ಪ್ರಕರಣಕ್ಕೆ ಸಂಬಂಧಿ... ಸಾವಿರಾರು ಮಹಿಳಾ ಕಾರ್ಯಕರ್ತರು ಶಿಗ್ಗಾಂವಿ ... ಮುಂದೆ ಇವನ ವಿರುದ್ಧ ಪ್ರತಿಭಟನೆ ಮಾಡಿ


ಖೋತನ ಕಿರಿಕ್ಕಿಗೆ ನೌಕರಿ ಬಿಟ್ಟ ಖಾಕಿಗಳ್



ಬಾಯಿ ತೆರೆದರೆ ಸಾಕು ಬೈಗುಳಗಳ ಡಿಕ್ಷನರಿಯನ್ನೆ ಹೊರಗಿಡುವ ಡಿವೈಎಸ್ಪಿ ಖೋತ ಮಾಮ... ಕೊಡದ ಅಧಿಕಾರಿಗಳನ್ನ ಅದ್ಯಾವ ಪರಿ ಕಾಡುತ್ತಾನೆಂದರೆ ನಾಲ್ಕಾರು ಜನ ನೌಕರಿ ಬಿಟ್ಟು ಓಡಿಹೋಗಿ... ಸವಣೂರ ಠಾಣೆಯ ಸಿಪಿಐ ಆಗಿಬಂದಿದ್ದ ಬುಳ್ಳಕ್ಕನವರ, ನಾಯಕ ಮತ್ತು ಕೆ. ಚಂದ್ರಪ್ಪ ಇವನ ತಾಳಲಾರದೆ ನಾಲ್ಕಾರು ತಿಂಗಳು ರಜಾ ಹೋಗಿ ನಂತರ ಬೇರೆಡೆ ವರ್ಗವಾಗಿ ಹೋಗಿದ್ದಾರೆ. ... ಠಾಣೆಯ ದಕ್ಷ ಅಧಿಕಾರಿ ಮಹದೇವ ಯಲಿಗಾರ ಖೋತನ ಭ್ರಷ್ಟ ವ್ಯವಸ್ಥೆಯ ವಿರುದ್ಧ ತಿರುಗಿ ನಿ... ನೌಕರಿ ಕಳೆದುಕೊಳ್ಳುವಂತಾಗಿದೆ.

ಖೋತನ ಬಹುತೇಕ ಎಲ್ಲ ಕರ್ಮಕಾಂಡಗಳನ್ನ ಒಂದೊಂದಾಗಿ ಹೊರಗೆಡುವಲು ನಿ... ಮಹದೇವ ಯಲಿಗಾರ ಇಲಾಖೆಯ ಬಗ್ಗೆ ಜನರಲ್ಲಿ ಗೌರವ ಹುಟ್ಟಿಸುವಂತೆ ಮಾಡಿದ್ದರು. ... ಅಮಾನತ್ತಿನ ವಿರುದ್ಧ ಸಾವಿರಾರು ಜನ ಆಕ್ರೋಶ ಕೂಡಾ ವ್ಯಕ್ತಪಡಿಸಿದ್ದರು. ಆದರೆ ಡಮ್ಮಿ ಎಸ್ಪಿ ಚಂದ್ರಗುಪ್ತ ಖೋತನನ್ನ ಎದುರು ಹಾಕಿಕೊಳ್ಳಲಾಗದೆ ಹೆದರಿ ಯಲಿಗಾರನನ್ನ ಅಮಾನತ್ತು ಮಾಡಿದ್ದಾರೆ. ಅ... ಯಲಿಗಾರ ಕೆಲವೇ ದಿನ ನೌಕರಿ ಮಾಡಿದ್ದರೂ ಇವರ ಬಣ್ಣ ಪೂರ್ಣ ಬಯಲಾಗುತ್ತಿತ್ತು, ಖೋತನ ... ಕಳಚುವಂತಾಗುತ್ತಿತ್ತು.

ಬಳ್ಳಾರಿ: ರೆಡ್ಡಿ ಭಂಟ ಪ್ರತಾಪ್ ಕಾಂಗ್ರೆಸ್‌ಗೆ!



ಬಳ್ಳಾರಿಯ ರಾಜಕಾರಣದಲ್ಲಿ ಅಂತರ್‌ಪಿಶಾಚಿಯಂತೆ ಅಡ್ಡಾಡುತ್ತಾ ಯಾರ ನೆರಳಲ್ಲೊ ನಿಂತು ಇನ್ಯಾರಿಗೋ ನಿಷ್ಠೆ ಪ್ರದರ್ಶಿಸುತ್ತಾ ಬಂದವನು ಎನ್.ಪ್ರತಾಪ್ ರೆಡ್ಡಿ. ಜೆಡಿಎಸ್‌ನ ಪ್ರಮುಖ ಹುದ್ದೆಗಳನ್ನು ಅಲಂಕರಿಸಿ ಪಕ್ಷ ಸಂಘಟನೆಯ ಬುಡಕ್ಕೆ ಕೊಡಲಿ ಹಾಕಿದ ಈತನನ್ನು ಕೆ.ಸಿ.ಕೊಂಡಯ್ಯನವರೇ ಕರೆತಂದು ಕಾಂಗ್ರೆಸ್‌ನೊಳಕ್ಕೆ ಬಿಟ್ಟುಕೊಂಡಿದ್ದಾರೆ. ತನ್ಮೂಲಕ ಪಾಳು ಬಿದ್ದ ಮನೆಗೆ ಭೂತ ಹೊಕ್ಕಂತಾಗಿದೆ.

ಬಳ್ಳಾರಿ ಸೀಮೆಯಲ್ಲಿ ಕುಖ್ಯಾತ ಕಂಟ್ರಾಕ್ಟರ್ ಆಗಿರುವ ಪ್ರತಾಪ ರೆಡ್ಡಿ ತನ್ನ ದಗಲ್ಬಾಜಿಗಳನ್ನು ದಕ್ಕಿಸಿಕೊಳ್ಳುವುದಕ್ಕಾಗಿಯೇ ರಾಜಕೀಯಕ್ಕಿಳಿದವನು. ಬಹುಹಿಂದೆಯೆ ದೇವೇಗೌಡರ ಗರಡಿ ಸೇರಿಕೊಂಡ ಈತ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಬಳ್ಳಾರಿಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿದ್ದ. ಅಧಿಕಾರದಿಂದಿಳಿದರೂ ಅದೇ ಪವರ್‌ನ್ನು ಬಿಲ್ ಮಾಡಿಸಿ ಕೊಳ್ಳಲು ಬಳಸಿಕೊಂಡ ಕಥೆ ಭೀಕರವಾಗಿದೆ.

ಸದ್ಯ ಪ್ರತಾಪ್ ರೆಡ್ಡಿ ಸಾವಿರಾರು ಕೋಟಿಗೆ ತೂಗುವ ಕಂಟ್ರಾ?ಕ್ಟರ್. ಕಾಮಗಾರಿಯ ಗುಣಮಟ್ಟ ಮುಂತಾದವುಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಲಾಭ ಗುಂಜುವುದು ಈತನ ವೃತ್ತಿಯ ಧ್ಯೇಯ. ಕಳಪೆ ಕಾಮಗಾರಿ ನಡೆಸಿ ಕಳ್ಳ ಬಿಲ್ಲು ಸೃಷ್ಟಿಸುವ ಮೂಲಕವೇ ಕೊಬ್ಬಿಹೋಗಿರುವ ಪ್ರತಾಪ್ ಎಷ್ಟೇ ಶಿಷ್ಟರಲಾಗ ಹಾಕಿದರೂ, ಅದ್ಯಾರಿಗೇ ಬಕೀಟು ಹಿಡಿದರೂ ಆತನ ರಾಜಕೀಯ ಬದುಕು ಮಾತ್ರ ಬೆಳಗಲೇ ಇಲ್ಲ. ಅದಕ್ಕೆ ಕಾರಣ ಆತನ ಸ್ವಪ್ರತಿಷ್ಠೆ, ಧನದಾಹತನವೆಂಬುದರಲ್ಲಿ ಎರಡು ಮಾತಿಲ್ಲ.

ಇಂಥಾ ಪ್ರತಾಪನಿಗೆ ಪ್ರಚಾರದ ಹುಚ್ಚು ವಿಪರೀತವಿದೆ. ಜೊತೆಗೆ ಒಂದೇ ಕಲ್ಲು ಬೀಸಿ ಸಿಕ್ಕಾಪಟ್ಟೆ ಹಕ್ಕಿ ಉದುರಿಸುವ ಕಲೆಯೂ ಕರಗತವಾಗಿದೆ. ಅದಕ್ಕೆ ಈತ ಆಗಾಗ ನಡೆಸುವ ಪ್ರತಿಭಟನೆಗಳೇ ಸಾಕ್ಷಿ. ಸಂಜೀವರಾಯನ ಕೋಟೆ ಮತ್ತು ಹಲಕುಂದಿ ಗ್ರಾಮಗಳ ಹುಡುಗರನ್ನು ಗುಡ್ಡೆಹಾಕುವ ಈತ ಪಿಡಬ್ಲ್ಯುಡಿ ಹಾಗೂ ನೀರಾವರಿ ಇಲಾಖೆಗಳ ಮುಂದೆ ಧರಣಿ ನಡೆಸುತ್ತಾನೆ. ತಾನೇ ಮುಂಚೂಣಿಯಲ್ಲಿ ನಿಂತು ಭಾಷಣ ಬಿಗಿದು ಜನಾನುರಾಗಿಯೆಂಬಂತೆ ಪೋಸು ಕೊಡುತ್ತಾನೆ.

ಆದರೆ ಅದೆಲ್ಲದರ ಹಿಂದೆ ಪ್ರತಾಪ್‌ನ ವೈಯಕ್ತಿಕ ಹಿತಾಸಕ್ತಿಗಳೇ ವಿಜೃಂಭಿಸುತ್ತವೆ. ಗಮನಿಸಬೇಕಾದ ಅಂಶವೆಂದರೆ ಈತ ಕಂಟ್ರಾಕ್ಟು ವಹಿಸಿಕೊಳ್ಳುವುದು ಹೆಚ್ಚಾಗಿ ಪಿಡಬ್ಲ್ಯೂಡಿ ಹಾಗೂ ಜಲಮಂಡಳಿ ವ್ಯಾಪ್ತಿಯಲ್ಲೇ. ಈ ಸಂದರ್ಭಗಳಲ್ಲಿ ಬಿಲ್ಲು ಕದಲುವುದು ಕಷ್ಟಕರ ಮತ್ತು ಟೆಂಡರುಗಳನ್ನು ಎಲ್ಲಾ ಗುತ್ತಿಗೆದಾರರಿಗೂ ಹಂಚುವ ಕಸರತ್ತುಗಳು ನಡೆಯುತ್ತಿರುತ್ತವೆ. ಅವುಗಳನ್ನು ತಾನೇ ದಕ್ಕಿಸಿಕೊಳ್ಳಲೋಸ್ಕರವೇ ಪ್ರತಾಪ್ ರೆಡ್ಡಿ ಆಗಾಗ ಧರಣಿ ನಡೆಸಿ ಹವಾ ಸೃಷ್ಟಿಸುತ್ತಿರುತ್ತಾನೆ.

ಇಂಥಾ ವಂಚಕನಲ್ಲಿ ಅದೇನು ಯೋಗ್ಯತೆ ಕಾಣಿಸಿತೋ ಕುಮಾರಸ್ವಾಮಿಗೆ? ಅಂತೂ ಪ್ರತಾಪನನ್ನು ಬಳ್ಳಾರಿ ಜಿಲ್ಲಾ ಜೆಡಿಎಸ್ ಅಧ್ಯಕ್ಷನನ್ನಾಗಿಸಿದರು. ಇದಾದದ್ದು ಇತ್ತೀಚೆಗೆ. ಈತನ ಅಯೋಗ್ಯತೆಯ ವಿರುದ್ಧ ಅಪಸ್ವರ ಕೇಳಿಬಂದ ಕಾರಣ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲೇಬೇಕಾಯ್ತು. ಆದರೆ ಕುಮಾರಸ್ವಾಮಿ ಆ ಸ್ಥಾನವನ್ನು ಪ್ರತಾಪನ ಅಣ್ಣ ಹಾಗೂ ಕುರುಗೋಡು ಕ್ಷೇತ್ರದ ಮಾಜಿ ಶಾಸಕ ಎಸ್.ಸೂರ್ಯನಾರಾಯಣ ರೆಡ್ಡಿಗೆ ನೀಡಿದರು. ಈತ ಕುಮಾರ ಮುಖ್ಯಮಂತ್ರಿಯಾಗಿದ್ದಾಗ ಅವರಿಗೆ ಪೊಲಿಟ... ಸೆಕ್ರಟರಿ ಆಗಿದ್ದವರು. ಆದರೆ ಪ್ರತಾಪನಿಗೂ ಸೂರ್ಯನಾರಾಯಣನಿಗೂ ಕೌಟುಂಬಿಕ ವಿರಸ... ಅದರಿಂದಾಗಿಯೇ ಅಧ್ಯಕ್ಷಗಾದಿ ಕಳಕೊಂಡು ಮರದಿಂದ ಉದುರಿದ ಓತಿಕ್ಯಾತದಂತಾದ ಪ್ರ... ಜೆಡಿಎಸ್‌ನಿಂದ ದೂರಾಗತೊಡಗಿದ. ಕುಮಾರ... ಮತ್ತೆ ಆತನನ್ನು ಹಿಡಿದು ತಂದು ಜೆಡಿಎಸ್‌ನ ಮಹಾ ಕಾರ್ಯದರ್ಶಿಯನ್ನಾಗಿಸಿ ಮತ್ತೊಂದು ... ಮಾಡಿದರು.

ಇಂಥವನಿಂದ ಜೆಡಿಎಸ್‌ಗೆ ಕನಿಷ್ಠ ಉಪಕಾರವಾದರೂ ಆಗಿದೆಯಾ ಅಂದರೆ ಅಲ...

ಬಾಬು ಕೈಲಿ ಉಗಿಸಿಕೊಂಡ!

ಸಂದರ್ಭ, ಸಮಾರಂಭಗಳೇನೇ ಇದ್ದರೂ ತುಂಬಾ ಸಭ್ಯ ಅಮಾಯಕ ಹಾಗೂ ಶುದ್ಧಹಸ್ತನಂತೆ ಮಾತಾಡು... ಪ್ರತಾಪ ರೆಡ್ಡಿ ರೂಢಿಸಿಕೊಂಡಿರುವ ಕಲೆ.

ಮೊನ್ನೆ ಕಾಂಗ್ರೆಸ್ ಸೇರೋ ಸಮಾರಂಭದಲ್ಲಿ ಕೂಡಾ ಈತ ಇಂತಹುದೇ ಮಾತುಗಳನ್ನಾಡಿದ್ದ. 'ನಾನು ಸ್ಥಾನಮಾನ, ಹುದ್ದೆಗಳನ್ನೂ ಕಸಿದುಕೊಳ್ಳುವುದಿಲ್ಲ, ಪಕ್ಷ ಸಂಘಟನೆಯೇ ನನ್ನ ಉದ್ದೇಶ. ನಾನೊಬ್ಬ ಸಾ... ಕಾರ್ಯಕರ್ತನಾಗಿರುತ್ತೇನೆ' ಅಂತೆಲ್ಲಾ ಪ್ರವರ ಒಪ್ಪಿಸಿದ. ತಮಾಷೆಯೆಂದರೆ ಇಡೀ ಸಭೆಯಿಂದ ಚಪ್ಪಾಳೆಯ ಸ... ಸಣ್ಣದೊಂದು ಪ್ರತಿಕ್ರಿಯೆಯೂ ಬರಲಿಲ್ಲ!

ಆದರೆ ಬಳ್ಳಾರಿ ರಾಜಕೀಯದಲ್ಲೇ ಪಳಗಿ, ಎಲ್ಲಾ ಪಕ್ಷಗಳ ಚಲನವಲನ ಬಲ್ಲ ದಿವಾಕರ್ ಬಾಬುಗೆ ಅದ... ಪಿತ್ಥ ನೆತ್ತಿಗೇರಿ ಹೋಗಿತ್ತು, ಅದಕ್ಕೆ ಈತ ರೆಡ್ಡಿ ಪಟಾಲಂನ ಕ್ಯಾಂಡಿಡೇಟೆಂಬುದೂ ಕಾರಣವಾಗಿರಬಹುದು. ... ಹತ್ತಿಕ್ಕಿಕೊಳ್ಳಲಾರದ ಬಾಬು ಬಹಿರಂಗವಾಗೇ ಅಟಕಾಯಿಸಿಕೊಂಡರು. 'ಯಾರ್ನ ಕೇಳಿ ಕಾಂಗ್ರೆಸ್ ಸೇರಿ... ನೀನು ಸಾಮಾನ್ಯ ಕಾರ್ಯಕರ್ತ ತಾನೇ, ಹಾಗಾದ್ರೆ ಸಭೇಲಿ ಕೂತ್ಕೊ' ಅಂತೆಲ್ಲ ಜಾಡಿಸಿದರು.

ತನ್ನ ಅಸಲೀಯತ್ತೆಲ್ಲಾ ಸಾರ್ವಜನಿಕವಾಗಿ ಬಸಿದು ಹೋದಂತಾದ ಪ್ರತಾಪ್ ಪೆಚ್ಚು ಮೋರೆ ಹಾಕಿ ಹಿಡಿದ!

...ಸಿದ್ದರು. ಅಲ್ಲದೇ ಮಾನವ ಹಕ್ಕು ಆಯೋಗಕ್ಕೂ ...ಬದಿದ್ದಾರೆ. ಆದರೂ ಖೋತನ ಖದರ್ ಇನ್ನೂ ...ಯಿಲ್ಲ. ಇಲಾಖೆಯಿಂದ ಇಂದಿಗೂ ಇವನ ಮೇಲೆ ... ವಿಚಾರಣೆಗಳಿವೆ. ನಿವೃತ್ತಿಗೆ ಹತ್ತಿರ ಬಂದಿರುವ ... ಹೋಗುವುದರೊಳಗೆ ಸಿಕ್ಕಷ್ಟು ಸುಲಿದರಾಯಿತು ... ದಿನ ನಿತ್ಯ ತರಹೇವಾರಿ ದರೋಡೆಗೆ ನಿಂತಿದ್ದಾನೆ. ...ಕ್ಕೆಲ್ಲಾ ಸಾತ್ ನೀಡುವವನು ಇವನ ಡ್ರೈವರ್ ಸೋಮ. ...ಗಲಿಗೆ ಎಸ್.ಎಸ್. ಖೋತ ಎಲ್ಲೆಲ್ಲಿ ನೌಕರಿ ...ದಿದ್ದಾನೋ ಅಲ್ಲೆಲ್ಲಾ ಇವನ ಜೀಪ್ ಹೊಡೆದವನು ... ಸೋಮ. ಬಹುತೇಕ ಎಲ್ಲಾ ಡೀಲ್‌ಗಳನ್ನು ಇವನೇ ...ರಿಸುವುದು. ಒಂದರ್ಥದಲ್ಲಿ ಇನ್‌ಚಾರ್ಜ್ ಡಿವೈಎಸ್ಪಿ, ... ಠಾಣೆಯ ಇನ್ಸಪೆಕ್ಟರ್ ನೀಲಗಾರ ಮತ್ತು ಪಿ.ಐ. ...ನವರ ಖೋತನಗಿಂತ ಸೋಮನನ್ನು ಕಂಡರೆ ಹೆಚ್ಚು ... ಹೆದರುತ್ತಾರೆ. ರಾತ್ರಿ ವೇಳೆ ಖಾಸಗಿ 'ಮಂಡ್ಯದ ...' ಹೆಸರಿನ ಜೀಪನ್ನೇರಿ ಈ ಸೋಮ ಇನ್ಸ್‌ಪೆಕ್ಟರ್ ...ದಲ್ಲಿ ಪೇದೆ ನಾಗರಾಜನೊಂದಿಗೆ ಸೇರಿ ಹೆದ್ದಾರಿ ... ಗ್ರಾಮಾಂತರ ಪ್ರದೇಶದಲ್ಲಿ ಜನರನ್ನ ಹೆದರಿಸಿ ... ಸುಲಿಯುವುದು ಇಲ್ಲಿ ಕಾಮನ್ ಆಗಿದೆ. ಅಕ್ರಮ ... ಗಣಿಗಾರಿಕೆ, ಅಕ್ರಮ ಜಂಬಿಟ್ಟಂಗಿ ಮತ್ತು ಖಾಸಗಿ ...ರೂಟ್ ಬಸ್ಸುಗಳಿಂದ ಬರುವ ಆಮದನಿನೆ 10 ಲಕ್ಷ ... ಆಗುತ್ತೆ. ಖೋತ ಮಂತ್ರಿ ಬೊಮ್ಮಾಯಿಯ ರೈಟ್ ...ಡ್‌ಗಳಾದ ರಾಜು ಪಾಟೀಲ, ಡಿ.ಎಸ್. ಮಾಳಗಿ, ... ಪಾಟೀಲ ಮತ್ತು ಬಿಜೆಪಿ ಜಿಲ್ಲಾಧ್ಯಕ್ಷ ಸೋಮಣ್ಣ ...ವಿನಮರದನಿಗೆ ತಿಂಗಳಿಗೆ ಇಷ್ಟು ಅಂತಾ ಮಾಮೂಲಿ ...ಟ್ಟು ಸೇಫ್ ಆಗಿ ಕುರ್ಚಿ ಉಳಿಸಿಕೊಂಡಿದ್ದಾನೆ. ಇವತ್ತಿಗೂ ...ತನ ಲಿಮಿಟ್ಸ್‌ಗೆ ಬರುವ ಶಿಗ್ಗಾಂವಿ, ಸವಣೂರ, ...ನಗಲ್ಲ, ಬಂಕಾಪೂರ, ತಡಸ ಠಾಣೆಗಳಲ್ಲಿ ತಳ ಊರಿರುವ ...ಧಿಕಾರಿಗಳು ಇವನ ರೆಕ್ಮೆಂಡೇಷನ್‌ನಿಂದಲೇ ಬಂದವ ...ಗಿದ್ದಾರೆ.

ಇಡೀ ಜಿಲ್ಲೆಯನ್ನ ಹರಿದು ಮುಕ್ಕುತ್ತಿರುವ ಮಟ್ಕಾ, ...ಜು, ಹಾದರದ ದಂಧೆಗಳನ್ನ ಹೇಸಿಗೆ ಅನಿಸಿಕೊಳ್ಳದೆ ...ಯಿಂದ ಅಕ್ರಮ ಕುಳಗಳೊಂದಿಗೆ ಮಿಲಾಪಿಯಾಗಿ ...ತೆಸುತ್ತಿರುವ ಖಾಕಿಗಳು ಮತ್ತು ಅವರ ಬೆನ್ನಿಗೆ ಶ್ರೀ ...ಯಾಗಿ ನಿಂತಿರುವ ಮಂತ್ರಿ ಉದಾಸಿ ಮತ್ತು ಬಸು ...ಮ್ಮಾಯಿಗಳಿಗೆ ಜಿಲ್ಲೆಯ ಜನರ ಮೇಲೆ ಅದ್ಯಾವ ...ಮದ ದ್ವೇಷವಿತ್ತೋ ಗೊತ್ತಿಲ್ಲ. ಈಗ ಈ ಖಾಕಿಗಳ ...ಲಕ ಈ ರೀತಿ ತೀರಿಸಿಕೊಳ್ಳುತ್ತಿದ್ದಾರೆ. ರೋಸಿ ...ಗಿರುವ ಜನರ ಸಿಟ್ಟು ರಟ್ಟೆಗೆ ಬರುವ ಮುನ್ನ ...ವರು ನೆಟ್ಟಗಾದರೆ ಒಳಿತಾದೀತು.

• ವಿನಯ್ ಹುರುಳಿಕೊಪ್ಪಿ

...ದ ಈತನ ಕುತಂತ್ರ ಬುದ್ಧಿಗಳೇ ಕಾಣಸಿಗುತ್ತವೆ. ...ತ ತನಗೆ ಐಡೆಂಟಟಿ ನೀಡಿದ ಪಕ್ಷಕ್ಕೂ ...ನಾಗಿರಲಿಲ್ಲ. ಈತ ಕುಮಾರಸ್ವಾಮಿಯ ...ವಿರೋಧಿಗಳಾದ ರೆಡ್ಡಿ ಸಹೋದರರೊಂದಿಗೆ ...ಸ್ಯ ಸಂಬಂಧಗಳನ್ನು ಇರಿಸಿಕೊಂಡಿದ್ದ. ...ಮೂಲಕ ಬಿಜೆಪಿಗೆ ಸಹಾಯ ಮಾಡುತ್ತಲೂ ಇದ್ದ. ...ಕ್ಕೆ ಕಳೆದ ಬಾರಿಯ ವಿಧಾನಸಭಾ ...ನಾವಣೆಯೇ ಸಾಕ್ಷಿ. ಆಗ ಕಣದಲ್ಲಿದ್ದ ...ಮಶೇಖರ ರೆಡ್ಡಿ ಪ್ರತಾಪನ ಮನೆಗೆ ಬಂದು ...ಫಿ-ತಿಂಡಿ ಪಾರ್ಟಿ ಅಂತೆಲ್ಲಾ ಮುಗಿಸಿಕೊಂಡು ...ಗಿದ್ದ! ಇಂಥವನು ಆಗಾಗ ರೆಡ್ಡಿ ...ಹೋದರರೊಂದಿಗೆ ರಹಸ್ಯ ಭೇಟಿಯಲ್ಲೂ ...ಡುತ್ತಾನೆಂಬ ಆರೋಪಗಳಿವೆ.

ಇಂಥಾ ಪ್ರತಾಪ್ ರೆಡ್ಡಿಯನ್ನು ಜೆಡಿಎಸ್‌ನವರೇ ...ಗೆ ದೂರ ಇಡಲಾರಂಭಿಸಿದರು. ರಾಜ್ಯ ...ಡಿಎಸ್ ಮಹಾಕಾರ್ಯದರ್ಶಿ ಅಂತೆಲ್ಲಾ ಲೇಬಲ್ಲು ...ಟ್ಟಿಕೊಂಡರೂ ಕನಿಷ್ಠ ಮರ್ಯಾದೆಗಳೂ ...ಸಿಕ್ಕಿರಲಿಲ್ಲ. ಇದರಿಂದ ಬೇಗುದಿಗೆ ಬಿದ್ದ ಪ್ರತಾಪ್ ...ಕೊಂಡಯ್ಯನ ಮೂಲಕ ಕಾಂಗ್ರೆಸ್ ತಲುಪಿದ್ದಾನೆ.

ಆದರಿದು ಜನಾರ್ದನ ರೆಡ್ಡಿಯ ಸ್ಕೀಮು ... ಅನೇಕರು ಮಾತಾಡಿಕೊಳ್ಳುತ್ತಿದ್ದಾರೆ. ...ಕೆಂದರೆ ರೆಡ್ಡಿಯ ಗಣಿಗಳ್ಳತನದ ವಿರುದ್ಧ ...ಯ ಸಮರ ಸಾರಿರುವ ಕೊಂಡಯ್ಯನವರ ... ತನ್ನದೇ ಇನ್‌ಫಾರ್ಮೇಟರುಗಳನ್ನು ರೆಡ್ಡಿ ...ದ್ದಾನೆ. ಪ್ರತಾಪನನ್ನೂ ಕೂಡಾ ಅದೇ ...ದಿಂದ ಕೊಂಡಯ್ಯನಿಗೆ ತಗುಲಿಸಿದ್ದಾನೆ- ಇವು ... ಬಾಯಲ್ಲಿ ಹರಿದಾಡುತ್ತಿರುವ ವಿಚಾರಗಳು.

...ಪ ರೆಡ್ಡಿ ಹಾಗೂ ಜನಾರ್ದನ ರೆಡ್ಡಿ ... ಗುಪ್-ಗುಪ್ ಸಂಬಂಧದ ...ರುವ ಯಾರೂ ಈ ವಿಚಾರ ತಳ್ಳಿಹಾಕಲು ...ಸಿಲ್ಲ. ಕೆ.ಸಿ.ಕೊಂಡಯ್ಯ ಹಾಗೂ ಕಾಂಗ್ರೆಸ್ ... ಪ್ರತಾಪನೆಡೆಗೊಂದು ಕಣ್ಣಿಡದೇ ಹೋದರೆ ... ಗೋತಾ ಹೊಡೆಯುವುದರಲ್ಲಿ ...ಸಗಳಿಲ್ಲ.

ಸೋರುತಿಹುದು (ಅರ)ಮನೆಯ ಮಾಳಿಗೆ!

▶▶ 2


ವಿಕಿಲೀಕ್ಸ್ ಸಂಸ್ಥೆಯ ಹಣಕಾಸು ವಹಿವಾಟಿಗೆ ಈವರೆಗೆ ಸಹಕಾರಿಯಾಗಿದ್ದ ವೀಸಾ ಕಾರ್ಡ್, ಪೇಪಾಲ್ ಇನ್ನಿತರ ಸಂಸ್ಥೆಗಳು ವಿಕಿಲೀಕ್ಸ್‌ಗೆ ಕೊಡುತ್ತಿದ್ದ ಸೇವೆಯನ್ನು ಹಿಂತೆಗೆದುಕೊಂಡಿವೆಯಲ್ಲದೆ ಅದರ ಖಾತೆಯನ್ನು ಸ್ಥಗಿತಗೊಳಿಸಿವೆ. ಇದರ ವಿರುದ್ಧ ಜಗತ್ತಿನಾದ್ಯಂತ ಹ್ಯಾಕ್ಟಿವಿಸ್ಟ್‌ಗಳು (ಇಂಟರ್‌ನೆಟ್ ಮೂಲಕ ಅಧಿಕೃತ ಮಾಹಿತಿಗಳಿರುವ ಖಾತೆಯನ್ನು ಹೆಕ್ಕಿ ತೆಗೆಯುವ ಹವ್ಯಾಸಿ ಕಾರ್ಯಕರ್ತರು) ಆ ಹಣಕಾಸು ಸಂಸ್ಥೆಗಳು ಕಾರ್ಯನಿರ್ವಹಿಸುವುದನ್ನೇ ದುಸ್ತರಗೊಳಿಸುವ ಮೂಲಕ ಪ್ರತಿಭಟಿಸುತ್ತಿದ್ದಾರೆ.

ಕಳೆದ ಡಿಸೆಂಬರ್ 10ರಂದು ಅಸ್ಸಾಂಗೆ ಜಾಮೀನು ಕೊಡಲು ಜಗತ್ತಿನ ಖ್ಯಾತ ಪತ್ರಕರ್ತ ಜಾನ್ ಪಿಲ್ಗರ್‌ರವರನ್ನೂ ಒಳಗೊಂಡಂತೆ ಹಲವಾರು ಖ್ಯಾತನಾಮರು ಮುಂದೆ ಬಂದರು. ಜಾನ್ ಪಿಲ್ಗರ್‌ರವರ ಪ್ರಕಾರ "ಅಧಿಕಾರಸ್ಥರು ಹೇಳಿದ್ದೇ ಸತ್ಯ ಎಂಬ ಭಾವನೆಯನ್ನು ಸರ್ಕಾರಗಳು ಜನರಲ್ಲಿ ಬೆಳೆಸುತ್ತವೆ. ದುರದೃಷ್ಟವೆಂದರೆ ಮಾಧ್ಯಮಗಳೂ ಸಹ ಈ ಮಿಥ್ಯೆಯನ್ನು ಹೆಚ್ಚು ಪ್ರಚುರ ಪಡಿಸಲು ಜೊತೆಗೂಡುತ್ತವೆ." ಆದರೆ ಅಸ್ಸಾಂಗೆ ನೇತೃತ್ವದ ವಿಕಿಲೀಕ್ಸ್ ಅವೆಲ್ಲವೂ ಸುಳ್ಳೆಂದು ಬಯಲು ಮಾಡಿದೆ. ಆದರೆ ಸರ್ಕಾರದ ಬಗ್ಗೆ ಜನರಲ್ಲಿ ಸಂದೇಹ ಉಂಟುಮಾಡುವ ಯಾವುದೇ ಪ್ರಯತ್ನ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುತ್ತದೆ.

ಆದ್ದರಿಂದಲೇ ವಿಕಿಲೀಕ್ಸ್ ಮಾಡುತ್ತಿರುವ ಈ ರಹಸ್ಯ ಬಯಲು ಕಾರ್ಯಾಚರಣೆಯ ಬಗ್ಗೆ ಯಾರ ನಿಲುವು ಹೇಗಿರುತ್ತದೆ ಎಂಬುದು ಅವರು ಪ್ರಭುತ್ವದ ಬಗ್ಗೆ ಮತ್ತು ಸಂಪನ್ನರ ಬಗ್ಗೆ ಯಾವ ದೃಷ್ಟಿಕೋನವನ್ನು ಹೊಂದಿರುತ್ತದೆ ಎಂಬುದನ್ನೇ ಆಧರಿಸಿರುತ್ತದೆ ಎಂದು ಡಿಗ್ಬಿ ಜಾನ್ಸನ್ ಎಂಬ ಮತ್ತೊಬ್ಬ ಅಮೆರಿಕದ ಅಂಕಣಕಾರ ಹೇಳುತ್ತಾನೆ.

ಹೀಗಾಗಿ ವಿಕಿಲೀಕ್ಸ್ ಇರಬಹುದು ಅಥವಾ ಭಾರತದಲ್ಲಿ ರಾಡಿಯಾ ಟೇಪ್ಸ್ ಇರಬಹುದು ಇವು ಸಾರಾಂಶದಲ್ಲಿ ಪ್ರಜಾಪ್ರಭುತ್ವದ ಆಡಿಪಾಯವನ್ನು ಗಟ್ಟಿಗೊಳಿಸುತ್ತಿದೆ. ತಾನು ಆಯ್ಕೆ ಮಾಡಿದ ಸರ್ಕಾರ ತನಗೆ ಸಂಪೂರ್ಣ ಮಾಹಿತಿ ನೀಡಬೇಕು ಮತ್ತು ತನ್ನ ನೀತಿಗಳಿಗೆ ತನ್ನ ಸಮ್ಮತಿ ಪಡೆಯಬೇಕು. ಇದಾಗದೆ ಒಂದು ಪ್ರಜಾಪ್ರಭುತ್ವ ಕೇವಲ ನಾಮಮಾತ್ರದ್ದಾಗುತ್ತದೆ. ಇದರರ್ಥ ವಿಕಿಲೀಕ್ಸ್ ಹುಟ್ಟಿನಲ್ಲಿ ಅಮೆರಿಕನ ಹಿತಾಸಕ್ತಿ ಇರಲಿಲ್ಲವೆಂತಲ್ಲ, ಅದೇರೀತಿ ಅದರ ಮುಖ್ಯಸ್ಥ ಅಸ್ಸಾಂಗೇ ಸಂಪೂರ್ಣವಾಗಿ ಯಾರ ಕೈಗೊಂಬೆಯೂ ಆಗದೆ ಜನರ ಪರವಾಗಿಯೇ ಹೋರಾಡುತ್ತಿರುವ ಹುತಾತ್ಮನೆಂದೂ ಈಗಲೇ ತೀರ್ಮಾನಕ್ಕೆ ಬರುವ ಅಗತ್ಯವಿಲ್ಲ. ಈವರೆಗೆ ಅದು ಬಯಲು ಮಾಡಿರುವ ದಾಖಲೆಗಳು ಮಧ್ಯಪ್ರಾಚ್ಯದಲ್ಲಿ ಅಮೆರಿಕನ್ ಮಧ್ಯಪ್ರವೇಶವನ್ನು ಹಾಗೂ ಇರಾನ್‌ನಂತಹ ರಾಷ್ಟ್ರಗಳ ಬಗ್ಗೆ ಅಮೆರಿಕದ ನಿಲುವನ್ನು ಮೂಲಭೂತವಾಗಿ ಬಯಲುಪಡಿಸುವಂಥ ದಾಖಲೆಗಳನ್ನು ತಮ್ಮ ವೆಬ್‌ಸೈಟಿನಲ್ಲಿ ಪ್ರದರ್ಶಿಸಿಲ್ಲ. ಬದಲಿಗೆ ಕೆಲವೊಮ್ಮೆ ಅಮೆರಿಕ ಇರಾನ್ ಬಗ್ಗೆ ಮತ್ತು ಪ್ಯಾಲೆಸ್ತೀನ್ ಬಗ್ಗೆ ಹೇಳಿಕೊಂಡು ಬಂದ ಸುಳ್ಳುಗಳನ್ನೇ ಇವೂ ಕೆಲವು ಕಡೆ ಪುನರುಚ್ಚರಿಸುತ್ತವೆ. ಹೀಗಾಗಿಯೇ ಕೆಲವರು ಇದನ್ನು ವಿಕಿಲೀಕ್ಸ್ ಅಲ್ಲ ಝಿಯಿನೋಸ್ಟ್ ಲೀಕ್ ಎಂದರೆ ಇಸ್ರೇಲಿನ ಜ್ಯೂಗಳ ಪರವಾದ ಲೀಕ್ ಎಂದು ಹೀಗಳೆದಿದ್ದಾರೆ. ಖ್ಯಾತ ಅಮೆರಿಕನ್ ವಿದ್ವಾಂಸ ನೋಮ್ ಚಾಮ್‌ಸ್ಕಿಯಂತೂ ವಿಕಿಲೀಕ್ಸ್‌ನ ಪ್ರಯತ್ನವನ್ನು ಶ್ಲಾಘಿಸುತ್ತಲೇ ಅರಬ್ಬರು ಮೂಲಭೂತವಾಗಿ ಅಮೆರಿಕ ಮತ್ತು ಇಸ್ರೇಲನ್ನು ಗಂಡಾಂತರಕಾರಿ ಎಂದು ಭಾವಿಸುತ್ತಾರೆಯೇ ವಿನಃ ಇರಾನಲ್ಲ ಎಂಬುದು ಇತ್ತೀಚೆಗೆ ಅಧ್ಯಯನದಿಂದ ದೃಢಪಟ್ಟಿದ್ದರೂ ವಿಕಿಲೀಕ್ಸ್ ಈವರೆಗೆ ಬಯಲುಗೊಳಿಸಿರುವ ಮಾಹಿತಿಗಳು ಅಮೆರಿಕನ್ ಪ್ರಚಾರ ಸಾಮಗ್ರಿಯೇ ಆಗಿರುವುದರ ಬಗ್ಗೆ ಅನುಮಾನ ಮತ್ತು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಹೀಗಾಗಿ ವಿಕಿಲೀಕ್ಸ್ ಬಗ್ಗೆಯಾಗಲೀ, ಅಸ್ಸಾಂಗೆ ಎಂಬ ವ್ಯಕ್ತಿಯ ಬಗ್ಗೆಯಾಗಲೀ ನಮ್ಮ ಚರ್ಚೆಯನ್ನು, ಭರವಸೆಯನ್ನು




ಕೇಂದ್ರೀಕರಿಸದೆ ಅದು ಎತ್ತಿರುವ ಮಾಹಿತಿ ಹಕ್ಕಿನ ಪ್ರಶ್ನೆಯ ಬಗ್ಗೆ ಮತ್ತು ಅದು ಬಯಲುಮಾಡಿರುವ ಸತ್ಯಗಳ ಬಗ್ಗೆ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು ಅದು ಇನ್ನಷ್ಟು ಜನರಿಗೆ ಬದ್ಧವಾಗುವಂತೆ ಮಾಡಬೇಕಾದದ್ದು ಇಂದಿನ ಎಲ್ಲಾ ಬಗೆಯ ಪ್ರಜಾತಂತ್ರವಾದಿಗಳ ಕರ್ತವ್ಯ. ಅದು ಭಾರತಕ್ಕೂ ಒಳ್ಳೆಯದು, ಜಗತ್ತಿಗೂ ಒಳ್ಳೆಯದು. ●

ಚಾಮರಾಜನಗರ: ಆರ್‌ಟಿಓ ಇಲಾಖೆಯ ವಸೂಲಿ ರಾಣಿ ಗಾಯತ್ರಿ ದೇವಿ!

ರಾಜ್ಯದಲ್ಲಿ ಅತಿ ಹಿಂದುಳಿದ ಹಾಗೂ ಶಾಪಗ್ರಸ್ತ ಜಿಲ್ಲೆಯೆಂಬ ಹಣೆಪಟ್ಟಿ ಹೊಂದಿರುವ ಚಾಮರಾಜನಗರ ಭ್ರಷ್ಟಾಚಾರದ ಗೋಡೌನಿನಂತಾಗಿದೆ. ಇಲ್ಲಿನ ಬಹುತೇಕ ಸರ್ಕಾರಿ ಇಲಾಖೆಗಳು ದಂಧೆಯ ಅಂಗಡಿಗಳಾಗಿದ್ದರೆ, ಅಧಿಕಾರಿ ವರ್ಗ ಜನರ ರಕ್ತ ಹೀರಲು ತಡತಹಿಸುತ್ತಿದೆ. ಈ ರೀತಿಯಂದ್ದೊಂದು ದರಿದ್ರ ಸ್ಥಿತಿಯ ಮುಂಚೂಣಿಯಲ್ಲಿರುವುದು ಜಿಲ್ಲೆಯ ಆರ್‌ಟಿಓ ಇಲಾಖೆ.

ಆರ್‌ಟಿಓ ಇಲಾಖೆ ಸಂಪೂರ್ಣವಾಗಿ ಸುಲಿಗೆಕೋರರ ತಾಣವಾಗಲು ಅದರ ಮುಖ್ಯಾಧಿಕಾರಿ ಗಾಯತ್ರಿ ದೇವಿಯೆಂಬ ವಸೂಲಿ ರಾಣಿಯೇ ಪ್ರಮುಖ ಕಾರಣ. ಯಾವ್ಯಾವ ವಿಭಾಗದಿಂದ ಎಷ್ಟೆಷ್ಟು ಗೆಬರಬಹುದೆಂಬ ಸ್ಕೆಚ್ಚನೊಂದಿಗೇ ಜಿಲ್ಲಾ ಆರ್‌ಟಿಓಗೆ ವಕ್ಕರಿಸಿಕೊಂಡ ಗಾಯತ್ರಿ ಈ ಕ್ಷಣದವರೆಗೂ ಬಿಡುವಿಲ್ಲದೆ ನುಂಗುತ್ತಿದ್ದಾಳೆ. ತುಮಕೂರು ಮೂಲದ ಈಕೆ ಮೈಸೂರು, ಮಂಡ್ಯ ಅಂತೆಲ್ಲಾ ಆಡ್ಡಾಡಿ ಬಂದು ಜಿಲ್ಲೆಗೆ ಅಟಕಾಯಿಸಿಕೊಂಡಿದ್ದು ಈಗ್ಗೆ 5 ತಿಂಗಳ ಹಿಂದೆ.



ಈಕೆ ಯಾವ ಪರಿ ವಸೂಲಿಗಿಳಿದಿದ್ದಾಳೆಂದರೆ, ಸೀನಿಯರ್ ಬ್ರೇಕ್ ಇನ್ಸ್‌ಪೆಕ್ಟರ್‌ಗಳಾದ ಪರಶುರಾಮೇಗೌಡ ಹಾಗೂ ಸಾದಿಕ್ ಪರೀಫ್ ಎಂಬವರನ್ನು ಮುಂದೆಬಿಟ್ಟು ಸಾರ್ವಜನಿಕರನ್ನು ಸುಲಿಯ ಹತ್ತಿದ್ದಾಳೆ. ಇವರ ಮೂಲಕವೇ ಕಳ್ಳ ಕಾಸು ಪಡೆದುಕೊಳ್ಳುವ ಗಾಯತ್ರಿ ಚಾಮರಾಜನಗರದಲ್ಲೇ ಸರ್ಕಾರ ವಸತಿ ಕಲ್ಪಿಸಿದ್ದರೂ ಮಂಡ್ಯದ ಸ್ವಂತ ಮನೆಯಲ್ಲಿ ಠಿಕಾಣಿ ಹೂಡಿರುತ್ತಾಳೆ. ತಿಂಗಳಿಗೊಂದು ಬಾರಿಯಷ್ಟೇ ಮೈತುಂಬಾ ಭಂಡಾರ ಹೇರಿಕೊಂಡು ಕಚೇರಿಯತ್ತ ಬಂದು ದಂಧೆ ಮೆಂಟೇನು ಮಾಡುತ್ತಾಳೆ. ಆದರೆ ಹಾಜರಿ ಪುಸ್ತಕದಲ್ಲಿ ಮಾತ್ರ ಇರುವ ಕುರುಹುಗಳು ಕಾಣ ಸಿಗೋದಿಲ್ಲ.

ಈಕೆ ಜಿಲ್ಲಾ ಕೇಂದ್ರದಲ್ಲೇ ಇದ್ದುಕೊಂಡು ಕೆಲಸ ಮಾಡಬೇಕೆಂದು ನಿಯಮವಿದೆ. ಅದಕ್ಕೆ ತಕ್ಕುದಾದ ಸಕಲ ಸೌಕರ್ಯಗಳನ್ನು ಸರ್ಕಾರ ಕಲ್ಪಿಸಿದೆ. ಆದರೀಕೆ ಅದಕ್ಕೆಲ್ಲ ಸೊಪ್ಪು ಹಾಕುತ್ತಿಲ್ಲ. ಆದರೆ ಇಲಾಖೆಯ ಏಜೆಂಟ್‌ಗಳಿಂದ ಮೊದಲ್ಗೊಂಡು ಟ್ರಾನ್ಸ್‌ಪೋರ್ಟ್ ಕಮಿಷನರ್‌ವರೆಗೆ ಎಲ್ಲರನ್ನೂ ಕಮಾಯಿಗೆ ಹಚ್ಚಿದ್ದಾಳೆ. ಇದರಲ್ಲಿ ಪ್ರತೀ ತಿಂಗಳು ಹತ್ತಾರು ಲಕ್ಷಗಳನ್ನು ತಿಜೋರಿ ತುಂಬಿಸಿಕೊಳ್ಳುತ್ತಾಳೆ!



ಬೇರೆಲ್ಲೋ ಬ್ಯುಸಿಯಾಗಿರುವ ಗಾಯತ್ರಿಗೆ ದಿನಂಪ್ರತಿ ಕಮಾಯಿ ಹಣ ತಲುಪಿಸುವವರದ್ದೊಂದು ದಂಡು ಇಲಾಖೆಯಲ್ಲಿದೆ. ಅವರಲ್ಲಿ ಸೂಪರಿಂಟೆಂಡೆಂಟ್ ರಾಮೇಗೌಡ ಹಾಗೂ ಹಣ್ಣುಗಪ್ಪ ಎಂಬ ಖದೀಮರು ಮೊದಲಿಗರು. ಈ ರೀತಿ ಬಕೀಟುಗಿರಿ ನಡೆಸುತ್ತಲೇ ಇದ್ದ ಈ ಕುಳ್ಳ ಜೋಡಿ ಥರಹೇವಾರಿ ಲೈಸೆನ್ಸ್‌ಗಳನ್ನು




ಕೆಡವಿಕೊಂಡಿದೆ. ಈ ಜೋಡಿ ಪ್ರತೀ ದಿನ ಲೈಸೆನ್ಸ್‌ದಾರರಿಂದ ಸಾವಿರಾರು ರೂಪಾಯಿ ಕಿತ್ತುಕೊಳ್ಳುತ್ತದೆ.

ಗಾಯತ್ರಿ ದೇವಿಯ ದೆಸೆಯಿಂದಾಗಿ ಇಡೀ ಇಲಾಖೆಯೇ ಭ್ರಷ್ಟರು, ಕುತಂತ್ರಿಗಳ ಅಖಾಡವಾಗಿದೆ. ವೈ.ಆರ್. ನಾಗರಾಜ್ ಎಂಬ ಗುಮಾಸ್ತನ ದಾದಾಗಿರಿಯೇ ಅದಕ್ಕೆ ಸ್ಪಷ್ಟ ಸಾಕ್ಷಿ. ಈತ ವರ್ಗಾವಣೆ ಆದೇಶವನ್ನು ರದ್ದುಪಡಿಸಿಕೊಂಡು ಮತ್ತೆ ಮತ್ತೆ ವಕ್ಕರಿಸುವಷ್ಟರಮಟ್ಟಿಗೆ ಪ್ರಭಾವಿಯಾಗಿದ್ದಾನೆ. ಹಣ ಕೊಟ್ಟರೆ ಆಟೋ ಬಸ್ಸು, ಲಾರಿಗಳಿಗೆ ಲೈಸೆನ್ಸ್ ಕೊಟ್ಟು ಬಿಡುವ ಈತ ನಿಯಮ ಪ್ರಕಾರ ಬರುವವರನ್ನು ಬಿಡದೇ ಸತಾಯಿಸುತ್ತಾನೆ.

ಆರ್‌ಟಿಓ ಇಲಾಖೆಯೆಂಬುದು ಪಕ್ಕಾ ಆಮದನಿಯಿರುವಂತಹುದು. ಡಿಎಲ್, ಆಕ್ಸಿಡೆಂಟ್ ಕೇಸ್ ಅಂತೆಲ್ಲಾ ದಿನಕ್ಕೆ ಬೇಕಾದಷ್ಟು ಪ್ರಕರಣಗಳು ಬರುತ್ತಲೇ ಇರುತ್ತವೆ. ಗಾಯತ್ರಿ ದೇವಿ ತನ್ನ ಭಟ್ಟರ ಮೂಲಕ ಇದೆಲ್ಲವನ್ನೂ ಕಾಸಾಗಿ ಪರಿವರ್ತಿಸಿಕೊಳ್ಳುತ್ತಿದ್ದಾಳೆ.

ಇದು ಹೇಳಿಕೇಳಿ ಗಡಿಪ್ರವೇಶವಾದುದರಿಂದ ಎಗ್ಗಿಲ್ಲದೆ ಬೇರೆ ರಾಜ್ಯಗಳ ವಾಹನಗಳು ಸಂಚರಿಸುತ್ತವೆ. ಅವೆಲ್ಲವೂ ಆರ್‌ಟಿಓ ಅಧಿಕಾರಿಗಳ ಪಾಲಿಗೆ ಹಣ ಉದುರಿಸುವ ಮಾಯಾ ಯಂತ್ರಗಳಂತಾಗಿ ಹೋಗಿವೆ. ಇನ್ನು ಅಪಾಯದ ಸಂಗತಿಯೆಂದರೆ ಪರ ರಾಜ್ಯಗಳಿಂದ ಕದ್ದು ತಂದ ವಾಹನಗಳಿಗೂ ದುಷ್ಟ ಅಧಿಕಾರಿಗಳು ರಿಜಿಸ್ಟ್ರೇಷನ್ ಮಾಡಿಕೊಡುತ್ತಿದ್ದಾರೆ.

ಇಷ್ಟೆಲ್ಲಾ ದಂಧೆಗಳ ಕಿಂಗ್‌ಪಿನ್ ಗಾಯತ್ರಿದೇವಿ. ಈಕೆಯ ನುಂಗಾಟಗಳಿಗೊಂದು ಬ್ರೇಕ್ ಹಾಕದಿದ್ದರೆ ಆರ್‌ಟಿಓ ಇಲಾಖೆಯೇ ಆಕ್ಸಿಡೆಂಟ್ ಮಾಡಿಕೊಳ್ಳುವುದು ಖಚಿತ. ■



ಗಂಗೊಳ್ಳಿ ಒಂದು ಪ್ಯಾರ್ ಕಹಾನಿಗೆ ಬೆಂಕಿ ಇಟ್ಟ ಚೆಡ್ಡಿಗಳು

ಆತನ ಹೆಸರು ಶಂಶೇರ್. ಶವಾಗಾರದಂತೆ ಗಬ್ಬು ನಾರುವ ಕುಂದಾಪುರದ ಸರಕಾರಿ ಆಸ್ಪತ್ರೆಯಲ್ಲಿ ತನ್ನ ಹೆಂಡತಿ ಗಾಯಗೊಂಡು ಮಲಗಿದ್ದ ಹಾಸಿಗೆಯ ಪಕ್ಕದಲ್ಲಿ ಆತ ಕೂತಿದ್ದ. ಆತನ ಮೊಬೈಲ್ ಫೋನ್ ರಿಂಗಣಿಸಿದಾಗ 'ಸಾತ್ ಸಮಂದರ್ ಪಾರ್ ಮೈ ತೇರೆ ಪೀಚೆ ಪೀಚೆ ಆ ಗಯಾ' ಎನ್ನುವ ಹಿಂದಿ ಹಾಡೊಂದು ಕೇಳಿಸುತ್ತದೆ. ಆತ 'ಸಾತ್ ಸಮಂದರ್' ಪಾರ್ ಹೋಗದೇ ಇದ್ದರೂ ತಾನು ಪ್ರೀತಿಸಿದ ಹುಡುಗಿಗಾಗಿ ಸಮುದ್ರದ ಪಕ್ಕದಲ್ಲೇ ಇರುವ ಗಂಗೊಳ್ಳಿ ಎಂಬ ಊರಿಗೆ ಬಿಹಾರವೆಂಬ

ಹಿಂದೂತ್ವವಾದಿ ಸಂಘ ಪರಿವಾರದವರು ಮನೆಮುರುಕರು ಎಂಬುದು ಕರಾವಳಿಯ ಜನರಿಗೆ ಚೆನ್ನಾಗಿಯೇ ಗೊತ್ತು. ನೀವು ಮುಂದೆ ಓದಲಿರುವ ಈ ಪ್ರಕರಣದಲ್ಲಿ ತಮ್ಮ ನೀಚ ಬುದ್ಧಿಯನ್ನು ಪ್ರದರ್ಶಿಸಿ ಈ ಚೆಡ್ಡಿಗಳು ತಾವು ನಿಜಕ್ಕೂ ಮನೆಹಾಳರು ಎಂದು ಮತ್ತೊಮ್ಮೆ ಸಾಬೀತುಮಾಡಿದ್ದಾರೆ.

ಬೆಂಗಾಡಿನಿಂದ ಬಂದು ಈ ಊರನ್ನು ತನ್ನದಾಗಿಸಿಕೊಂಡಿದ್ದಾನೆ.

ಆಕೆ ಸೂಫಿಯಾ. ಮೊದಲ ಹೆಸರು ಪದ್ಮ. ಕರಾವಳಿಯ ಗಂಡೆದೆಯ ಮೀನುಗಾರರಾದ ಖಾರ್ವಿ ಜನಾಂಗಕ್ಕೆ ಸೇರಿದ ಹುಡುಗಿ. ಧರ್ಮ, ಜಾತಿ ಎಂಬುದೆಲ್ಲ ಪ್ರೀತಿಗಿಂತ ಮಿಗಿಲಲ್ಲ ಎಂಬುದನ್ನು ಬಲ್ಲವಳು. ತಾನು ಪ್ರೀತಿಸಿದ ಹುಡುಗನ ಜಾತಿ ಬೇರೆಯಾದರೂ ಲೆಕ್ಕಿಸದೆ ಮದುವೆಯಾಗಿದ್ದಾಳೆ. ಯಾರೇನೇ ಅನ್ನಲಿ ನನ್ನ ಬದುಕು ನನ್ನದು ಎಂದು ತಾನು ಹುಟ್ಟಿ ಬೆಳೆದ ಊರಿನಲ್ಲಿಯೇ ಗಟ್ಟಿ ಧೈರ್ಯ ಮಾಡಿ ಬಾಳ್ವೆ ನಡೆಸುತ್ತಿದ್ದಾಳೆ. ಮುದ್ದಾದ ಎರಡು ಮಕ್ಕಳು ಇವರ ಪ್ರೇಮ್ ಕಹಾನಿಗೆ ಸಾಕ್ಷಿಯಂತಿದೆ. ಬಡವರಾದರೂ ನೆಮ್ಮದಿಯ ಜೀವನ ನಡೆಸುತ್ತಿರುವವರು ಶಂಶೇರ್-ಸೂಫಿಯಾ.

ಹಿಂದೂತ್ವವಾದಿ ಸಂಘ ಪರಿವಾರದವರು ಮನೆಮುರುಕರು ಎಂಬುದು ಕರಾವಳಿಯ ಜನರಿಗೆ ಚೆನ್ನಾಗಿಯೇ ಗೊತ್ತು. ನೀವು ಮುಂದೆ ಓದಲಿರುವ ಈ ಪ್ರಕರಣದಲ್ಲಿ ತಮ್ಮ ನೀಚ ಬುದ್ಧಿಯನ್ನು ಪ್ರದರ್ಶಿಸಿ ಈ ಚೆಡ್ಡಿಗಳು ತಾವು ನಿಜಕ್ಕೂ ಮನೆಹಾಳರು ಎಂದು ಮತ್ತೊಮ್ಮೆ ಸಾಬೀತುಮಾಡಿದ್ದಾರೆ.

ಗಂಗೊಳ್ಳಿ ಎಂಬುದು ಕರಾವಳಿಯ ಕುಂದಾಪುರ ತಾಲೂಕಿನಲ್ಲಿರುವ ಒಂದು ಪುಟ್ಟ ಊರು. ಮೀನುಗಾರಿಕೆಯೇ ಈ ಊರಿನ ಆಧಾರ. ಮತ್ಸ್ಯಗಂಧದ ಈ ಊರಿನಲ್ಲಿ ಹಿಂದೂಗಳ ಜೊತೆಗೆ ಸಾಕಷ್ಟು ಸಂಖ್ಯೆಯಲ್ಲಿ ಮುಸ್ಲಿಮ್ ಮತ್ತು ಕ್ರೈಸ್ತರ ಕುಟುಂಬಗಳಿವೆ. ವ್ಯಾಪಾರ ವಹಿವಾಟಿಗೆ ಐತಿಹಾಸಿಕ ಖ್ಯಾತಿ ಇರುವ ಈ ಊರಿಗೆ ಸೌಹಾರ್ದದ ಒಂದು ದೀರ್ಘ ಪರಂಪರೆಯೇ ಇದೆ. ಇಂತಹ ಊರಿನಲ್ಲಿ ಹಿಂದೂ ಜಾಗರಣ ವೇದಿಕೆ ಎಂಬ ದರಿದ್ರ ಸಂಘಟನೆಯೊಂದು ಹುಟ್ಟಿಕೊಂಡಿದೆ. ಇದು ಇಲ್ಲಿನ ಕ್ರೈಸ್ತರು-ಮುಸಲ್ಮಾನರ ಬದುಕಿಗೆ ಬೆದರಿಕೆಯೊಡ್ಡುತ್ತಿದೆ, ಹಿಂದೂಗಳ ಬೆನ್ನಿಗೆ ಚೂರಿ ಹಾಕುತ್ತಿದೆ.

ಶಂಶೇರ್ ಎಂಬ ಬಿಹಾರದ ಯುವಕ ಗಂಗೊಳ್ಳಿಗೆ ಉದ್ಯೋಗವನ್ನರಸಿ ಬಂದಿದ್ದ. ಅಲ್ಲಿಯ ಐಸ್ ಫ್ಯಾಕ್ಟರಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ. ಅದೇ ಫ್ಯಾಕ್ಟರಿಯಲ್ಲಿ ಗಂಗೊಳ್ಳಿಯ ಪದ್ಮಾ ಎಂಬಾಕೆಯೂ ಕೆಲಸ ಮಾಡುತ್ತಿದ್ದಳು. ಇವರಿಬ್ಬರ ನಡುವೆ ಪ್ರೇಮಾಂಕುರವಾಗಿ ಮದುವೆ ಮಾಡಿಕೊಳ್ಳಲು ಇಬ್ಬರೂ ನಿರ್ಧರಿಸಿದರು. ಆನಂತರ ಅವರಿಬ್ಬರು ಮುಂಬೈಗೆ ತೆರಳಿದರು. ಅಲ್ಲಿ ಶಂಶೇರ್‌ನ ಅಕ್ಕನ ಸಮ್ಮುಖದಲ್ಲಿ ಮುಸ್ಲಿಮ್ ಸಂಪ್ರದಾಯದಂತೆ ಪದ್ಮ ಸೂಫಿಯಾ ಆಗಿ ಶಂಶೇರ್ ಜೊತೆ ನಿಕಾಹ್ ಮಾಡಿಕೊಂಡಳು.

ಸ್ವಲ್ಪ ಕಾಲ ಮುಂಬೈಯಲ್ಲಿಯೇ ಇಬ್ಬರೂ ವಾಸವಾಗಿದ್ದರು. ಈ ನಡುವೆ ಮದುವೆಗೆ ಒಪ್ಪದಿದ್ದ ಶಂಶೇರ್ ತಂದೆ ಬಿಹಾರದಿಂದ ಮುಂಬೈಗೆ ಬಂದು ಆತನನ್ನು ಬಿಹಾರಕ್ಕೆ ಬಲವಂತವಾಗಿ ಕರೆದೊಯ್ದರು.

ಸೂಫಿಯಾ ದಿಕ್ಕು ಕಾಣದೆ ತನ್ನ ತಾಯಿಯ ಮನೆ ಸೇರಿಕೊಂಡಳು. ಆಗ ಆಕೆ ಗರ್ಭಿಣಿ ಕೂಡ ಆಗಿದ್ದಳು.

ಸೂಫಿಯಾ ಹೆಣ್ಣು ಮಗುವೊಂದಕ್ಕೆ ಜನ್ಮ ನೀಡಿದಳು. ಅತ್ತ ಬಿಹಾರದಲ್ಲಿ ಶಂಶೇರ್ ಸೂಫಿಯಾಗಾಗಿ ಚಡಪಡಿಸುತ್ತಿದ್ದ. ಅಲ್ಲಿ ಆತ ಬೇರೆಯೇ ಮದುವೆಯಾಗಿ ತಂದೆಯನ್ನು ಖುಷಿಪಡಿಸಿ ಇದ್ದುಬಿಡಬಹುದಿತ್ತು, ಆದರೆ ಆತ ಹಾಗೆ ಮಾಡಲಿಲ್ಲ, ಯಾಕೆಂದರೆ ಅದು ನೈಜ ಪ್ರೇಮ. ಹೇಗಾದರೂ ಮಾಡಿ ತಾನು ಪ್ರೀತಿಸಿದ ಸೂಫಿಯಾಳನ್ನು ಮತ್ತೆ ಸೇರಿಕೊಳ್ಳಬೇಕೆಂದು ಹಂಬಲಿಸುತ್ತಿದ್ದ. ಕೊನೆಗೂ ಆ ದಿನ ಕೂಡಿ ಬಂತು. ಶಂಶೇರ್ ಗಂಗೊಳ್ಳಿಗೆ ಬಂದ. ಆಗ ಆತನ ಮಗಳಿಗೆ 11 ತಿಂಗಳು. ಸೂಫಿಯಾಳ ಖುಷಿಗೆ ಪಾರವೇ ಇರಲಿಲ್ಲ, ಆಕೆಯ ಮನೆಯವರು ಕೂಡ ಯಾವುದೇ ತಕರಾರಿಲ್ಲದೇ ಶಂಶೇರ್‌ನನ್ನು ಬರಮಾಡಿಕೊಂಡರು. ಸೂಫಿಯಾಳ ತಂದೆ, ತಾಯಿ, ತಮ್ಮಂದಿರು, ಸಹೋದರಿಯರು ವಾಸವಾಗಿದ್ದ ಮನೆಯಲ್ಲಿಯೇ ಆತನೂ ಇದ್ದ. ಮದುವೆಯಾದ ನಂತರ ಸುಮಾರು ಮೂರು ವರ್ಷ ಆಕೆ ತನ್ನ ತಾಯಿಯ ಮನೆಯಲ್ಲಿಯೇ ಇದ್ದಳು. ಶಂಶೇರ್ ಹತ್ತಿರದ ಊರಿನಲ್ಲಿಯೇ ಕೆಲಸಕ್ಕೆ ಸೇರಿಕೊಂಡಿದ್ದ. ಒಂದು ವರ್ಷ ದೆಹಲಿಯಲ್ಲಿ ಕೆಲಸ ಮಾಡಲು ಹೋಗಿದ್ದ ಶಂಶೇರ್ ಅಲ್ಲಿಗೂ ಸೂಫಿಯಾಳನ್ನು ಕರೆದುಕೊಂಡು ಹೋಗಿದ್ದ.

ಪುನಃ ಗಂಗೊಳ್ಳಿಗೆ ಬಂದು ನೆಲೆಸಿದ ಶಂಶೇರ್ ಈ ಬಾರಿ ಮನೆಯೊಂದನ್ನು ಬಾಡಿಗೆಗೆ ಪಡೆದು ಅಲ್ಲಿ ಸಂಸಾರ ಹೂಡಿದ. ಈ ನಡುವೆ ಅವರಿಗೆ ಇನ್ನೊಂದು ಗಂಡು ಮಗುವಾಯಿತು. ಇಷ್ಟುಹೊತ್ತಿಗೆ ಶಂಶೇರ್ ಗಂಗೊಳ್ಳಿಯವನೇ ಆಗಿ ಹೋಗಿದ್ದ. ಕನ್ನಡ ಕಲಿತುಕೊಂಡ. ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿಸಿಕೊಂಡಿದ್ದ. ಮಕ್ಕಳಿಬ್ಬರೂ ಶಾಲೆಗೆ ಹೋಗುತ್ತಿದ್ದಾರೆ. ಸಂಸಾರ ನೆಮ್ಮದಿಯಿಂದ ಸಾಗಿತ್ತು, ಇಷ್ಟೆಲ್ಲ ನಡೆಯುವಾಗ ಶಂಶೇರ್ - ಸೂಫಿಯಾ ಮದುವೆಯಾಗಿ 8 ವರ್ಷಗಳು ಕಳೆದಿವೆ. ಈ 8 ವರ್ಷಗಳ ನಂತರ ಈ ಚೆಡ್ಡಿಗಳ ವಕ್ರದೃಷ್ಟಿ ಈ ಸುಂದರ ಸಂಸಾರದ ಮೇಲೆ ಬಿದ್ದಿದೆ.

ಕಳೆದ ಸೋಮವಾರ ಡಿಸೆಂಬರ್ 7ರ ಸಂಜೆ ಸೂಫಿಯಾ ತನ್ನಿಬ್ಬರು ಮಕ್ಕಳ ಜೊತೆ ಮನೆಯಲ್ಲಿದ್ದ ವೇಳೆ ಏಕಾಏಕಿಯಾಗಿ ಐದಾರು ಜನರ ತಂಡವೊಂದು ಮನೆಗೆ ನುಗ್ಗಿದೆ. ತಂಡದ ನೇತೃತ್ವ ವಹಿಸಿದ್ದು ಸ್ವತಃ ಸೂಫಿಯಾಳ ತಮ್ಮ ಸತೀಶ. ತಂಡದಲ್ಲಿ ಆಕೆಯ

ಕರಾವಳಿಯ ಪೊಲೀಸರು ಕೋಮುವಾದಿಗಳನ್ನು ಸದಾ ರಕ್ಷಿಸುತ್ತಲೇ ಬಂದವರು. ಸೂಫಿಯಾ ಪ್ರಕರಣದಲ್ಲೂ ಆರೋಪಿಗಳನ್ನು ರಕ್ಷಿಸುವ ಹುನ್ನಾರದಲ್ಲಿಯೇ ಇದ್ದ ಗಂಗೊಳ್ಳಿ ಠಾಣೆಯ ಪೊಲೀಸರು ಸೂಫಿಯಾಳ ಹೇಳಿಕೆಯನ್ನು ತಿರುಚುವ ಪ್ರಯತ್ನ ಮಾಡಿದರು.

ಪರಿಚಯಸ್ಥರೇ ಆಗಿದ್ದ ರಘುನಾಥ ಖಾರ್ವಿ, ವಾಸುದೇವ ದೇವಾಡಿಗ, ಮನೋಜ, ಮೋಹನ ಮತ್ತು ಗುರು ಇದ್ದರು. 'ನೀನು ಹಿಂದೂ ಧರ್ಮಕ್ಕೆ ಬರಬೇಕು, ನಿನ್ನ ಗಂಡನೂ ಹಿಂದೂ ಆಗಬೇಕು, ನಿನ್ನ ಮಕ್ಕಳನ್ನು ಮುಸ್ಲಿಮರು ಹೋಗುವ ಶಾಲೆಯಿಂದ ಬಿಡಿಸಬೇಕು' ಎಂದೆಲ್ಲ ಆದೇಶ ಕೊಡುತ್ತಾ ಸೂಫಿಯಾಳ ಮೇಲೆ ತಂಡ ಹಲ್ಲೆ ನಡೆಸಿತು. ಮಕ್ಕಳು ಕೂಗಿಕೊಂಡರೂ ಈ ರಾಕ್ಷಸ ತಂಡದ ಆರ್ಭಟ ನಿಲ್ಲಲಿಲ್ಲ, 'ನಿನ್ನನ್ನು ಸುಟ್ಟು ಹಾಕುತ್ತೇವೆ, ನಿನ್ನ ಗಂಡನನ್ನು ಕೊಲ್ಲುತ್ತೇವೆ' ಎಂದೆಲ್ಲ ಅಬ್ಬರಿಸಿದ ಈ ಚೆಡ್ಡಿಗಳು ಮುಸ್ಲಿಮರಿಗೆ ಏನೆಲ್ಲಾ ಬೈಗುಳ ಬೈಯ್ಯಲು ಸಾಧ್ಯವಿದೆ ಎಂದು ತಮ್ಮ ಸಂಘಟನೆ ಕಲಿಸಿಕೊಟ್ಟಿದೆಯೋ ಅಷ್ಟನ್ನೂ ಬೊಗಳಿದ್ದಾರೆ. ಆಕೆಯ ತಲೆಗೆ ದೊಣ್ಣೆಯಿಂದ ಹೊಡೆದ ಪೆಟ್ಟಿಗೆ ಮೂಗಿನಲ್ಲಿ ರಕ್ತ ಚಿಮ್ಮಿತ್ತು. ಕೊನೆಗೂ ಹೇಗೋ ಪ್ರಾಣ ಉಳಿಸಿಕೊಂಡು ಮಕ್ಕಳನ್ನು ಕರೆದುಕೊಂಡು ಓಡಿಹೋಗಿ ಯಾರದೋ ಸಹಾಯ ಪಡೆದು ಆಸ್ಪತ್ರೆಗೆ ದಾಖಲಾಗಿದ್ದಾಳೆ.

ತಮ್ಮನೇ ಅಕ್ಕನ ಮೇಲೆ ಹಲ್ಲೆ ಮಾಡಿದ ಎಂಬ ಕಾರಣಕ್ಕೆ, ಮೇಲ್ನೋಟಕ್ಕೆ ಇದು ನಿಮಗೆ ತುಂಬಾ ಸರಳವಾದ ಮತ್ತು ಎಲ್ಲಿಯೂ ನಡೆಯಬಹುದಾದ ಕೌಟುಂಬಿಕ ಜಗಳ ಎಂದು ಕಾಣಿಸಬಹುದು. ತಮ್ಮನೋರ್ವ ಅಕ್ಕನಿಗೆ ಹೊಡೆದರೆ ಯಾವುದೋ ಸಿಟ್ಟು, ಸಂಕಟದಿಂದ ಹಲ್ಲೆ ಮಾಡಿರುತ್ತಾನೆ ವಿನಃ ಯಾವುದೋ ಸಿದ್ಧಾಂತಕ್ಕಾಗಿ ಹಾಗೆ ಮಾಡುವುದಿಲ್ಲ ಎಂದೂ ನಿಮಗೆ ಅನಿಸಬಹುದು. 'ನಮ್ಮ ಹುಡುಗಿ -ಅವರ ಹುಡುಗ' ಎಂಬ ವಿಚಾರ ಬಂದಾಗಲೆಲ್ಲ ಇಂತಹ ಜಗಳಗಳು, ಹಲ್ಲೆ ಸಹಜವೇ ಅನಿಸಬಹುದು. ಹಿಂದೂ-ಮುಸ್ಲಿಮ್



ಮಾತ್ರವಲ್ಲ, ಹಿಂದೂಗಳ ನಡುವೆಯೇ ಮೇಲ್ಜಾತಿ-ಕೆಳಜಾತಿಯ ನಡುವೆ ಮದುವೆ ಸಂಬಂಧಗಳು ಏರ್ಪಟ್ಟಾಗಲೂ ಇಂತಹದು ಸಂಭವಿಸಿದೆ. ವಿಷಯ ಇಷ್ಟೇ ಸರಳವಾಗಿದ್ದರೆ ಅದನ್ನು ಅಕ್ಕ-ತಮ್ಮ ಮತ್ತು ಆಕೆಯ ಕುಟುಂಬದವರು ಪರಿಹರಿಸಿಕೊಳ್ಳುತ್ತಾರೆ ಎಂದು ಸುಮ್ಮನಿದ್ದುಬಿಡಬಹುದಿತ್ತು, ಆದರೆ ಇಲ್ಲಿ ನಡೆದ ಹಲ್ಲೆಯ ಸೂತ್ರಧಾರ ಕೋಮುವಾದಿ ಹಿಂದೂ ಜಾಗರಣ ವೇದಿಕೆ ಮತ್ತು ಅದರ ಚಿಕ್ಕಪ್ಪ-ದೊಡ್ಡಪ್ಪನ ಮಕ್ಕಳಂತೆ ಇರುವ ಭಜರಂಗ ದಳ ಮತ್ತಿತರ ಹಿಂದೂ ಮತಾಂಧ ಸಂಘಟನೆಗಳು ಎಂಬುದು ಅತ್ಯಂತ ಸ್ಪಷ್ಟವಾಗಿದೆ. ಇದು ಹಲ್ಲೆಗೊಳಗಾದ ಪದ್ಮ ಯಾನೆ ಸೂಫಿಯಾಗೆ ಸ್ಪಷ್ಟವಾಗಿ ಗೊತ್ತಿದೆ. ಮುಸಲ್ಮಾನ ಶಂಶೇರ್ ಜೊತೆ ಮದುವೆಯಾದ ನಂತರದ 8 ವರ್ಷಗಳಲ್ಲಿ ಕೂಡ ಮೊದಲಿನಂತೆಯೇ ತನ್ನ ತಮ್ಮನಾಗಿಯೇ ಇದ್ದ ಸತೀಶ ಏಕಾಏಕಿಯಾಗಿ ಹಿಂದೂ ಸಂಘಟನೆಯೊಂದರ ದೊಣ್ಣೆ ನಾಯಕನ ಹಾಗೆ ಆಡುತ್ತಿರುವುದರ ಹಿನ್ನೆಲೆಯನ್ನು ಆಕೆಯೇ ಪತ್ರಕರ್ತರಲ್ಲಿ, ಪೊಲೀಸರಲ್ಲಿ ಹೇಳಿಕೊಂಡಿದ್ದಾಳೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸ... ಒಂದಿದೆ. ಮದುವೆಯಾದ ಇಷ್ಟು ವರ್ಷಗಳಲ್ಲಿ ಮದುವೆಯ ಕುರಿತು ಪದ್ಮ ಯಾನೆ ಸೂಫಿ... ಮನೆಯಲ್ಲಿ ಯಾವ ತಕರಾರೂ ಇರಲಿಲ್ಲ, ಕಳೆದ ... ನಿಧನರಾದ ಆಕೆಯ ತಂದೆ, ಈಗಲೂ ಈಕೆಯ ಕ... ಕಾಳಜಿ ವಹಿಸುವ ತಾಯಿ, ಸಹೋದರಿಯ... ತಮ್ಮಂದಿರು ಯಾರಿಗೂ ತಮ್ಮ ಮನೆಯ ಹು... ಅದೇನೋ ಮಾಡಬಾರದ್ದು ಮಾಡಿದ್ದಾಳೆ ಎ... ಅನಿಸಿಯೇ ಇಲ್ಲ, ಎಲ್ಲರೂ ಈಕೆಯನ್ನು, ಈ... ಗಂಡನನ್ನು ಚೆನ್ನಾಗಿಯೇ ನೋಡಿಕೊಂಡಿದ್ದಾರೆ. ಸೂಫಿ... ಎರಡೂ ಮಕ್ಕಳನ್ನು ಅವರೆಲ್ಲ ತುಂಬಾ ಪ್ರೀತಿಸಿ... ಮನುಷ್ಯ ಧರ್ಮ ಎಂದರೆ ಏನೆಂದು ಇವರೆ... ತಿಳಿದುಕೊಂಡಿದ್ದಾರೆ. ಪದ್ಮಾ, ಸೂಫಿಯಾ ಆದ ನಂತ... ಕೂಡ ತಾಯಿಯ ಮನೆಯಲ್ಲಿಯೇ ಅನೇಕ ವಷ... ಕಾಲ ವಾಸವಾಗಿದ್ದಳು. ಖಾರ್ವಿ ಜನಾಂಗದ ... ಮಾತು ಕೊಂಕಣಿ. ಸೂಫಿಯಾಳ ಇಬ್ಬರು ಮ... ಅರಳು ಹುರಿದಂತೆ ಕೊಂಕಣಿ ಮಾತನಾಡು... ತಂದೆಯೊಂದಿಗೆ ಉರ್ದುವಿನಲ್ಲಿ ಮಾತನಾಡು... ಗಂಗೊಳ್ಳಿ ಎಂಬ ಊರಿನಲ್ಲಿ ಈ 8 ವರ್ಷ... ಯಾರು ಕೂಡ ಈ ದಂಪತಿಗೆ ತೊಂದರೆ ಕೊಟ್ಟ... ಆದರೆ ಈಗ ಸೂಫಿಯಾಳ ತಮ್ಮ ಸತೀಶ ಹಿ... ಮಾಡಿದ?

ಗಂಗೊಳ್ಳಿಯ ಹಿಂದೂ ಜಾಗರಣ ವೇದಿ... ಮುಖಂಡರಲ್ಲಿ ಒಬ್ಬ ವಾಸುದೇವ ದೇವ... ವೃತ್ತಿಯಲ್ಲಿ ರಿಕ್ಷಾ ಚಾಲಕ. ಈತನಿಗೆ ಹಿ... ಮತಾಂಧತೆಯ ಅಮಲು ನೆತ್ತಿಗೇರಿ ... ವರ್ಷಗಳಾಗಿವೆ. ಊರಿನ ನೆಮ್ಮದಿ ಕೆಡಿಸು... ಹೇಗೆ, ಅಲ್ಪ ಸಂಖ್ಯಾತರ ಮನೆಗೆ ... ಇಡುವುದು ಹೇಗೆ ಎಂಬುದು ಸದಾ ... ಚಿಂತನೆ. ಸಂಘಪರಿವಾರದಲ್ಲಿ ಕ್ರೈಮ್ ರೆಕಾ... ಯಾರದು ಜಾಸ್ತಿಯೋ ಅವರಿಗೆ ಹೆಚ್ಚು ... ಪ್ರಮೋಷನ್ ದೊರೆಯುತ್ತದೆ. ಹೀಗೆ ಈ... ಪ್ರಮೋಷನ್‌ಗಾಗಿ ತನ್ನ ಹಿರಿಯ ಚೆಡ್ಡಿಗಳ ... ಪಾತ್ರನಾಗಬೇಕೆಂದು ಹಾತೊರೆಯುತ್ತಿ... ಈತನಿಗೆ ಇತ್ತೀಚೆಗೆ ಅದು ಹೇಗೋ ... ಎಂಬ ಹುಡುಗಿ ಸೂಫಿಯಾ ಆಗಿ ಶಂ... ಜೊತೆ ಮದುವೆ ಮಾಡಿಕೊಂಡ ಕಥೆ ತಿಳಿಯಿತು. ಈತನ ವಿಕೃತ ಮನಸ್ಸು ಎಚ್ಚರಗೊಂಡಿದೆ. ... ತಂಟೆಗೂ ಬಾರದೇ ಊರಿನಲ್ಲಿ ತನ್ನಷ್ಟಕ್ಕೇ ತ... ಸೂಫಿಯಾಳ ತಮ್ಮ ಸತೀಶನನ್ನು ಈ ವಾಸು... ಸಂಪರ್ಕಿಸಿದ. ಯಾವತ್ತೂ ತನ್ನ ಅಕ್ಕನನ್ನು ದ್ವೇ... ಸತೀಶನ ತಲೆಯಲ್ಲಿ ಹೊಲಸು ವಿಚಾರಗಳನ್ನು ವಾಸುದೇವ ತುಂಬಿದ.

ಇನ್ನೊಬ್ಬ ಚೆಡ್ಡಿ ಮತಾಂಧ ರಘುನಾಥ ... ಸತೀಶನ ತಲೆಯಲ್ಲಿ ಇನ್ನಷ್ಟು ಮತಾಂಧತೆಯ ಬಿತ್ತಿದ. ಈ ರಘುನಾಥ ಖಾರ್ವಿ ಗಂಗೊಳ್ಳಿಯ ಹಿ... ಜಾಗರಣ ವೇದಿಕೆಯ ಸಂಚಾಲಕನಾಗಿದ್ದ. ಕೊ... ಈ ವಾಸುದೇವ ಮತ್ತು ರಘುನಾಥ ಎಂಬಿಬ್ಬರು ... ಚೆಡ್ಡಿಗಳ ಯೋಜನೆ ಯಶಸ್ವಿಯಾಗಿದೆ. ಸ್ವಲ್ಪ ಕು... ಚಟವಿದ್ದ ಸತೀಶನಿಗೆ ಕುಡಿಸಿ ಕುಡಿಸಿ ಮತಾಂಧ... ಅಮಲನ್ನು ಏರಿಸಿದರು. ಸ್ವತಃ ಹಿಂದೂ ಜಾ... ವೇದಿಕೆಯವರು ಹಲ್ಲೆ ನಡೆಸಿದರೆ ಆಡಳಿತದ... ಬಿಜೆಪಿ ಸರಕಾರಕ್ಕೆ ಇರಿಸುಮುರಿಸಾಗಿ ಎಡವಟ್ಟಾಗು... ತಪ್ಪುತ್ತದೆ ಎಂದು ಬಲ್ಲ ಇವರು ಸ್ವತಃ ಸತೀ...

ಹಳ್ಳಿಗೆ ಕಳುಹಿಸಿದರೆ ತಮ್ಮನೇ ಅಕ್ಕನ ಮೇಲೆ ಹಲ್ಲೆ ಮಾಡಿದ ಎಂದು ಸುದ್ದಿ ಹರಡುತ್ತದೆ, ತಮ್ಮ ಉದ್ದೇಶವೂ ಸಾರ್ಥಕವಾಗುತ್ತದೆ ಎಂದು ಭಾವಿಸಿದ್ದರು. ಆದರೆ ಹಳ್ಳಿಗೆ ಸತೀಶ ಒಬ್ಬನೇ ಹೋಗಿರಲಿಲ್ಲ. ಆತನಿಗೆ ಸ್ವತಃ ಅಕ್ಕನ ಮೇಲೆ ಕೈ ಮಾಡುವ ಧೈರ್ಯವೂ ಇರಲಿಲ್ಲ. ಹೀಗಾಗಿ ಜೊತೆಗೆ ವಾಸುದೇವ, ರಘುನಾಥ ಮತ್ತು ಕೆಲವು ಚಿಡ್ಡಿ ಪಡೆಯ ಹುಡುಗರು ಇದ್ದರು. ಈಗ ಇವರೆಲ್ಲರ ಬಣ್ಣ ಬಯಲಾಗಿದೆ. ನೆಮ್ಮದಿಯಿಂದ ಇದ್ದ ಒಂದು ಕುಟುಂಬವನ್ನೇ ಹೇಗೆ ಈ ಸಂಘಪರಿವಾರ ಚಿಂದಿ ಮಾಡುತ್ತದೆ ಎಂಬುದಕ್ಕೆ ಇದೊಂದು ನಿದರ್ಶನ.

ಕರಾವಳಿಯ ಪೊಲೀಸರು ಕೋಮುವಾದಿಗಳನ್ನು ಸದಾ ರಕ್ಷಿಸುತ್ತಲೇ ಬಂದವರು. ಸೂಫಿಯಾ ಪ್ರಕರಣದಲ್ಲಿಯೂ ಆರೋಪಿಗಳನ್ನು ರಕ್ಷಿಸುವ ಹುನ್ನಾರದಲ್ಲಿಯೇ ಇದ್ದ ಗಂಗೊಳ್ಳಿ ಠಾಣೆಯ ಪೊಲೀಸರು ಸೂಫಿಯಾಳ ಹೇಳಿಕೆಯನ್ನೇ ತಿರುಚುವ ಪ್ರಯತ್ನ ಮಾಡಿದರು. ಹಲ್ಲೆ ನಡೆಸಿದವರ ಹೆಸರುಗಳನ್ನು ಸ್ಪಷ್ಟವಾಗಿ ಆಕೆ ಹೇಳಿದ್ದರೂ ಪೊಲೀಸರು ತಾವು ಬರೆದುಕೊಂಡ ಹೇಳಿಕೆಯಲ್ಲಿ 'ಸೂಫಿಯಾಳ ತಮ್ಮ ಸತೀಶ ಮತ್ತು ಇತರರು' ಎಂದು ಬರೆದಿದ್ದರು. 'ಇತರರು' ಯಾರೆಂದು ಸ್ವತಃ ಸೂಫಿಯಾಳೇ ಪೊಲೀಸರಿಗೆ ತಿಳಿಸಿದರೂ ಪೊಲೀಸರು ಮಾತ್ರ ಹಿಂದೂ ಜಾಗರಣ ವೇದಿಕೆಯ ನಾಯಕರ ರಕ್ಷಣೆ ಮಾಡಲು ಮುಂದಾಗಿದ್ದರು. ಆದರೆ ಈ ಸಂದರ್ಭದಲ್ಲಿ ಈ ಕುತಂತ್ರ ತಿಳಿದ ಸೂಫಿಯಾ ಸ್ವತಃ ಇಲ್ಲಿನ ಎಎಸ್‌ಪಿ ರಾಮ್‌ನಿವಾಸ್‌ಗೆ ಫೋನ್ ಮಾಡಿ ತನಗಾಗುತ್ತಿರುವ ಅನ್ಯಾಯದ ಕುರಿತು ತಿಳಿಸಿದ ಮೇಲೆ ಗಂಗೊಳ್ಳಿ ಪೊಲೀಸರು ಅನ್ಯ ಮಾರ್ಗವಿಲ್ಲದೆ ಎಲ್ಲ 'ಇತರರ' ಹೆಸರನ್ನು ಎಫ್‌ಐಆರ್‌ನಲ್ಲಿ ದಾಖಲಿಸಿದ್ದಾರೆ.

ಹಿಂದೂ ಜಾಗರಣ ವೇದಿಕೆ ಮತ್ತು ಇತರ ಹಿಂದೂ ಮತಾಂಧ ಸಂಘಟನೆಗಳು ಗಂಗೊಳ್ಳಿಯಲ್ಲಿ ಬೆಳೆದಷ್ಟು ಈ ಊರಿಗೆ ಆತಂಕ ಹೆಚ್ಚಾಗುತ್ತಿದೆ. ಗಂಗೊಳ್ಳಿಯಲ್ಲಿ ಇತಿಹಾಸ ಪ್ರಸಿದ್ಧವಾದ ಚರ್ಚ್ ಒಂದು ಇದೆ. ಆ ಚರ್ಚ್‌ನಲ್ಲಿ ಪ್ರತಿ ವರ್ಷವೂ ವಾರ್ಷಿಕ ಉತ್ಸವ ನಡೆಯುತ್ತದೆ. ಸ್ಥಳೀಯವಾಗಿ ಆ ಹಬ್ಬಕ್ಕೆ ತೆರಾಲಿ ಎಂದು ಹೆಸರು. ತೆರಾಲಿ ಹಬ್ಬದಲ್ಲಿ ಪ್ರತಿ ವರ್ಷವೂ ಹಿಂದೂ ಮತ್ತು ಮುಸಲ್ಮಾನರು ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ನೂರಾರು ಹಿಂದೂಗಳು ಮೇರಿ ಮಾತೆಯ ಗ್ರೊಟ್ಟೊಗೆ ಮೊಂಬತ್ತಿ ಬೆಳಗಿಸುತ್ತಾರೆ. ಆದರೆ ಇದನ್ನೆಲ್ಲ ಸಹಿಸದ ಹಿಂದೂ ಜಾಗರಣ ವೇದಿಕೆ, ಹಿಂದೂಗಳು ಇನ್ನು ಮುಂದೆ ತೆರಾಲಿ ಹಬ್ಬಕ್ಕೆ ಹೋಗಬಾರದು ಎಂದು ಫರ್ಮಾನು ಹೊರಡಿಸಿ ಕೆಲವು ವರ್ಷಗಳ ಕಾಲ ನಿರಂತರವಾಗಿ ಕರಪತ್ರ ಹಂಚಿತು. ಆದರೆ ಇವರ ಈ ಕುತಂತ್ರಕ್ಕೆ, ಅಪಪ್ರಚಾರಕ್ಕೆ ಹಿಂದೂಗಳು ಕ್ಯಾರೇ ಅನ್ನದೇ ಪ್ರತಿ ವರ್ಷ ಹಬ್ಬದ ದಿನ ಚರ್ಚ್ ವಠಾರದಲ್ಲಿ ಅಡ್ಡಾಡಿ, ಹಬ್ಬದ ಖುಷಿ ಸವಿದು ಮೊಂಬತ್ತಿ ಬೆಳಗಿ ಪ್ರಾರ್ಥನೆ ಸಲ್ಲಿಸುತ್ತಾರೆ. ಈ ಮತಾಂಧರನ್ನು ಧಿಕ್ಕರಿಸಬೇಕಾದುದು ಹೀಗೆಯೆ.

ಈಗ ಸೂಫಿಯಾ-ಶಂಶೇರ್ ಇಬ್ಬರ ಬದುಕಿಗೂ ಕೊಳ್ಳಿ ಇಡಬಯಸಿರುವ ಈ ಚಿಡ್ಡಿಗಳ ಷಡ್ಯಂತ್ರಕ್ಕೆ ಗಂಗೊಳ್ಳಿ ಊರು ಧಿಕ್ಕಾರ ಹೇಳಬೇಕಿದೆ. ಸೂಫಿಯಾ ದಿಟ್ಟ ಹೆಂಗಸು. ತನ್ನ ಮೇಲೆ ಹಲ್ಲೆಯಾಗಿದ್ದರೂ ತಾನು ಗಂಗೊಳ್ಳಿ ಊರನ್ನು ಬಿಟ್ಟು ಪಲಾಯನ ಮಾಡುವುದಿಲ್ಲ ಎಂದು ಆಕೆ ಖಚಿತವಾಗಿ ಹೇಳುತ್ತಾಳೆ. 'ನಾವು ಯಾರಿಗೂ ತೊಂದರೆ ಕೊಟ್ಟಿಲ್ಲ, ನಾವ್ಯಾಕೆ ಈ ಊರು ಬಿಡಬೇಕು' ಎಂದು ಶಂಶೇರ್ ಕೂಡ ನಮ್ಮನ್ನು ಕೇಳುತ್ತಾನೆ. ಇವರಿಬ್ಬರ ಮಕ್ಕಳು ಸಾನಿಯಾ ಮತ್ತು ಸಾಹಿಲ್‌ಗೆ 'ಸತೀಶ್ ಮಾಮಾ' ಯಾಕೆ ಅಮ್ಮನಿಗೆ ಹೊಡೆದ ಎಂಬುದು ಇನ್ನೂ ಅರ್ಥವಾಗಿಲ್ಲ.

ಶಂಶೇರ್ ಮತ್ತು ಸೂಫಿಯಾಗೆ ತಾವು ಯಾವ ಧರ್ಮಕ್ಕೆ ಸೇರಿದ್ದೇವೆ ಎಂಬುದು ಮದುವೆಯಿಂದ ಇಂದಿನ ತನಕ ಮುಖ್ಯ ವಿಚಾರವೇ ಆಗಿಲ್ಲ. ಇಂದಿಗೂ ಇಲ್ಲಿಯ ದೇವಾಲಯದ ಕಾರ್ಯಕ್ರಮಗಳಿಗೆ ಧನಸಹಾಯ ಸಂಗ್ರಹಿಸುವಾಗ ಸೂಫಿಯಾ ತನ್ನ ಬಂಧುಗಳ ಜೊತೆ ಮುಂಚೂಣಿಯಲ್ಲಿ ಇರುತ್ತಾರೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಇಸ್ಲಾಂನ ರೀತಿ ರಿವಾಜುಗಳನ್ನೂ ಪಾಲಿಸುತ್ತಾರೆ. ತಾವಿಬ್ಬರೂ ಜೊತೆಗಿರಬೇಕು, ಮಕ್ಕಳನ್ನು ಸುಶಿಕ್ಷಿತರನ್ನಾಗಿಸಬೇಕು, ಊರಿನಲ್ಲಿ ನೆಮ್ಮದಿಯ ಬದುಕು ಸಾಗಿಸಬೇಕು ಎಂಬುದು ಈ ದಂಪತಿಯ ಆಶಯ. ತನ್ನ ತಮ್ಮನಿಗೆ ಮಾಡಿದ ತಪ್ಪಿನ ಅರಿವಾಗಿ ಆತ ಈ ಕೋಮುವಾದಿಗಳ ಕಬಂಧ ಬಾಹುಗಳಿಂದ ಮುಕ್ತವಾಗಿ ಹೊರಬಂದು ತಮ್ಮ ಕುಟುಂಬ ಮೊದಲಿನಂತಾಗುತ್ತದೆ ಎಂಬ ಭರವಸೆ ಸೂಫಿಯಾಗೆ ಇದೆ. ಸೂಫಿಯಾಳಂತಹ ಧೈರ್ಯದ ಹುಡುಗಿಯ ಬದುಕು ಚೂರಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಗಂಗೊಳ್ಳಿಯ ಸೌಹಾರ್ದ ಪ್ರಿಯ ಜನರ ಮೇಲಿದೆ.

● ಯುಧಿಷ್ಠಿರ

ಕುಲಗೆಟ್ಟಿರುವ ಪ್ರಾಥಮಿಕ ಶಿಕ್ಷಣ ಕ್ಷೇತ್ರ

ನಾನು ಕಳೆದ ವರ್ಷ ಮೂಡಬಿದ್ರೆಯ ನುಡಿಸಿರಿ ಸಮ್ಮೇಳನಕ್ಕೆ ಹೋಗುತ್ತಿದ್ದಾಗ ಬಸ್ಸಿನಲ್ಲಿ ನನ್ನ ಪಕ್ಕದ ಸೀಟಿನಲ್ಲಿ ಹೆಣ್ಣು ಮಗಳೊಬ್ಬಳು ಬಂದು ಕುಳಿತು ನನ್ನೊಡನೆ ಮಾತಿಗಾರಂಭಿಸಿದಳು. ಆಕೆ ತಾನು ಬಿ.ಎಡ್. (ಶಿಕ್ಷಕ ತರಬೇತಿ) ವಿದ್ಯಾರ್ಥಿನಿಯೆನ್ನುತ್ತಾ ತನ್ನ ಒಂದು ಅನುಭವವನ್ನು ನನ್ನೊಡನೆ ಹಂಚಿಕೊಂಡಳು.

"ಮ್ಯಾಡಂ, ನಮ್ಮ ಈ ಶಿಕ್ಷಕ ತರಬೇತಿಯಲ್ಲಿ ನಾವು ಕೆಲವು ಶಾಲೆಗಳಿಗೆ ಹೋಗಿ ಅಲ್ಲಿನ ತರಗತಿಗಳಲ್ಲಿ ಪಾಠ ಮಾಡಬೇಕಾಗುತ್ತದೆ. ಆ ರೀತಿ ಒಂದು ಶಾಲೆಗೆ ಹೋದಾಗ ನನಗೊಂದು ಅನುಭವವಾಗಿದೆ. ಕನ್ನಡ ಮಾಧ್ಯಮದ ಒಂಭತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯೊಬ್ಬನೊಡನೆ ಕನ್ನಡ ಪುಸ್ತಕವನ್ನು ತೆಗೆದು ಓದಲು ಹೇಳಿದರೆ ಕೂಡಲೆ ಆ ಅಧ್ಯಾಪಕಿ, 'ಆತನೊಡನೆ ಓದಲು ಹೇಳಬೇಡಿ. ಅವನಿಗೆ ಓದಲು ಬರುವುದಿಲ್ಲ' ಎಂದರು. 'ಹಾಗಾದರೆ ಅವನನ್ನು ಹಾಗೆಯೇ ಬಿಡುವುದೇ?' ಎಂದು ಕೇಳಿದಾಗ ಅವರು ಏನೂ ಮಾತಾಡಲಿಲ್ಲ. ಆ ಹುಡುಗನಿಗೆ ಓದಲು ತುಂಬಾ ಆಸೆಯಿದೆ. ಆದರೆ ಅವನಿಗೆ ಓದಲು,



ಬರೆಯಲು ಕಲಿಸಿಯೇ ಇರಲಿಲ್ಲ! ಹಿಂದಿನ ಬೆಂಚಿನಲ್ಲಿ ಕುಳ್ಳಿರಿಸುತ್ತಿದ್ದರು. ಮತ್ತೆ ಹೇಗೆ ತೇರ್ಗಡೆಯಾದ? ಎಂದು ಕೇಳಿದರೆ 'ಈಗ ಎಲ್ಲರನ್ನೂ ತೇರ್ಗಡೆಗೊಳಿಸಲಾಗುತ್ತದೆಯಂತೆ' ಎಂದು ಆಕೆ ಹೇಳಿದರು" ಎಂದಳು ಆ ಹುಡುಗಿ.

ಈ ವರ್ಷವೂ ಡಾ. ಮೋಹನ ಆಳ್ವರ ಆಮಂತ್ರಣದಂತೆ 'ನುಡಿಸಿರಿ' ಸಮ್ಮೇಳನಕ್ಕೆ ಹೋಗಿದ್ದೆ. ಈ ಬಾರಿಯೂ ನನಗೆ ಇಂತಹದೇ ಒಂದು ಅನುಭವವಾಯಿತು. ನನ್ನನ್ನು ಕಂಡೊಡನೆ ಅಧ್ಯಾಪಕರೊಬ್ಬರು ನನ್ನ ಸಮೀಪ ಬಂದು ತಮ್ಮ ಸಮಸ್ಯೆಗಳನ್ನು ಹೇಳತೊಡಗಿದರು. ಇವರು ಸುಳ್ಯದ ಒಂದು ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿದ್ದಾರೆ. ಇವರ ವಿವರಣೆ ಈ ರೀತಿ ಇದೆ.

"ಮ್ಯಾಡಂ, ಈಗ ಹೈಸ್ಕೂಲು ತರಗತಿಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಲ್ಲಿ ಸುಮಾರು ಶೇ. ಇಪ್ಪತ್ತರಷ್ಟು ವಿದ್ಯಾರ್ಥಿಗಳಿಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ. ಪ್ರಾಥಮಿಕ ತರಗತಿಗಳ ವಿದ್ಯಾರ್ಥಿಗಳಿಗೆ ಸಮನಾಗಿ ತರಬೇತಿ ನೀಡುವುದಿಲ್ಲ. ಕೋಪಿ ಬರೆಸುವುದಾಗಲಿ, ಮಗ್ಗಿ ಬಾಯಿಪಾಠ ಮಾಡಿಸುವುದಾಗಲಿ ಇಲ್ಲ. ಹಳ್ಳಿಗಳಲ್ಲಿ ಈಗ ಹೆತ್ತವರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಸೇರಿಸುತ್ತಾರೆ. 'ನಾವಂತೂ ಓದು, ಬರಹ ಕಲಿಯಲಿಲ್ಲ, ನಮ್ಮ ಮಕ್ಕಳಾದರೂ ನಾಲ್ಕಕ್ಷರ ಕಲಿಯಲಿ' ಎಂಬ ಮಹತ್ವಾಕಾಂಕ್ಷೆ ಹಳ್ಳಿಯ ಈ ಬಡ ಜನರದು. ಹೀಗಾಗಿ ಹಳ್ಳಿಯ ಸರ್ಕಾರಿ ಶಾಲೆಗಳಲ್ಲಿ ಈಗ ಒಂದೊಂದು ತರಗತಿಯಲ್ಲಿ ನೂರು, ನೂರಿಪ್ಪತ್ತು ಮಕ್ಕಳಿರುತ್ತಾರೆ. ಅಷ್ಟು ವಿದ್ಯಾರ್ಥಿಗಳನ್ನು ಓರ್ವ ಅಧ್ಯಾಪಕನಿಂದ ನಿಭಾಯಿಸಲು ಸಾಧ್ಯವೇ? ಒಂದೇ ತರಗತಿಯನ್ನು ಎರಡು ಭಾಗ ಮಾಡಬೇಕೆಂದರೆ ಈ ಶಾಲೆಗಳಿಗೆ ಸಮನಾದ ಕಟ್ಟಡಗಳಾಗಲಿ, ಪೀಠೋಪಕರಣಗಳಾಗಲಿ ಇರುವುದಿಲ್ಲ" ಎಂದರು. "ಓದು, ಬರಹ ಬಾರದ ಮಕ್ಕಳನ್ನು ತೇರ್ಗಡೆಗೊಳಿಸುವುದೇಕೆ?" ಎಂದು ಕೇಳಿದರೆ

"ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸಿದರೆ ಶಾಲಾ ಮೇಲಧಿಕಾರಿಗಳಿಂದ, ವಿದ್ಯಾರ್ಥಿಗಳಿಗೆ ಯಾಕೆ ಸಮನಾಗಿ ತರಬೇತಿ ನೀಡಲಿಲ್ಲ? ಮಕ್ಕಳು ಯಾಕೆ ತೇರ್ಗಡೆಯಾಗುವುದಿಲ್ಲ? ಎಂಬ ಪ್ರಶ್ನೆಗೆ ಅಧ್ಯಾಪಕರು ಉತ್ತರಿಸಬೇಕಾಗುತ್ತದೆ. ಅಧ್ಯಾಪಕರಿಗೆ ಕೆಟ್ಟ ಹೆಸರು ಬರುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಪ್ರಶ್ನೆಗೆ ಸಮನಾಗಿ ಉತ್ತರ ಬರೆಯಲಿ, ಬರೆಯದಿರಲಿ ಎಲ್ಲರನ್ನೂ ತೇರ್ಗಡೆಗೊಳಿಸಲಾಗುತ್ತದೆ. ಅಧ್ಯಾಪಕರ ಮಕ್ಕಳು ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳಿಗೆ ಹೋಗುತ್ತಾರೆ." ಎಂದರು.

ಇಲ್ಲಿ ಇನ್ನೂ ಒಂದು ವಿಷಯವಿದೆ. ಪಠ್ಯಪುಸ್ತಕಗಳಿಗೆ ಪಠ್ಯಗಳನ್ನು ಆಯ್ಕೆ ಮಾಡುವ ಸಮಿತಿ ಇದೆ. ಕೆಲವೊಮ್ಮೆ ಇವರು ಆಯ್ಕೆ ಮಾಡಿದ ಪಾಠಗಳು ಅಧ್ಯಾಪಕರಿಂದಲೇ ಅರಗಿಸಿಕೊಳ್ಳಲಾಗುವುದಿಲ್ಲ ಎನ್ನುತ್ತಾರೆ ಈ ಅಧ್ಯಾಪಕರು. "ಇನ್ನು ನಾವು ಅದನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು ಹೇಗೆ? ಹದಿಮೂರೋ ಹದಿನಾಲ್ಕೊ ವರ್ಷದ ವಿದ್ಯಾರ್ಥಿಗಳ ಮೆದುಳಿನಲ್ಲಿ ಎಂತಹ ಪಾಠಗಳನ್ನು ಅರಗಿಸಿಕೊಳ್ಳುವ ಶಕ್ತಿ ಇದೆ ಎಂಬುದರೆಡೆಗೆ ಈ ಸಮಿತಿಯ ಶಿಕ್ಷಣ ತಜ್ಞರು ಗಮನ ಹರಿಸುವುದಿಲ್ಲ. ತಮ್ಮ ಬುದ್ಧಿಮತ್ತೆಗೆ ಸಮನಾದ ಪಾಠಗಳನ್ನು ಪಠ್ಯ ಪುಸ್ತಕಗಳಲ್ಲಿ ತುರುಕುತ್ತಾರೆ. ಪಠ್ಯಗಳ ಮೇಲೆ ಆಯ್ಕೆ ಸಮಿತಿಗೆ ಗಮನವಿಲ್ಲ; ಬದಲಾಗಿ ಅದನ್ನು ಬರೆದವರು ಯಾರೆಂಬುದರೆಡೆಗೆ ಇವರ ಗಮನ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ವಿದ್ಯಾರ್ಥಿಗಳು ಕನ್ನಡ ಕಲಿಕೆಯಲ್ಲಿ, ಕನ್ನಡ ಭಾಷೆಯಲ್ಲಿ ಮುಂದೆ ಬರುವುದಾದರೂ ಹೇಗೆ? ಮ್ಯಾಡಂ, ಈ ಕುರಿತು ನೀವೊಂದು ಲೇಖನವನ್ನಾದರೂ ಬರೆಯಿರಿ. ನಮ್ಮ ಈ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕ್ಷೇತ್ರ ಕುಲಗೆಟ್ಟು ಹೋಗಿದೆ" ಎಂಬುದು ಈ ಅಧ್ಯಾಪಕರ ಕಳಕಳಿಯ ಮನವಿ.

ನಮ್ಮ ವಿದ್ಯಾರ್ಥಿಗಳಿಗೆ ಸಮನಾಗಿ ತರಬೇತಿ ದೊರೆಯಬೇಕು; ಅವರು ಶಿಕ್ಷಣ ಕ್ಷೇತ್ರದಲ್ಲಿ ಸಮನಾಗಿ ಮುಂದುವರಿಯಬೇಕು ಎಂಬ ಈ ಅಧ್ಯಾಪಕರ ಕಳಕಳಿಯೇ ನನ್ನನ್ನು ಈ ಲೇಖನ ಬರೆಯಲು ಪ್ರೇರೇಪಿಸಿತು. ತಮ್ಮ ವಿದ್ಯಾರ್ಥಿಗಳ ಕುರಿತು ಇಷ್ಟೊಂದು ಆಸಕ್ತಿ ವಹಿಸುವ ಅಧ್ಯಾಪಕರಿರುವಾಗ, ಅವರಿಗೆ ಸಮನಾಗಿ ಪ್ರೋತ್ಸಾಹ ನೀಡಿ, ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಟ್ಟು ಅವರನ್ನು ಸಮನಾಗಿ ದುಡಿಸಿಕೊಂಡರೆ ಮಕ್ಕಳಿಗೆ ಮತ್ತು ಕನ್ನಡ ಭಾಷೆಗೆ ಇಂತಹ ದುಃಸ್ಥಿತಿ ಬರಲಾರದು. ಶಿಕ್ಷಣ ಸಚಿವರು ಹಾಗೂ ಇನ್ನಿತರ ಶಿಕ್ಷಣ ತಜ್ಞರು, ಅಧಿಕಾರಿಗಳು ಈ ಕುರಿತು ಗಮನ ಹರಿಸುವರೇ?

ಒಂದೆರಡು ವರ್ಷಗಳ ಹಿಂದೆ ಕಾನ್ವೆಂಟಿನ ಶಿಕ್ಷಕಿಯೊಬ್ಬರೂ ಶಿಕ್ಷಣದ ಕುರಿತು ಇದೇ ಮಾತನ್ನು ಹೇಳಿದರು. 'ನನ್ನ ಹೆಸರು ಸುಜಾತಾ' ಎಂದು ಕರಿ ಹಲಗೆಯ ಮೇಲೆ ಬರೆ ಎಂದು ಪದವಿ ಪೂರ್ವ ತರಗತಿಯ ವಿದ್ಯಾರ್ಥಿನಿಯೊಬ್ಬಳೊಡನೆ ಹೇಳಿದರೆ ಅವಳಿಗೆ ಬರೆಯಲು ಬರುವುದಿಲ್ಲ! ಅವಳು ಪಬ್ಲಿಕ್ ಪರೀಕ್ಷೆಯಲ್ಲಿ ಹೇಗೆ ತೇರ್ಗಡೆಯಾದಳೆಂಬುದನ್ನು ನೀವೇ ಯೋಚಿಸಿ" ಎಂದರು.


ಮೇಲ್ಜಾತಿಯ ಕೈಯಲ್ಲಿದ್ದ ಶಿಕ್ಷಣ ಕ್ಷೇತ್ರಕ್ಕೆ ಇಂದು ಹಿಂದುಳಿದವರು, ಅಲ್ಪಸಂಖ್ಯಾತರು, ದಲಿತರೂ ಪ್ರವೇಶಿಸಿದ್ದಾರೆ. ಇಂದು ಗದ್ದೆಗಳಲ್ಲಿ, ತೋಟಗಳಲ್ಲಿ ಕೂಲಿ ಕೆಲಸ ಮಾಡಲು ಕೂಲಿಯಾಳುಗಳು ದೊರೆಯದಿರುವುದು ಒಂದೆಡೆಯಾದರೆ, ಮೀಸಲಾತಿ ವಿರೋಧಿಗಳು 'ಅಹಿಂದ'ಗಳು ಶಿಕ್ಷಣದಲ್ಲಿ ಮುಂದುವರಿಯದಂತೆ ಮಾಡುವ ಒಂದು ಹುನ್ನಾರವೂ ಶಿಕ್ಷಣ ಕ್ಷೇತ್ರ ಕುಲಗೆಟ್ಟಿರುವುದರ ಹಿಂದೆ ಅಡಗಿದೆಯೇ? ಕನ್ನಡ ಮಾಧ್ಯಮ ಮಾತ್ರವಲ್ಲ ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳಲ್ಲೂ ಶಿಕ್ಷಣ ಇದಕ್ಕಿಂತ ಉತ್ತಮವಾಗಿಯೇನೂ ಇಲ್ಲವೆನ್ನಲೇಬೇಕಾಗಿದೆ.

ಮುಸ್ಲಿಮರ ಶಿಕ್ಷಣ ಕ್ಷೇತ್ರ ಬೇರೆಯೇ ಸಮಸ್ಯೆಯನ್ನೆದುರಿಸುತ್ತದೆ. ಮುಸ್ಲಿಮರು ಉರ್ದು ಭಾಷೆಗೆ ಆದ್ಯತೆ ನೀಡಲಾರಂಭಿಸಿದ ಬಳಿಕ ಹತ್ತನೇ ತರಗತಿಯವರೆಗೆ ಉರ್ದು ಮಾಧ್ಯಮದಲ್ಲೇ ಶಿಕ್ಷಣ ಪಡೆದ ಕಾರಣ ಪದವಿಪೂರ್ವ ತರಗತಿ ಇವರಿಗೆ ಕಬ್ಬಿಣದ ಕಡಲೆ ಎಂಬಂತಾಯಿತು. ಪದವಿ ಪೂರ್ವ ತರಗತಿಯಲ್ಲಿ ಈ ವಿದ್ಯಾರ್ಥಿಗಳು ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಗಳಲ್ಲೂ ಹಿಂದೆ ಬಿದ್ದು ವಿಜ್ಞಾನವನ್ನು ಕಲಿಯಲು ಸಾಧ್ಯವಾಗುವುದಿಲ್ಲ. ಕೇವಲ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳು ಮಾತ್ರ ಪದವಿಪೂರ್ವ ತರಗತಿಯನ್ನು ದಾಟಲು ಸಾಧ್ಯವಾಗುತ್ತಿದೆ ಎನ್ನಲಾಗಿದೆ.

ವೈದ್ಯಕೀಯ, ತಾಂತ್ರಿಕ ಹಾಗೂ ಇನ್ನಿತರ ನೂರಾರು ಕಾಲೇಜುಗಳಿರುವ ದಕ್ಷಿಣ ಕನ್ನಡದಲ್ಲಿ ಪ್ರಾಥಮಿಕ ಶಿಕ್ಷಣ ಕ್ಷೇತ್ರ ಈ ರೀತಿ ಹದಗೆಟ್ಟಿದ್ದರೆ ಇಂತಹ ವಿದ್ಯಾರ್ಥಿಗಳಿಂದ ಒಂದು ಪದವಿಯನ್ನು ಪಡೆಯುವುದೂ ಕೂಡಾ ಎಷ್ಟೊಂದು ದುಸ್ತರವೆಂಬುದರ ಕುರಿತು ಶಿಕ್ಷಣ ತಜ್ಞರು ಗಮನ ಹರಿಸಬೇಕು. ಅಮೆರಿಕ ಮತ್ತು ಇಂಗ್ಲೆಂಡಿನಂತಹ ದೇಶಗಳು ಪ್ರಾಥಮಿಕ ಶಿಕ್ಷಣಕ್ಕೆ ಎಷ್ಟೊಂದು ಆದ್ಯತೆ ನೀಡುತ್ತಿವೆ ಎಂಬುದರೆಡೆಗೂ ಗಮನ ಹರಿಸುವುದೊಳ್ಳೆಯದು.

● ಸಾರಾ ಅಬೂಬಕ್ಕರ್

ಬಾಬಾಸಾಹೇಬ್ ಅಂಬೇಡ್ಕರರ ಹಾಗೆ ಬೌದ್ಧ ಧರ್ಮದ ಅನುಯಾಯಿಯಾಗಿ ಭಗವಾನ್‌ದಾಸ್‌ರು ತಮ್ಮ ಅರ್ಥಪೂರ್ಣ 83 ವರ್ಷಗಳ ತುಂಬುಜೀವನದಲ್ಲಿ ಕ್ಷಣಕ್ಷಣಕ್ಕೂ ಅಂಬೇಡ್ಕರ್‌ವಾದದ ಪಥದಲ್ಲಿ ಹೆಜ್ಜೆ ಮೇಲೆ ಹೆಜ್ಜೆ ಇಟ್ಟು ನಡೆದರು. ಇಡೀ ವಿಶ್ವದ ಮೂಲೆಮೂಲೆ ಸುತ್ತಿ ಅಲ್ಲೆಲ್ಲ ಅಂಬೇಡ್ಕರರನ್ನು ಪ್ರತಿಷ್ಠಾಪಿಸಲು ಯತ್ನಿಸಿದರು. ಅಂಬೇಡ್ಕರ್‌ರವರು ಬದುಕಿದ್ದಾಗ ಅವರ ಆಪ್ತ ಒಡನಾಡಿಯಾಗಿದ್ದ ಭಗವಾನ್‌ದಾಸ್‌ರು ಆ ಸಂದರ್ಭದಲ್ಲಿ ಗಳಿಸಿದ ಬಾಬಾಸಾಹೇಬರ ಚಿಂತನೆಯ ಸಾರವನ್ನು ಇಡೀ ವಿಶ್ವಕ್ಕೆ ಧಾರೆಯೆರೆಯಲು ತಮ್ಮ ಜೀವನವಿಡೀ ಶ್ರಮಿಸಿದರು.




ಭಗವಾನ್‌ದಾಸ್

ಇನ್ನಿಲ್ಲವಾದ ಶ್ರೇಷ್ಠ ಅಂಬೇಡ್ಕರ್‌ವಾದಿ

ಭಾರತೀಯ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ಕೋಮುವಾದ, ಸಮಾಜವಾದ, ಗಾಂಧಿವಾದ ಇತ್ಯಾದಿ ವಾದ ಅಥವಾ ismಗಳು ಅಸ್ತಿತ್ವದಲ್ಲಿವೆ. ಒಂದರ್ಥದಲ್ಲಿ ಇವೆಲ್ಲಾ ಪಟ್ಟಭದ್ರ ಹಿತಾಸಕ್ತಿಗಳ ಪ್ರತಿನಿಧಿಗಳೇ ಆಗಿವೆ. ಏಕೆಂದರೆ ಮನುವಾದವೆಂಬ ವಿಷಕಾರಿ ಚಿಂತನೆಯತ್ತಲೇ ಗಿರಕಿ ಹೊಡೆಯುವ ಇವುಗಳಿಗೆ ಮಾನವೀಯತೆಯ ನೈಜ ಪ್ರತಿನಿಧಿಗಳಾಗಲು ಸಾಧ್ಯವಾಗಿಲ್ಲ. ಆದರೆ ಇವೆಲ್ಲವುಗಳಿಗೆ ಪರ್ಯಾಯವಾಗಿ ಮೂಡಿಬರುವುದು ಅಂಬೇಡ್ಕರ್‌ವಾದ. ಖಂಡಿತ ಅಂಬೇಡ್ಕರ್‌ವಾದ ಈ ಯುಗದ ಮಾನವೀಯ ತೆಯ ಪ್ರತಿನಿಧಿ. ಸಮಾನತೆ, ಸ್ವಾತಂತ್ರ್ಯ ಸಹೋದರತೆ ಎಂಬ ಬುದ್ಧ ಚಿಂತನೆಗಳಿಂದ ಭರಿತವಾದ ಅದು ಪರ್ಯಾಯವಾಗಿ ಯೋಚಿಸುವವರಿಗೆ ಹೊಸದಿಕ್ಕಿನಂತೆ ಕಾಣುತ್ತದೆ. ದುರಂತವೆಂದರೆ ಅಂತಹ ಹೊಸದಿಕ್ಕಿನ ಪ್ರತಿನಿಧಿಯಾಗಿದ್ದ ಅಂಬೇಡ್ಕರ್‌ವಾದ ವೆಂಬ ನೈಜ ಮಾನವತಾವಾದದ ಮುಖ್ಯ ಪ್ರವರ್ತಕರಾಗಿದ್ದ ವ್ಯಕ್ತಿಯೊಬ್ಬರು ಮೊನ್ನೆ (ನವೆಂಬರ್ 18) ಕಣ್ಮರೆಯಾದರು. ಆ ವ್ಯಕ್ತಿ ಬೇರಾರೂ ಅಲ್ಲ, "ಅಂಬೇಡ್ಕರ್ ಸಿದ್ಧಾಂತದ ನಡೆದ್ಧಾಡುವ ಗ್ರಂಥಾಲಯ" ದಂತಿದ್ದ ಭಗವಾನ್‌ದಾಸ್. ಅಂಬೇಡ್ಕರ್‌ರವರ ಜೀವನ ವಿಧಾನ, ಸಿದ್ಧಾಂತವನ್ನು ಇಡೀ ಜಗತ್ತಿಗೆ ಪರಿಚಯಿಸಲು ತನ್ನ ಜೀವನವನ್ನೇ ಸಮರ್ಪಿಸಿದ ಒಂದು ಅಂಬೇಡ್ಕರ್ ವಾದಿ ಹಣತೆ.

ಭಗವಾನ್‌ದಾಸ್‌ರವರು ಹುಟ್ಟಿದ್ದು ಏಪ್ರಿಲ್ 23, 1923 ರಂದು. ಅಸ್ಪೃಶ್ಯ ಭಂಗಿ ಸಮುದಾಯಕ್ಕೆ ಸೇರಿದ ಇವರು ಬಾಬಾಸಾಹೇಬ್ ಅಂಬೇಡ್ಕರ್‌ರವರ ಸಂಪರ್ಕ ಪಡೆದಾಗ ಅವರಿಗೆ ಕೇವಲ 16 ವರ್ಷ. ಗವರ್ನರ್ ಜನರಲ್‌ರವರ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಕಾರ್ಮಿಕ ಇಲಾಖೆಯ ಉಸ್ತುವಾರಿ ಹೊತ್ತಿದ್ದ ಅಂಬೇಡ್ಕರ್‌ರವರು 1943ರಲ್ಲಿ ಸಿಮ್ಲಾಕ್ಕೆ ಭೇಟಿ ನೀಡಿದಾಗ ಅಂಬೇಡ್ಕರ್‌ರವರೇ ಸ್ಥಾಪಿಸಿದ್ದ 'ಪರಿಶಿಷ್ಟ ಜಾತಿ ಫೆಡರೇಷನ್'ನ ಸದಸ್ಯರಾಗಿ ಭಗವಾನ್‌ದಾಸ್‌ರವರು ಅಂಬೇಡ್ಕರ್‌ರನ್ನು ಭೇಟಿಯಾದರು. ಭಗವಾನ್‌ದಾಸ್‌ರ ಅಂಬೇಡ್ಕರ್‌ವಾದದ ಯಾನ ಬಹುಶಃ ಅಂದೇ ಪ್ರಾರಂಭವಾಯಿತೆಂದು ಹೇಳಬಹುದು. ಏಕೆಂದರೆ ಅಂದಿನಿಂದ ಅಂಬೇಡ್ಕರ್‌ರವರ ಸಾವಿನವರೆಗೆ – ಅಂದರೆ ಸತತ 13 ವರ್ಷಗಳವರೆಗೆ – ಅವರು ಬಾಬಾಸಾಹೇಬರ ಆಪ್ತ ಒಡನಾಡಿಯಾಗಿದ್ದರು. 1955–56 ರಲ್ಲಿ ಅವರು ಅಂಬೇಡ್ಕರರ ಜೊತೆ ಸಂಶೋಧನಾ ಸಹಾಯಕರಾಗಿಯೂ ಕೆಲಸ ಮಾಡಿದ್ದರು.

1943ರಲ್ಲೇ ಮೆಟ್ರಿಕ್ಯುಲೇಷನ್ ಮುಗಿಸಿದ ಭಗವಾನ್‌ದಾಸ್‌ರವರು ಭಾರತೀಯ ವಾಯುಪಡೆಯಲ್ಲಿ ರೇಡಾರ್ ಆಪರೇಟರ್ ಆಗಿ ಕೆಲಸಕ್ಕೆ ಸೇರಿದರು. ಎರಡನೆಯ ಮಹಾಯುದ್ಧದಲ್ಲಿ ಬರ್ಮಾ ಪಡೆಯಲ್ಲಿ ಸೇವೆ ಸಲ್ಲಿಸಿದ ಅವರು ಸ್ವಾತಂತ್ರ್ಯಾನಂತರ ಸಿಮ್ಲಾದಲ್ಲಿ ಮಹಾಲೆಕ್ಕ ಪರಿಶೋಧಕರ (ಸಿಎಜಿ) ಕಚೇರಿಯಲ್ಲಿ ಉದ್ಯೋಗಕ್ಕೆ ಸೇರಿದರು. 1971ರಲ್ಲಿ ಅಂದರೆ ತಮ್ಮ 44ನೇ ವಯಸ್ಸಿನಲ್ಲಿ ಕಠಿಣ ಪ್ರಯತ್ನದಿಂದ ಎಂ.ಎ., ಎಲ್.ಎಲ್.ಬಿ., ಪದವಿ ಪಡೆದ ಅವರು ತಮ್ಮ ಮಹಾಲೆಕ್ಕ ಪರಿಶೋಧಕರ ಕಚೇರಿಯ ಹುದ್ದೆಗೆ ರಾಜೀನಾಮೆ ಇತ್ತು ವಕೀಲಿ ವೃತ್ತಿ ಆರಂಭಿಸಿದರು. ಇದಿಷ್ಟು ಭಗವಾನ್‌ದಾಸ್‌ರವರ ಉದ್ಯೋಗ ಪರ್ವ. ಆದರೆ ಅವರ ಜೀವನದ ನಿಜವಾದ ಉದ್ಯೋಗ? ಖಂಡಿತ ತಮ್ಮ ಈ ಎಲ್ಲಾ ಉದ್ಯೋಗಗಳ ನಡುವೆ ಅವರು ಅವಿರತವಾಗಿ ದುಡಿದದ್ದು "ಅಂಬೇಡ್ಕರ್ ವಾದವೆಂಬ ಮಹಾಸಂಸ್ಥೆ"ಯಲ್ಲಿ! ಎಡೆಬಿಡದೆ ದುಡಿದ ಅವರು ಅಂಬೇಡ್ಕರರ ಜೀವನಸಾಧನೆ, ಮತ್ತವರ ಬರಹಗಳ ಸಂಗ್ರಹಕ್ಕೆ, ಪ್ರಕಟಣೆಗೆ ತಮ್ಮ ಇಡೀ ಜೀವನವನ್ನೇ ಮುಡಿಪಿಟ್ಟರು. ಇದು ಹೇಗೆ ಎಂದರೆ ಅಂಬೇಡ್ಕರ್‌ರವರ ಬರಹಗಳು ಮತ್ತು ಭಾಷಣಗಳನ್ನು ಇಡೀ ಜಗತ್ತಿಗೆ ಮೊಟ್ಟಮೊದಲ ಬಾರಿಗೆ ಪರಿಚಯಿಸಿದ ಕೀರ್ತಿ ಇವರಿಗೇ ಸಲ್ಲುತ್ತದೆ! ಏಕೆಂದರೆ 1979ರಲ್ಲಿ ಮಹಾರಾಷ್ಟ್ರ ಸರ್ಕಾರ ದಿ.ವಸಂತ್‌ಮೂನ್‌ರವರ ನೇತೃತ್ವದಲ್ಲಿ



ಅಂಬೇಡ್ಕರ್‌ರವರ ಬರಹಗಳು ಮತ್ತು ಭಾಷಣಗಳ ಸಂಪುಟಗಳನ್ನು ಪ್ರಕಟಿಸಲು ಪ್ರಾರಂಭಿಸುವುದಕ್ಕೂ ಮೊದಲೇ ಭಗವಾನ್‌ದಾಸ್‌ರವರು 1963ರಲ್ಲೇ 'Thus spoke Ambedkar' (ಅಂಬೇಡ್ಕರ್ ಹೀಗೆ ಹೇಳಿದರು) ಹೆಸರಿನ ಸರಣಿಯಲ್ಲಿ ಅಂಬೇಡ್ಕರರ ಬರಹಗಳು ಮತ್ತು ಭಾಷಣಗಳನ್ನು ಪ್ರಕಟಿಸಿದರು. 1980ರವರೆಗೆ 'Thus spoke Ambedkar'ನ ನಾಲ್ಕು ಬೃಹತ್ ಸಂಪುಟಗಳನ್ನು ಪ್ರಕಟಿಸಿದ ಅವರು ಮುಂದೆ ಮಹಾರಾಷ್ಟ್ರ ಸರ್ಕಾರದ ಆ ಮಹಾಕಾರ್ಯಕ್ಕೆ ಬೆನ್ನೆಲುಬಾಗಿ ನಿಂತರು.

ಈ ನಡುವೆ ಭಗವಾನ್‌ದಾಸ್‌ರವರ ಅದ್ಭುತ ಕೈಗಳಿಂದ ಸುಮಾರು 23 ಕೃತಿಗಳು ಹೊರಬಂದವು. ಅವುಗಳಲ್ಲಿ ಪ್ರಸಿದ್ಧವಾದುದು 'ಮೈ ಭಂಗೀ ಹ್ಯೂಂ' (ನಾನು ಭಂಗಿಯಾಗಿದ್ದೇನೆ) ಎಂಬ ಕೃತಿ. ಅಸ್ಪೃಶ್ಯರು ಕೀಳರಿಮೆಯಿಂದ ಹೊರಬರಬೇಕಾದರೆ ತಮ್ಮ ಜಾತಿಯನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಪ್ರತಿಪಾದಿಸಿದ ಅವರು ಆ ನಿಟ್ಟಿನಲ್ಲೇ ತಮ್ಮ 'ನಾನು ಭಂಗಿಯಾಗಿದ್ದೇನೆ' ಎಂಬ ಆ ಕೃತಿ ರಚಿಸಿದರು. ಒಂದರ್ಥದಲ್ಲಿ ತಮ್ಮ ಜಾತಿಯನ್ನು ಹೇಳಿಕೊಳ್ಳಲು ಹಿಂಜರಿಯುವ ಸ್ವಾಭಿಮಾನರಹಿತ ಅಸ್ಪೃಶ್ಯ ಸಮುದಾಯದ ಕೆಲವರಿಗೆ ಭಗವಾನ್‌ದಾಸರ ಈ ಧೋರಣೆ ಪಾಠದಂತಿತ್ತು.

ಹಾಗೆಯೇ ತಮ್ಮ ಭಂಗಿ ಸಮುದಾಯವನ್ನು 'ವಾಲ್ಮೀಕಿ'ಗಳೆಂದು ಕರೆಯುವುದನ್ನು ಪ್ರಬಲವಾಗಿ ವಿರೋಧಿಸಿದ ಅವರು ಇದು ಭಂಗಿಗಳನ್ನು ಹಿಂದೂಕರಣಗೊಳಿಸುವ ದುಷ್ಟ ಹುನ್ನಾರವೆಂದು ಗುಡುಗಿದರು. (ಅಂದಹಾಗೆ ನಮ್ಮ ರಾಜ್ಯದಲ್ಲಿಯೂ ಕೂಡ ಬೇಡ, ನಾಯಕ ಇತ್ಯಾದಿ ಸಮುದಾಯಗಳನ್ನು ವಾಲ್ಮೀಕಿಗಳೆಂದು ಕರೆಯಲಾಗುತ್ತಿದೆ! ಇದೂ ಕೂಡ ಆ ಸಮುದಾಯಗಳನ್ನು ಹಿಂದೂಕರಣ ಗೊಳಿಸುವ ಪ್ರಯತ್ನವಿರಬಹುದೇ? ಆ ಸಮುದಾಯಗಳ ನಾಯಕರು ಈ ನಿಟ್ಟಿನಲ್ಲಿ ಚಿಂತಿಸಿದರೆ ಒಳಿತು.)

ಹಾಗೆಯೇ ತಮ್ಮನ್ನು ಅಂದರೆ ಅಸ್ಪೃಶ್ಯರನ್ನು 'ದಲಿತ್' (ತುಳಿತಕ್ಕೊಳಗಾದವರು, ದಮನಿತರು) ಎನ್ನುವುದನ್ನು ವಿರೋಧಿಸಿದ ಅವರು ಅಂತಹ ಕೀಳುಪದ ಬಳಸುವುದಕ್ಕಿಂತ 'ಅಸ್ಪೃಶ್ಯರು' ಎನ್ನುವುದೇ ಶ್ರೇಷ್ಠವೆಂದು ಪ್ರತಿಪಾದಿಸಿದರು. ಆ ಮೂಲಕ ಇಡೀ ಜಗತ್ತಿಗೆ ಅಂಬೇಡ್ಕರ್‌ರವರು ಸಾರಿದ ಸ್ವಾಭಿಮಾನದ ನೈಜ ಅರ್ಥವನ್ನು ಬೋಧಿಸಿದರು.

ಅಂಬೇಡ್ಕರರ ಬರಹಗಳು ಮತ್ತು ಭಾಷಣಗಳನ್ನು ಇಡೀ ಜಗತ್ತಿಗೆ ಪರಿಚಯಿಸಿದ ಭಗವಾನ್‌ದಾಸ್‌ರು ಅಷ್ಟಕ್ಕೇ ಸುಮ್ಮನೇ ಕೂರಲಿಲ್ಲ. ಅದನ್ನು ಇಡೀ ವಿಶ್ವಕ್ಕೆ ಪರಿಚಯಿಸುವುದು ಹೇಗೆ ಎಂಬ ದಿಸೆಯಲ್ಲಿ ಚಿಂತಿಸ ತೊಡಗಿದರು. ಈ ನಿಟ್ಟಿನಲ್ಲಿ 1983ರಲ್ಲಿ ಪ್ರಪ್ರಥಮ ಬಾರಿಗೆ ಇಂಗ್ಲೆಂಡಿಗೆ ಭೇಟಿ ನೀಡಿದ ಅವರು ಇಂಗ್ಲೆಂಡಿನಲ್ಲಿ ಅಂಬೇಡ್ಕರ್ ಚಳವಳಿಯ ಪ್ರಚಾರಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡರು. 'ಅಂಬೇಡ್ಕರ್ ಮಿಷನ್ ಸೊಸೈಟಿ'ಯ ಹೆಸರಲ್ಲಿ ಇಂಗ್ಲೆಂಡಿನಲ್ಲಿ ಅಂಬೇಡ್ಕರ್ ವಿಚಾರಧಾರೆಗಳನ್ನು ಜನಪ್ರಿಯಗೊಳಿಸಿದ ಅವರು 'ವಿಶ್ವ ಧಾರ್ಮಿಕ ಮತ್ತು ಶಾಂತಿ ಸಮ್ಮೇಳನ(WCRP)'ದ ಸ್ಥಾಪಕ ಸದಸ್ಯರೂ ಆಗಿದ್ದರು.

ವಿಶ್ವ ಧಾರ್ಮಿಕ ಮತ್ತು ಶಾಂತಿ ಸಮ್ಮೇಳನದ ಬಹುತೇಕ ಸಭೆಗಳಲ್ಲಿ ಶೋಷಿತರ (ಭಗವಾನ್‌ದಾಸ್‌ರ ಪ್ರಕಾರ ಅಸ್ಪೃಶ್ಯರನ್ನು ಹಾಗೆ ಕರೆಯುವುದು ಕೂಡ ತಪ್ಪಾಗಿತ್ತು!) ಏಕೈಕ ಪ್ರತಿನಿಧಿಯಾಗಿ ಪಾಲ್ಗೊಂಡ ಅವರು ಅಸ್ಪೃಶ್ಯರ ಸಮಸ್ಯೆಗಳನ್ನು ಒಂದರ್ಥದಲ್ಲಿ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಚರ್ಚಿಸುವಂತೆ ಮಾಡಲು ಅವಿರತವಾಗಿ ಶ್ರಮಿಸಿದರು.

ಉದಾಹರಣೆಗೆ 1983ರಲ್ಲಿ ವಿಶ್ವಸಂಸ್ಥೆಯ ಮಾನವ ಹಕ್ಕು ಆಯೋಗಕ್ಕೆ ಅಸ್ಪೃಶ್ಯರ ಸಮಸ್ಯೆಗಳ ಬಗ್ಗೆ ಭಿನ್ನವತ್ತಳೆ ಅರ್ಪಿಸಿದ ಅವರು, 1998ರಲ್ಲಿ ಮಲೇಷಿಯಾದ ಕೌಲಾಲಂಪುರದಲ್ಲಿ ನಡೆದ 'ಅಂತರರಾಷ್ಟ್ರೀಯ ದಲಿತ ಸಮ್ಮೇಳನ'ದ ಯಶಸ್ಸಿನಲ್ಲಿ ಬಹುಮುಖ್ಯ ಪಾತ್ರ ವಹಿಸಿದರು. ಮುಂದ ಈ ಸಮ್ಮೇಳನ ದಕ್ಷಿಣ ಆಫ್ರಿಕಾದ ಡರ್ಬಾನ್‌ನಲ್ಲಿ 2001ರ ನಡೆದ 'ಜನಾಂಗವಾದದ ವಿರುದ್ಧದ ವಿಶ್ವ ಸಮಾವೇಶ' ಅಸ್ಪೃಶ್ಯರ ಸಮಸ್ಯೆಗಳನ್ನು ಕೊಂಡೊಯ್ಯುವಲ್ಲಿ ಮಹತ್ತ ಪಾತ್ರ ನಿರ್ವಹಿಸಿದುದು ಈಗ ಇತಿಹಾಸ. ಅಂತೂ ಭಗವಾನ್‌ದಾಸ್‌ರ ಅವಿರತ ಪ್ರಯತ್ನ ದಲಿತರ ಸಮಸ್ಯೆಗಳನ್ ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿತು.

ಈ ನಡುವೆ ಅಸ್ಪೃಶ್ಯರ ಸಮಸ್ಯೆಗಳನ್ನು ಅಂತರ ರಾಷ್ಟ್ರೀಕರಣಗೊಳಿಸಲು ನಿರಂತರ ಶ್ರಮಿಸಿದ ಭಗವಾನ ದಾಸ್‌ರು ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಅಸ್ಪೃಶ್ಯ ಹಾಗೆ ಬದುಕುತ್ತಿದ್ದ ಸಮುದಾಯಗಳಿಗೂ ಕೂಡ ದನಿ ಯಾಗಲು ಯತ್ನಿಸಿದರು. ಈ ದಿಸೆಯಲ್ಲಿ ಜಪಾನ್ ದೇಶದ ಅಸ್ಪೃಶ್ಯ ಸಮುದಾಯವಾದ 'ಬುರಾಕುಮಿನ್' ಸಮುದಾಯ ಮಾರ್ಗದರ್ಶನ ನೀಡಲು ಅಲ್ಲಿಗೆ 3 ಬಾರಿ ಭೇಟಿ ಇತ್ತ ಅವರು ಅಲ್ಲಿಯೂ ಕೂಡ ಅಂಬೇಡ್ಕರನ್ನು ಜನಪ್ರಿಯ ಗೊಳಿಸಿದರು!

ಒಂದಂತೂ ನಿಜ, ಇಂದು ಅಸ್ಪೃಶ್ಯರ ಸಮಸ್ಯೆಗಳ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚಿಸಲ್ಪಡುತ್ತಿದ್ದರೆ, ಒಬಾಮ ಬಾಯಲ್ಲೂ ಅಂಬೇಡ್ಕರ್ ಪದವೇನಾದರೂ ಉಚ್ಚರಿಸಲ್ಪಡು ತ್ತಿದ್ದರೆ ಅದು ಭಗವಾನ್‌ದಾಸ್‌ರ ಶ್ರೇಷ್ಠ ಪ್ರಯತ್ನದ ಫಲವಲ್ಲದೆ ಬೇರೇನಲ್ಲ.


ದುರಂತವೆಂದರೆ ಇಂತಹ ಶ್ರೇಷ್ಠ ಪ್ರಯತ್ನಕ್ಕೆ, ಶ್ರೇಷ್ಠ ವ್ಯಕ್ತಿತ್ವಕ್ಕೆ ಶೋಷಿತ ಸಮುದಾಯ ಸರಿಯಾದ ಗೌರವ ನೀಡಲಿಲ್ಲ. ಕಳೆದ ವರ್ಷವಷ್ಟೆ ಅವರ ಹೆಸರಿನಲ್ಲಿ ಹಿಂದಿ ಪತ್ರಿಕೆಯೊಂದು ವಿಶೇಷ ಸಂಚಿಕೆಯನ್ನು ತಂದದ್ದು ಬಿಟ್ಟರೆ ಅವರಿಗೆ ಸಿಗಬೇಕಾದ ನೈಜ ಗೌರವ ಸಿಗಲೇ ಇಲ್ಲ. ಇನ್ನು "ಮಸಿ ಜೋರಾಗಿ ಕೆಮ್ಮಿದರೂ" ಪದ್ಮ, ರತ್ನ ಇತ್ಯಾದಿ ಪ್ರಶಸ್ತಿಗಳನ್ನು ಮನುವಾದಿಗಳ ಕೊರಳಿಗೆ ಹಾಕುವ ಸರ್ಕಾರಗಳೂ ಕೂಡ ಶ್ರೇಷ್ಠ ಅಂಬೇಡ್ಕರ್‌ವಾದಿ ಭಗವಾನ್‌ದಾಸ್‌ರತ್ತ ತಿರುಗಿಯೂ ಕೂಡ ನೋಡಲಿ ಇಲ್ಲ!

ತಮ್ಮ ಪ್ರತಿಯೊಂದು ಬರಹದ ಕೊನೆಯ ಪುಟದ ಭಗವಾನ್‌ದಾಸ್‌ರು ಬಳಸುತ್ತಿದ್ದ ಕೊನೆಯ ಪದ "ಜೈಭೀಮ್" ಎಂದು. ತಮ್ಮ ಅರ್ಥಪೂರ್ಣ ಅಂಬೇಡ್ಕರ್‌ವಾದಿ ಜೀವನದ ಕೊನೆಯ ಪುಟ ಪೂರೈಸಿರು ಭಗವಾನ್‌ದಾಸ್‌ರಿಗೂ ನಾವು ಅವರ ಆ ಶ್ರೇಷ್ಠ ಕೊನೆಯ ಪದ ಬಳಸುವುದೂ ಸೂಕ್ತವಲ್ಲವೇ?

"ಜೈ ಭೀಮ್" ಭಗವಾನ್‌ದಾಸ್‌ಜೀ...

• ರಘೋತ್ತಮ ಹೊ.ಬ

ಉತ್ತರ



ಬಂದೂಕಿನ ನಳಿಕೆಗೆ
ಹೃದಯವಿಲ್ಲದ ಬಾಯಿ

ಕವಾಯತ್ತಿನ ಬೂಟಿಗೆ
ಜೀವವಿಲ್ಲದ ಸದ್ದು

ಮಿಲ್ಟ್ರಿ ಪೋಷಾಕಿಗೆ
ಕಣ್ಣಿಲ್ಲದ ಹಸಿವು


ಈ ಬೆಳಗಿನಷ್ಟೇ ಖಚಿತವಾಗಿ
ರಕ್ತದೋಕುಳಿ
ಸ್ವರ್ಗದ ಭೂಮಿಯೊಂದಿಗಿದೆ

ಈ ಬೆಳಗಿನಷ್ಟೇ ಖಚಿತವಾಗಿ
ಕಣ್ಣು–ಬಾಯಿ ಆವರಿಸಿರುವ ಕಪ್ಪುಪಟ್ಟಿ
ವಾಕ್‌ಸ್ವಾತಂತ್ರ್ಯದ ಭೂಮಿಯಲ್ಲಿದೆ

ಅದಕ್ಕೆಂದೇ
ಅರವತ್ತು ದಾಟಿದ
ಹಣ್ಣು ಹಣ್ಣು ಮುದುಕಿಯರು
ಕಲ್ಲು ಹಿಡಿದು ಬೀದಿಗೆ ಬಂದಿದ್ದಾರೆ
ಉತ್ತರ ಕೊಡಲು...!

ನೀನು?


• ಬಸೂ



ಬಂ ಇಂಜಿನ್ ಹೋಗಿ, ಲಡಾಸ್ ಬೋಗಿಯಾಯ್ತಲ್ಲ ಹೇಳು!

ಕಾಳಮಾವನ ಎಲ್ಲಾ ನಂಬಿಕೆಗಳೂ ಅಲ್ಲಾಡಿಹೋಗಿದ್ದುವು. ಈ ನಮ್ಮ ಬದುಕಿಗೂ, ದೇವರಿಗೂ ಏನಾದರೂ ಸಂಬಂಧವಿದೆಯೋ ಇಲ್ಲವೋ? ಇರೆಂಬತ್ತು ಕೋಟಿ ಜೀವರಾಶಿಯಲ್ಲಿ ನಾವು ಕೂಡ ಇರುವೆ, ಹೇನು, ಕೂರಿಗೆ ಹುಳುಗಳಂತಹವರೋ, ಇಲ್ಲ ದೇವರಿಗೆ ಸಮೀಪವಾದ ವಿಶೇಷ ಜನಗಳೊ! ಹಾಗಿದ್ದರೆ ತಾನು ಕುಳಿತ ಜಾಗದ ಸಮೀಪದಿಂದಲೇ ಬೀಗರೂಟಕ್ಕೆಂದು ಹೋದವರು, ಮದುವೆ ಹೆಣ್ಣು ಗಂಡಿನ ಸಮೇತ ಅಪಘಾತದಲ್ಲಿ ಸತ್ತೇಹೋಗುತ್ತಾರೆಂದರೆ, ಆ ಕೂಡಲಗಿರಿಯಪ್ಪ ಏನು ಮಾಡುತ್ತಿದ್ದ? ಲಾರಿ ಎದುರಿಗೇ ಬಂದ ಟೆಂಪೋವನ್ನ ಒಂದಿಷ್ಟು ಆ ಕಡೆ ಸರಿಸಲಾಗುತ್ತಿರಲಿಲ್ಲವೇ? ಅಷ್ಟೋತ್ಸಾಹವಾಗಿ ನಡೆದ ಮದುವೆಯ ಹೆಣ್ಣುಗಂಡುಗಳೇ ರಸ್ತೆಮೇಲೆ ಹೆಣವಾದರಲ್ಲಾ?

"ಹಾ ದೇವರೇ, ನಿನ್ನ ಮನಿಯಾಳಾಗ. ನಿನಿಗೇನು ಬಂದಿತ್ತಪ್ಪ?" ಎಂಬ ಉದ್ಗಾರ ಅವನ ಬಾಯಿಯಿಂದ ಹೊರಟಿತು.



"ಯಾವ ದೇವರ ಬೈತಾಯಿದ್ದಿ ಮಾವ?" ಎಂದು ಉಗ್ರಿ.

"ಯಾವ ದೇವರ ಬೋದ್ರು ತಾನೆ ಏನು ಬಂದತ್ಲ ಈಗ? ಯಲ್ಲ ಮುಗದೋಯ್ತು, ಈ ಹಾಳು ರಸ್ತೆ ಬಂದಾಗ್ಲಿಂದ ಸುತ್ತಳ್ಳಿ ಜನ ಹೋಗೇಬುಟ್ರು."

"ಅದ್ಕೆ ಹೋಗದೆ ಒಂದು ರೋಡು, ಬರದೇ ಒಂದು ರೋಡು ಮಾಡ್ತರಂತೆ ಬುಡು. ಆಗ್ಲೆ ಬೆಳ್ಳೂರುಗಂಟ ಬಂದದೆ."

"ಏನು ಬಂದ್ರು ತಾನೆ ಏನ್ಲ? ಇಲ್ಲಿಗಂಟ ಏನು ಮಸಿ ಜನೋದ್ರೆ" ಎಂದಳು ಜುಮ್ಮಿ.

"ಅದೇನು ನಿಲ್ಲದಿಲ್ಲ ಬುಡು. ಮನುಸ ಮಾಡಿಕಂಡಿರದ ಅನುಭವ್ರುಸಲೇಬೇಕು. ಕಾಳಮಾವ ದೇವರನ್ನೇ ಬೈತ ಕುಂತವ್ರುನೆ. ದೇವರು ಬಸ್ಸು, ಲಾರಿ, ಟೆಂಪೋ ಮಾಡಿಕಳಿಸಿದ್ದನೆ? ಮನುಸ ತಾನು ಮಾಡಿಕಂಡಿದ್ದ ತಾನೇ ಅನುಭವಸ್ತನೆ. ಅಷ್ಟಕ್ಕೂ ಬೀಗರೂಟನೆ ಮಾಡಬೇಕು ಅನ್ನದೇನು. ಬಾಡಬಕ್ಕ ನನ್ನ ಮಕ್ಕಳು ಮಾಡಿಕೊಂಡಿರೊ ಆಚರಣೆ ಅದು. ಅದ್ಕೆ ಬಲಿಯಾದ್ರು" ಎಂದು ಉಗ್ರಿ ಹೇಳುತ್ತಿರುವಾಗ ಕಾಳಮಾವನ ದೈವದ ನಂಬಿಕೆ ಮತ್ತೆ ಕೂಡಿಕೊಳ್ಳತೊಡಗಿತು.

"ಅವುರಾಯಸ್ಸು ಇದ್ದಿದ್ದೇ ಆಟುಬುಡು. ಆದ್ರು ಇವುನ್ನೆಲ್ಲ ನೋಡ್ತಾ ಕುಂತಿರಬೇಕಲ್ಲ ಹೇಳು. ಈ ಕೆಟ್ಟ ಜಲ್ಮ ಸಾಕು ಕಂಡ್ಳ."

"ಇದ್ಯಾಕೆ ಮಾವ ಹಿಂಗಂತಿ? ನಿನ್ನ ವಯಸ್ಸಿನ ಬಂಗಾರಪ್ಪನೂ, ದ್ಯಾವೇಗೌಡನೂ ಜ್ವತಿಯಾಗೇ ವಂಟವುರೆ ತಿರುಗ ರಾಜಕಾರಣ ಮಾಡಕ್ಕೆ ಗೊತ್ತೇ?" ಎಂದ ಉಗ್ರಿ.

ಅದಕ್ಕೆ ಕಾಳಮಾವ ತುಟಿಬಿಚ್ಚಲಿಲ್ಲ, ಆದರೆ ಸೀರನಿಗದು ಸೋಜಿಗವೆನಿಸಿತು.

"ಓಹೋಹೋ, ಅಂಗರೆ ಬಾಯಿಗೂಡಿ ಹೋಗಿರೊ. ಎತ್ತು ಜ್ವತಿಯಾದೊ ಅನ್ನು."

"ಅಂಗೆ ಆಯ್ತು ಕಣೊ ಇದು. ಬಾಳ ಹಿಂದೆ ಕಾಳಮಾವ ಇಂತವೇ ಒಂದು ಜ್ವತೆ ಎತ್ತು ಮಡಗಿದ್ದ, ಒಂದುಕೆ ಬಾಲ್ದಲ್ಲಿ ಒಂದು ಕೂದ್ಲೂ ಇರಲಿಲ್ಲ, ಹ್ವಟ್ಟೆ ಅಂಗೆ ನಗ್ಗಾರಿಕಾಯಿದ್ದಂಗಿತ್ತು, ಇನ್ನೊಂದಕೆ ಬಾಲದ ಚವುರಿ ಚೆನ್ನಾಗಿದ್ರು ಒಂದಿಷ್ಟು ಸಿಂಡೆತ್ತದು. ಮೈನೆ ಮುಟ್ಟಸಿಗತ್ತಿರಲಿಲ್ಲ, ಅಲವೆ ಮಾವ?"

"ಅದು ಒಂಟೊಂಟಿ ತಂದು ಜ್ವತೆಹಾಕಿದ್ದೆ ಕಂಡ್ಳ. ಅದೆ ಬ್ಯಾರೆ ಜಾತಿ, ಇದೇ ಬ್ಯಾರೆ ಜಾತಿ. ಒಂದೆತ್ತು ಚೆನ್ನಾಗಿ ವರೆ ಯಳಿಯದು, ಇನ್ನೊಂದು ಅಂತ ವರೆ ಯಳಿಯೊ ಎತ್ತಲ್ಲ, ಅದ್ಕೆ ಬಾರಿ ಛನಗಳ ಕೈ ತಡಾದಿತ್ತು, ಸಲೀಗೆ ಮೈಗಳ್ಳಿತ್ತು, ಅದ್ಕೆ ವರೆನ್ನಲ್ಲ ಈ ಎತ್ತಿನ ಕಡಿಕೆ ನೂಕ್ತ ಯಳಿಯದು. ಯರಡೂ ಬಲಗೋಲೆತ್ತಾದ್ರಿಂದ, ಕ್ಲಸ ತಗೀಬೇಕಾದ್ರೆ ಬಾಳ ಕಷ್ಟಪಟ್ಟೆ" ಎಂದು ಕಾಳಮಾವ ತನ್ನ ಗತಕಾಲದ ಎತ್ತಿನ ಪುರಾಣ ತೆಗೆದ. ಸದರಿ ಪುರಾಣದಿಂದ ಉಗ್ರಿ ಕಣ್ಣು ಮಿನುಗಿದವು.

"ನಿನ್ನೆತ್ತಿನ ಪುರಾಣ ಈ ದ್ಯಾವೇಗೌಡ, ಬಂಗಾರಪ್ಪನ ರಾಜಕಾರಣಕೆ ಬಾಳ ಚೆನ್ನಾಗಿ ಹೋಲಿಕೆ ಆಯ್ತಾ ಅದೆ ಕಣಮಾವ. ನೋಡು, ದ್ಯಾವೇಗೌಡ ವ ಯಳಿಯೋ ಎತ್ತು, ವಟ್ಟೆನು ದಪ್ಪಾಗ್ಯದೆ. ಒಂದು ಕೂದ್ಲೂ ಇಲ್ಲ, ಅದೆ ಬಂಗಾರಿಗೆ ಕೂದ್ಲವೆ, ಮೈಗಳ್ಳ, ಆ ಕಾರಣಕ್ಕೆ ಬಾಳ ಪಾರ್ಟಿ ತಡಾದು ಬಂದು ದ್ಯಾವೇಗೌಡನ ದಡಸೇರಿಕಂಡ. ಅಣೆ ನೋಡಿದ್ರೆ ಇಬ್ರೂ ಒಂದೇ ತರ ರಾಜಕಾರಣ ಮಾಡ್ತವ್ರುರೆ. ಕಡಿತ್ತಗೆ ಒಂದಾದ್ರು."

"ಬಂಗಾರಪ್ಪಾಕ್ಲ ಅಂಗಾಗ್ಯವುನೇ?" ಎಂದಳು ಜುಮ್ಮಿ.

"ಅಂಗಾಗ್ಯವುನೆ ಅಂದ್ರೆ ಏನರ್ಥ? ಆಕಾರನೋ ಇಲ್ಲ ರಾಜಕಾರಣನೊ."

"ಮಗನ ಬೈತನಲ್ಲ ಅದ್ಕೆ."

"ಮಗನ್ನ ಬೈಯದು ಸೀಕ್ರೇಟ್ ಮ್ಯಾಟ್ರು ಕಣಕ್ಕ" ಎಂದು ವಾಟಿಸ್ಲೆ ಬಂದ.

"ನಾನು ನೋಡಿದ್ದಿನಪ್ಪ ಆದ್ರೆ ಇಂತ ಜಗಳ ನೋಡಿಲ್ಲ, ಆ ಎಡೂರಪ್ಪ, ದ್ಯಾವೇಗೌಡ್ರು ಏಟು ಚನ್ನಾಗಿ ಮಕ್ಕಳ ಜ್ವತೆ ಹೊಂದಿಕೊಂಡು ಹೋಯ್ತಾ ಅವ್ರುರೆ."

"ಏನು ಮಾಡ್ತಿಯಕ್ಕ ಬಂಗಾರಪ್ಪನಿಗೆ ವಳ್ಳೆ ಮಗ ಹುಟ್ಟಿರದೇ ಒಂದು ಪ್ರಾಬ್ಲಂ ಆಗ್ಯದೆ. ಅವುನು ಕೆಟ್ಟ ಮಗ ಆಗಿದ್ರೆ ಬಂಗಾರಿ ಜ್ವತೆಲೆ ಇರೋನು."

"ಬಂಗಾರಪ್ಪನ್ನ ಹಾಡಿ ಹೊಗಳಾತಯಿದ್ದೊನು ಈಗವುನ್ನೆ ಬೈತಿಯಲ್ಲ?"

"ಬೈಯದಲ್ಲ ಕಣಕ್ಕ ಟೀಕೆ ಮಾಡ್ತಿನಿ. ಯಾವನೇ ಮನುಸನ್ನ ಕಡೆವರಿಗೂ ಹೊಗಳಕ್ಕಾಗದಿಲ್ಲ, ಬಂಗಾರಪ್ಪನ್ನ ನಾನು ಹೊಗಳತಿದ್ದೆ ಪಾಲೋಯರ್ ಆಗಿದ್ದೆ. ಯಾವತ್ತ ಅವುನು ಕೈಲಿ ಕಮಲ ಹಿಡಕಂಡು ಈಡಿಗರನ್ನೆಲ್ಲ ಚೂಲುಬುಟ್ಟು ಸಾಗರದಲ್ಲಿ ಸಾಬರ ಗುಡಸಲಿಗೆ ಬೆಂಕಿ ಹಾಕಿಸಿದ್ನೊ, ಅವುತ್ತೆ ಅವನ ಸವಾಸ ಬುಟ್ಟೆ."

"ಈಗ ನೋಡು ಯಂಗಾಯ್ತು, ಗತಿಗೆಟ್ಟ ಬಂಗಾರಿ ಗೌಡನ ಮನೆತಕ್ಕೋಗಿ ವಳಿಕೆ ಕರಕತ್ತೀರಾ ಅಂದವುನೆ" ಎಂದು ಉಗ್ರಿ ನಗಾಡಿದ.

"ನನಿಗೆ ಬಾಳ ಫೀಲಾಯ್ತದೆ ಕಣೊ ಉಗ್ರಿ. ಬಂಗಾರಪ್ಪನಂಥೋನು ಕಡಿಗಾಲ್ದಲ್ಲಿ ದ್ಯಾವೇಗೌಡ್ರು ಮನೆತ ಪ್ರಾಣಬುಡದ ನ್ವನಿಸಿಗಂಡ್ರೆ ಫೀಲಾಯ್ತು ಇಟೀಸ್ ವೆರಿ ಬ್ಯಾಡ್ ಕಣೊ ಉಗ್ರಿ."

"ನೀನೇನು ಹೆದರಬ್ಯಾಡ ಸುಮ್ಮನಿರೊ. ಬಂಗಾರಿ ಎಲ್ಲೂ ನಿಲ್ಲೋನಲ್ಲ, ಆ ದ್ಯಾವೇಗೌಡ್ರು ಮನೆ ರಾಜಕಾರಣವ ಅಂಗೇ ನೋಡ್ತನೆ. ದ್ಯಾವೇಗೌಡಾದ ಮ್ಯಾಲೆ ಕುಮಾರಣ್ಣ ಅವುನಾದ ಮ್ಯಾಲೆ ರೇವಣ್ಣ, ಅವುನಾದ ಮ್ಯಾಲೆ ಅನಿತಕ್ಕ, ಈ ಪಂಕ್ತಿ ಲೆಕ್ಕ ಆದಮ್ಯಾಲೆ ಬಂಗಾರಿ ಮಾತಾಡಬೇಕು. ಅದು ಗೊತ್ತಾದ ಕೂಡ್ಲೆ ಈಚೆಗೆ ಬತ್ತನೆ ನೋಡು."



"ಅವುನ್ಯಾಕೆ ಕಾಂಗ್ರೆಸ್ ಬುಟ್ಟುನ್ನ?" ಎಂದಳು ಜುಮ್ಮಿ.

"ಈ ಪ್ರಶ್ನೆಗೆ ಉತ್ತರ ಕೊಡದು ಬಾಳಕಷ್ಟ ಕಣಕ್ಕ. ಈ ನಮ್ಮ ಪುಡಸ್ವಾಮಿಗೊಬ್ಬ ತಿಕ್ಕಲ ಮಗವುನೆ. ಅವುನ್ಯಾವಾಗ ವಲ್ತಕ್ಕೋಯ್ತನೆ, ಯಾಕೆ ಸಂತಿಗೋದ, ಈಸ್ವರನ ಗುಡಿವಳಿಗ್ಯಾಕೋಗಿದ್ದ ಅನ್ನದ ಕಂಡಿಡಿಯಕ್ಕೆ ಇನ್ನೂ ಆಗಿಲ್ಲ, ಅದೇ ತರ ನಮ್ಮ ಬಂಗಾರಿ. ಹನ್ನೆರಡು ಪಕ್ಷ ಹಾರಿ ಕಡಿಗಾಲಕ್ಕೆ ಕಾಲು ಮುರುಕಂಡು ದ್ಯಾವೇಗೌಡನ ಮನೆಬಾಗಿಲಿಗೆ ಬದ್ದ ಅತ್ತಗೆ."

"ಅಂಗರೆ ಕಾಲು ಮುರಕಂಡಿದ್ದನೆ?"

"ಮುರಕಂಡಿಲ್ಲ ಕಣಕ್ಕ, ಗಾಡಿ ಹಳೆದಾಯ್ತು ನೋಡು. ಅದ್ಕೆ ಸ್ವಲುಪ ಯಡಗಡೆ ಟೈರು ಸವುದದೆ. ನ್ಯಡಿವಾಗ ಒಂದಿಷ್ಟು ನನ್ನ ಸ್ಟೈಲಲ್ಲಿ ನ್ಯಡಿತನೆ ಅನ್ನದು ಬುಟ್ರೆ ಸಿಟ್ಟು, ಸ್ಯಡವು, ಆಂಕಾರ, ಟೇಂಕಾರ ಅಂಗೇ ಅವೆ. ಅದೇ ಒಂಥರ ವ್ಯಾಕ್ಯೂಂ ನಮ್ಮ ಬಂಗಾರಿಗೆ."

"ಅವುನು ಕಾಂಗ್ರೆಸ್ ಯಾಕೆ ಬುಟ್ಟ ಅಂದ್ರೆ ಏನೇನೂ ಹೇಳ್ತಿಯಲ್ಲ?"

"ಯಾಕ್ ಬುಟ್ಟ ಅಂದ್ರೆ, ಕಾಂಗ್ರೆಸ್ಸು ಒಂಥರಾ ಬಂಗಾರಪ್ಪನಂಗೆ ಆಗ್ಯದೆ ಕಣಕ್ಕ, ಅದೊಂತರ ಏಜಡ್ ಪಾರ್ಟಿ. ಅಲ್ಲಿಗೆ ಬಂದ್ರೆ ಬಂದ್ರಾ ಅನ್ನೋರಿಲ್ಲ, ಹೋಯ್ತಿನಿ ಅಂದ್ರೆ ಇರಪ್ಪ ಹೋಗಿವೆ. ಅನ್ನೋರಿಲ್ಲ, ಅಂಗಿರುವಾಗ ಈ ಬಂಗಾರಿನ್ಯಾರು ಕೇಳ್ತರಲಿಲ್ಲ, ಅದಕ್ಕಿಂತ್ಲುವೆ ಕಾಂಗ್ರೆಸ್ ಪಾರ್ಟಿಗೆ ಬಂಗಾರಪ್ಪ ಮಾಡಿರೋದಷ್ಟು ಡ್ಯಾಮೇಜ ಯಾರು ಮಾಡಿಲ್ಲ, ಆದ್ರು ಪಾಪ ಇವುನ್ನ ಸೇರಿಸಿಗಂಡು ತ್ವಂದ್ರೆ ಅನುಭವುಸ್ತಲೇ ಅವುರೇ. ನಾನ್ಯಾವತ್ತೂ ಇಂಜನ್ನೇ ವರತು ಬೋಗಿಯಾಗದಿಲ್ಲ ಅಂತಿದ್ದೋನು, ಸಡನ್ನಂತ ಕಾಂಗ್ರೆಸ್ಸಿಗೋದ. ಅಲ್ಲಿ ಕಾಂಗ್ರೆಸ್ ಇಂಜನ್ನಿಗೆ ಇಜ್ಜಲಾಕೋರು ಯರಡು ಮೂರು ಜನ ಇದ್ರು. ಆದ್ರಿಂದ ಈ ಹಳೇ ಗಿರಾಕಿಯ ಯಾರೂ ಮಾತಾಡುಸ್‌ಲಿಲ್ಲ, ಸಿಟ್ಟು ಬಂದು ಈ ಬೋಗಿ ಹೋಗಿ ಆ ವಳೆನರಸೀಪುರದ ಇಜ್ಜಲಗಾಡಿ ಇಂಜನ್ನಿಗೆ ಜನರಲ್ ಕಂಪಾರ್ಟ್‌ಮೆಂಟ್ ಬೋಗಿಯಾಗಿ ಸೇರಿಕತ್ತು, ಅದು ಮೂರುನಾಕು ಬೋಗಿಯಾದ ಮೇಲೆ ಇದರ ಜಾಗ. ಇದಕೇನೇಳನಾ?"

"ಅಂತೂ ಇಂಜಿನ್ ಹೋಗಿ ಲಡಾಸ್‌ಬೋಗಿಯಾಯ್ತು ಅನ್ನು" ಎಂದು ಉಗ್ರಿ ನಕ್ಕ.

"ಊ ಕಣೊ ಉಗ್ರಿ. ಆ ಬೋಗಿ ಯಾವತ್ತು ಕಳಚಿಗಂಡು ಡೆಡ್ಡೆಂಡಲಿ ನಿಂತಗತದೊ ಏನೋ. ಅಂತೂ ಬಂಗಾರಿ ಭಾರಾವತಾರ ಮುಗಿತಾ ಅದೆ."

"ಇಷ್ಟು ವರ್ಷದ ಅವನ ರಾಜಕಾರಣದಲ್ಲಿ ಅವುನು ಬ್ಯಳಿಸಿರೊ ಒಬ್ಬನೇ ಒಬ್ಬ ವಳ್ಳೆ ರಾಜಕಾರಣಿ ಇಲವಲ್ಲ ಹೇಳು."

"ಬಂಗಾರಿ ಕೊಡುಗೆ ಏನಪ್ಪ ಅಂದ್ರೆ ಅವುನ ಮಗ. ಭಾಳ ತೂಕವಾದ ಮನ್ಸ ಕಣೊ. ಬಂಗಾರಪ್ಪನಿಗೆ ಬಂಗಾರದಂತ ಒಂದು ಮಾತೇಳ್ಯವುನೆ."

"ಏನೇಳಿದ್ದನ್ಲ?"

"ಯಂತ ಮಾತಂದವುನೆ ಗೊತ್ತೇನಕ್ಕ? ಈ ವಯಸಿನಲ್ಲಿ ಮೊಮ್ಮಕ್ಕಳ ಜೊತೆ ಆಟ ಆಡಿಕೊಂಡು, ಯುವ ಜನಾಂಗಕ್ಕೆ ಮಾರ್ಗ ತೋರಿಕಂಡು ಮನೇಲಿ ಬದ್ದಿರದು ವಳ್ಳೆದು ಅಂದವುನೆ ಕಣಕ್ಕ."

"ಚನ್ನಾಗೇಳ್ಯವುನೆ ಬುಡು. ತಿಳಕಳೋರಿಗೆ ಅದಕ್ಕಿಂತ ಬೇಕೆ?"


"ಅವುನೆಲ್ಲಿ ತಿಳಕತ್ತನಕ್ಕ? ಎಂ.ಪಿ.ಪ್ರಕಾಶನಂಥೋರು ಇರಕ್ಯಾಗದೆ ಹೋದ ಪಾರ್ಟಿ ಹುಡಿಕ್ಯಂಡೋದ ಅಂದ್ರೆ ರಿಯಲಿ ಪೂಲೀಸ್ ಡಿಸಿಶನ್."

"ಎಂ.ಪಿ.ಪ್ರಕಾಸ್ ಯಂಗವ್ರುರ್ಲ?"

"ಕರಕಂಡು ಬಂದು ಭಾಸಣ ಮಾಡುಸಬೌದು. ಅಷ್ಟು ಚನಾಗ್ಯವುರೆ."

"ಇರ್ಲಿ ಬುಡು!"

'ಕಪ್ಪು ಜನರ ಕೆಂಪು ಕಾವ್ಯ'



ಸ್ವಲ್ಪ ಸುಸ್ತಾಗಿದ್ದುದರಿಂದ ಹಾಸಿಗೆಯಲ್ಲಿ ಒರಗಿ ಪಕ್ಕಕ್ಕೆ ಇದ್ದ ಕಪಾಟಿನ ಪುಸ್ತಕಗಳಲ್ಲಿ ಒಂದನ್ನು ಎಳೆದುಕೊಂಡೆ. ಆ ಪುಸ್ತಕ ಬಹಳ ವರ್ಷಗಳಿಂದ ಅಲ್ಲೇ ಇತ್ತು. ಭಾರತದ ತುರ್ತು ಪರಿಸ್ಥಿತಿ ಮುಗಿಯುತ್ತಿದ್ದಾಗ, ಸ್ನೇಹಲತಾ ರೆಡ್ಡಿ ಜೈಲಿನಿಂದ ಬಿಡುಗಡೆಗೊಂಡ ಕೇವಲ ಹದಿನೈದು ದಿನದಲ್ಲಿ ತೀರಿಕೊಂಡಾಗ, ಬಸವರಾಜ ಎಂಬ ಹುಡುಗನ ಶವ ರೈಲು ಹಳಿಗಳ ಮೇಲೆ ಸಿಕ್ಕು ಎಲ್ಲ ಕ್ರಾಂತಿಕಾರರಿಗೆ 'ಶಾಕ್' ಆದಾಗ ಧಾರವಾಡದ ಕೆಲವರು ಸೇರಿಕೊಂಡು ಪ್ರಕಟಿಸಿದ 'ಕಪ್ಪು ಜನರ ಕೆಂಪು ಕಾವ್ಯ' ಎಂಬ ಪುಟ್ಟ ಪುಸ್ತಕ. ಅದು ಪ್ರಕಟವಾದದ್ದು 1977 ರ ಫೆಬ್ರವರಿ ತಿಂಗಳಲ್ಲಿ, ಅದೇ ವರ್ಷ ಸ್ನೇಹಲತಾ ತಮ್ಮ 44 ನೇ ವಯಸ್ಸಿನಲ್ಲಿ ತೀರಿಕೊಂಡಿದ್ದರು. ಒಂಭತ್ತು ತಿಂಗಳು ಜೈಲಿನಲ್ಲಿದ್ದ ಸ್ನೇಹಲತಾ ಅವರ ಗೂರಲು (ಅಸ್ತಮಾ) ಜಾಸ್ತಿಯಾಯಿತು. ಬಿಡುಗಡೆಯಾದೊಡನೆ ತೀರಿಕೊಂಡರು. ಈ ಟಿಪ್ಪಣಿ ಬರೆಯಲು ಸ್ಪಷ್ಟವಾಗಿ ಮೂರುನಾಲ್ಕು ಕಾರಣಗಳಿವೆ.

1977 ರಲ್ಲಿ ಕ್ರಾಂತಿಕಾರಿ ಕವಿಗಳಿಗೆ ತಿಳಿಯಿತು-ಕಾವ್ಯ ಎಷ್ಟೇ ಪ್ರಯತ್ನಿಸಿದರೂ ಕ್ರಾಂತಿ ಮಾಡುವುದು ಕಷ್ಟ. ಬಸವರಾಜ ಎಂಬ ಮಂಡ್ಯದ ಹುಡುಗನಿದ್ದ; ಒಕ್ಕಲಿಗರ ಹುಡುಗನೀತ; ಸದಾ ಕಷ್ಟದಲ್ಲಿರುತ್ತಿದ್ದ ಈತ ಕ್ರಾಂತಿಕಾರಿ. ವ್ಯವಸ್ಥೆ ಮತ್ತು ಶೋಷಕರ ವಿರುದ್ಧ ಎಲ್ಲೇ ಪ್ರತಿಭಟನೆ, ಧರಣಿ, ಸಭೆ ನಡೆದರೂ ಈತ ಅಲ್ಲಿರುತ್ತಿದ್ದ. ನನಗೆ ತುಂಬ ಹತ್ತಿರದವನು ಈತ. ಇವನು ಬಳಲಿ, ಮೈಯಲ್ಲಿ ಹನಿ ರಕ್ತವಿಲ್ಲದೆ, ಉಣ್ಣಲು ಅನ್ನವಿಲ್ಲದೆ ದಿಕ್ಕೆಟ್ಟು ನನ್ನನ್ನು ನೋಡುತ್ತಿದ್ದಾಗ ನಾನು ಅವನನ್ನು ಕೇಳುತ್ತಿದ್ದುದು 'ಏನಾದರೂ ಕೆಲಸ ಸಿಕ್ತಾ, ಏನಾದರೂ ವ್ಯವಸ್ಥೆ ಮಾಡಿಕೊಂಡಿದ್ದೀಯಾ?' ಎಂದು; ಅವನನ್ನು ಎಂದೂ, 'ಇನ್ನಷ್ಟು ಕ್ರಾಂತಿಕಾರಕವಾಗಿ ಹೋರಾಡು' ಎಂದು ಪ್ರೋತ್ಸಾಹಿಸುತ್ತಿರಲಿಲ್ಲ. ಈ ಅಮಾಯಕ ಬಸವರಾಜ ತುರ್ತು ಪರಿಸ್ಥಿತಿಯಲ್ಲಿ (1975-77 ರಲ್ಲಿ) ಯಾರೋ ಪೊಲೀಸರೊಂದಿಗೆ ಜಗಳ ಆಡಿರಬೇಕು. ಅವನ ಹೆಣ ರೈಲು ಕಂಬಿಗಳ ಮೇಲೆ ಬಿದ್ದಿತ್ತು, ತುರ್ತು ಪರಿಸ್ಥಿತಿ ಮುಗಿದ ಮೇಲೆ ಕೂಡ ಯಾರೂ ಈ ಬಗ್ಗೆ ವಿಚಾರಣೆಯಾಗಬೇಕು ಎಂದು ಒತ್ತಾಯಿಸಲಿಲ್ಲ, ನಾವೆಲ್ಲ ಯಥಾಪ್ರಕಾರ ಭಾಷಣ ಮಾಡಿದೆವು. ಹೇಳಿಕೆ ಕೊಟ್ಟೆವು, ಬಸವರಾಜನನ್ನು ಹೊಗಳಿದೆವು. ಕೋಪ ತೀರಾ ಉಲ್ಬಣಿಸಿದಾಗ ಪದ್ಯ ಬರೆದೆವು!

ಈ ಪುಸ್ತಕ 'ಕಪ್ಪು ಜನರ ಕೆಂಪು ಕಾವ್ಯ' ನೋಡಿ ನನಗೆ ಅನ್ನಿಸಿದ ಇನ್ನೊಂದು ಸಂಗತಿಯೆಂದರೆ, ಸ್ನೇಹಲತಾ ಮರಣ. ಆಗ ತುಂಬ ಕಾಯಿಲೆ-ದೇವರಾಜ ಅರಸು ಆಗಿನ ಮುಖ್ಯಮಂತ್ರಿ. ಅರಸುವಿಗೆ ಬಿಟ್ಟಿದ್ದರೆ ಆಕೆಯನ್ನು ದಸ್ತಗಿರಿ ಮಾಡಿ ಒಂಭತ್ತು ತಿಂಗಳು ಜೈಲಿನಲ್ಲಿ ಇಡುತ್ತಿರಲಿಲ್ಲ, ಆದರೆ ಸ್ನೇಹಲತಾ ಬಗ್ಗೆ ದಿಲ್ಲಿಯಿಂದ ಆಜ್ಞೆ ಬಂದಿತ್ತು, ಆದ್ದರಿಂದ ಆಕೆ ಜೈಲಿನಲ್ಲಿ ನರಳಬೇಕಾಯಿತು. ಇದೆಲ್ಲ ಗೊತ್ತಿಲ್ಲದ ನಾವು ಆಕೆಯ ಬಿಡುಗಡೆಗಾಗಿ ಅಧಿಕಾರಿಗಳು, ರಾಜಕಾರಣಿಗಳನ್ನು ಕಂಡು ಕಾಡುತ್ತಿಸಿದೆವು. ಆಗ ಅರಸು ಅವರ ಆಪ್ತ ಕಾರ್ಯದರ್ಶಿಯಾಗಿದ್ದ ಚಿರಂಜೀವಿ ನನ್ನೊಂದಿಗೆ ನಡೆದುಕೊಂಡು ಅವರ ಮನೆಗೆ ಬಂದದ್ದು ನೆನಪಿದೆ. ಇದೆಲ್ಲದರಿಂದ ಸ್ನೇಹಲತಾ ಅವರಿದ್ದ ಜೈಲಿನ ಕೋಣೆಯ ಪರಿಸ್ಥಿತಿ ಉತ್ತಮಗೊಂಡಿತಂತೆ, ಅಷ್ಟೆ. ಆಗ ದಸ್ತಗಿರಿ ಮಾಡಲು 160 ಜನರ ಪಟ್ಟಿ ಮಾಡಿದ್ದರಂತೆ, ಹಾಗೆಂದು ಯಾರೋ ಹೇಳಿದರು. ಅದರಲ್ಲಿ ನನ್ನ ಹೆಸರು ಇತ್ತಂತೆ. ಆದರೆ ಯಾರೂ ನನ್ನ ತಂಟೆಗೆ ಬರಲಿಲ್ಲ, ಇನ್ನೊಂದು ವಿಷಯ, ಇದನ್ನು ನಾನು ನನ್ನ ಡೈರಿಯಲ್ಲೂ ಕಾಣಿಸಿಲ್ಲವಾದ್ದರಿಂದ ಬರೆಯುತ್ತಿದ್ದೇನೆ; ಆಗ ನಾನು ಡೈರಿ ಇಟ್ಟಿರಲಿಲ್ಲ (ಈಗಲೂ ಯಾವಾಗಾದರೊಮ್ಮೆ ಗೀಚುತ್ತೇನೆ). ನಾನು ಪಟ್ಟಾಭಿರಾಮ ರೆಡ್ಡಿ ಮತ್ತು ಸ್ನೇಹಲತಾ ರೆಡ್ಡಿಯವರ ಮನೆಗೆ ಒಂದು ಸಂಜೆ ಹೋದೆ- ಮನೆ ತೀರಾ ಮೌನವಾಗಿತ್ತು, ಒಳಗೆ ಸ್ನೇಹಲತಾ ಅಸ್ತಮಾದಿಂದ ಕೆಮ್ಮುತ್ತಿದ್ದರು. ನಾನು ಬಂದಿರುವುದಾಗಿ ಹೇಳಿದೆ. ಆದರೂ ಸ್ನೇಹಲತಾರಿಂದ ಪ್ರತಿಕ್ರಿಯೆ ಬರಲಿಲ್ಲ, ನಾನು ಸ್ವಲ್ಪ ಹೊತ್ತು ಇದ್ದು ಮನೆಗೆ ಬಂದೆ-ಮರುದಿನ ಬೆಳಗ್ಗೆಯೇ ಸ್ನೇಹಲತಾ ಸತ್ತಿರುವ ಸುದ್ದಿ ಬಂತು. ನಾನು ಬೆಚ್ಚಿ ಅವರ ಮನೆಯತ್ತ ಓಡಿದೆ.

ಈ ಪುಸ್ತಕ ನೋಡಿದಾಗ ಇನ್ನೊಂದು ನೆನಪು. 'ಕಪ್ಪು ಜನ' ಎನ್ನುವುದು ಶೋಷಣೆಗೊಳಗಾದ ದಲಿತರು, ಹಿಂದುಳಿದವರು, 'ಕೆಂಪು' ಎನ್ನುವುದು ಕೋಪ, ರಕ್ತ ಕ್ರಾಂತಿ-ಇದಕ್ಕೆಲ್ಲ ಸಂಕೇತ. ನಾವೆಲ್ಲ ಲೇಖಕರಾಗಿ ಬೆಳೆದದ್ದು ಈ ವೇಳೆಯಲ್ಲಿ; ಪದ್ಯ ಅಥವಾ ಕತೆ ನೇರವಾಗಿ ಕ್ರಾಂತಿ ಮಾಡಲಾರವು; ಕಪ್ಪು ಶೋಷಿತ ಜನರಿಗೆ ಎಲ್ಲರಿಗಿಂತ ಹೆಚ್ಚಾಗಿ ಪ್ರಜಾಪ್ರಭುತ್ವ, ವಾಕ್ ಸ್ವಾತಂತ್ರ್ಯ, ಪ್ರತಿಭಟನಾ ಸ್ವಾತಂತ್ರ್ಯ ಬೇಕು; ಬುದ್ಧಿಜೀವಿಗಳಿಗಿಂತಲೂ ನೊಂದ ಜನರಿಗೆ ವಾಕ್ ಸ್ವಾತಂತ್ರ್ಯ ಮುಖ್ಯ; ತೀರಾ ಕ್ರಾಂತಿಕಾರರಾಗಿ ಎಗರಾಡುವ ಜನ ಸಮಯ ಸಿಕ್ಕೊಡನೆ ಶೋಷಿಸುವ ಖದೀಮರು ಅಥವಾ ಹುಚ್ಚರು ಆಗುತ್ತಾರೆ; ಮಾತಿನ ಕ್ರಾಂತಿ ನಿಜವಾದ ಕ್ರಾಂತಿಗೆ ದಾರಿ ಮಾಡಿಕೊಡುವ ಬದಲು ಕೆಟ್ಟವರು ಮುಂದೆ ಬರಲು ಸಹಾಯಕವಾಗಿದೆ. ಮನುಷ್ಯ ತ್ಯಾಗ ಮಾಡಿದಷ್ಟೂ ಲಾಭ ನಿರೀಕ್ಷಿಸತೊಡಗುತ್ತಾನೆ-ತುರ್ತು ಪರಿಸ್ಥಿತಿಯಲ್ಲಿ ಜೈಲಲ್ಲಿದ್ದ ಕೆಲವರು ಖದೀಮರು ಈಗ ಏನಾಗಿದ್ದಾರೆ ನೋಡಿ!

ಆಗ ಈ 'ಕಪ್ಪು ಜನರ ಕೆಂಪು ಕಾವ್ಯ' ಪುಸ್ತಕಕ್ಕೆ ಚಿತ್ರ ಬರೆದವರು, ಮುನ್ನುಡಿ ಬರೆದವರು, ರಕ್ತಸಿಕ್ತ ಪದ್ಯ ಬರೆದವರು ಈಗ ಏನಾಗಿದ್ದಾರೆ ಎಂದು ಹೇಳುವುದಿಲ್ಲ, ಅದು ಈಗ ಬೇಡ. ಆ ಪುಸ್ತಕದಲ್ಲಿ ಹಿನ್ನುಡಿ ರೂಪದ ನನ್ನದೊಂದು ಕವನವಿದೆ. ಹೋರಾಡುವುದಕ್ಕೆ ಬದಲು ನಾವೆಲ್ಲ ಕವನ ಬರೆಯುವುದನ್ನು ನೋಡಿ ಬರೆದದ್ದು:


ನಾವು ನೀವು ಹೀಗೆ ಕವನಗಳಲ್ಲಿ
ಕಸರತ್ತು ಮಾಡಲು
ಎಂಥ ತಪ್ಪನ್ನೂ ಮಾಡಿರಲಿಲ್ಲ

ಸುಳ್ಳುಗಳನ್ನು ನಾಚಿಕೆಬಿಟ್ಟು ಹೇಳಿ....
ಗುಟ್ಟಾಗಿ ಹಂಚಿಕೊಂಡು ತಿಂದಿರಲಿಲ್ಲ

ಕೊನೆಗೂ ಕಾವ್ಯದ ಹೆಣ್ಣಿನ ತೊಡೆಯಲ್ಲಿ
ಅವಮಾನದ ಮುಖವನ್ನಿಟ್ಟು
ಅಳಬೇಕಾದ ಸ್ಥಿತಿ ಬಂದೀತೆಂದು
ನಾನಂತೂ ಬಗೆದಿರಲಿಲ್ಲ....

ಈ ಕವನ ಸಂಕಲನ
ಕೆಲವರ ಕಿವಿಯಲ್ಲಾದರೂ
ಜೀವ ಬರಿಸಿದರೆ
ಅಷ್ಟೇ ಸಾಕು....


-ಆಗಸ್ಟ್ 10, 1994



ಮಾಡಾಯಿಕಮ್ಮ ಮಹಾತ್ಮೆ!

ಶತ್ರು ಸಂಹಾರ ಯಾಗ ಮಾಡಲು ನಿರ್ಧರಿಸಿ ಆಗಿತ್ತು. ಇದು ಮೊದಲನೆಯದ್ದಲ್ಲ. ಈ ಹಿಂದೆಯೂ ಇಂತಹ ಯಾಗ ಮಾಡಿದ ಅನುಭವ ಯಡ್ಯೂರಪ್ಪನವರಿಗಿತ್ತು. ತಿರುಚೆಂಡೂರಿನಲ್ಲಿ ಮುರುಗನ ದೇವಸ್ಥಾನದಲ್ಲಿ ಮಾಡಿದ್ದರು. ಮುರುಗನ್ ದೇವರು ತನ್ನ ಭಕ್ತನ ಕಾಣಿಕೆ ಹಣದಿಂದ ತೃಪ್ತನಾಗಿ, ತಾನೇ ಶತ್ರುವನ್ನು ಹುಡುಕಿ ಸಂಹರಿಸಲು ವೀಳ್ಯ ಸ್ವೀಕರಿಸಿದ್ದ ಇಷ್ಟರಿಂದಲೇ ಸಮಾಧಾನ ಪಡುತ್ತಿದ್ದರೋ ಏನೋ. ಯಾರೋ ಹುಳಬಿಟ್ಟ. 'ದೇವೇಗೌಡರ ಫ್ಯಾಮಿಲಿ ಆವಾಗಲೇ ತಿರುಚೆಂಡೂರಿನ ಮುರುಗನ್‌ನನ್ನು ಬುಕ್ ಮಾಡಿ ಬುಟ್ಟವ್ರೆ. ಆಗಲೇ ಅವ್ನು ಅವರ್ಗೆ ಸರೆಂಡರ್ ಆಗವ್ನೆ. ನೀವೇನಿದ್ರೂ ಬೇರೆ ದೇವರ ಹಿಡಿಯೋದು ವಾಸಿ' ಅಂತಾವ. ಯಡ್ಯೂರಪ್ಪನವರಿಗೆ ಕುರ್ಚಿ ಜಾರಿದ ಅನುಭವ ಆಯ್ತು. ಉಗ್ರ

ಅಣಕ



▸ ಎಚ್.ಎಲ್. ಕೇಶವಮೂರ್ತಿ

ದೇವ ದೇವತೆಗಳನ್ನ ಅರಸಲು ಶುರು ಮಾಡಿದರು. ಆಗ ಅವರ ಕಣ್ಣಿಗೆ ಬಿದ್ದೋಳೇ ಕೇರಳದ ಮಾಡಾಯಿಕಮ್ಮ. ಅಪ್ಪನವರು ಗೆಲುವಾದರು. 'ಲೋ, ಗೌಡ, ಮುರುಗನ್ನ ಬುಕ್ ಮಾಡಿದ್ದೀನಿ ಅಂತ ಎಗರಾಡ್ತಿದೀಯ. ನಾನು ಕೇರಳದ ಮಾಡಾಯಿಕಮ್ಮ ಹಿಡೀತೀನಿ' ಅಂತ ತೊಡೆ ತಟ್ಟಿದರು. ತಮಗೆ ಗೆಲುವು ಖಚಿತ ಅಂತಾನೂ ನಂಬಿದ್ರು. ಯಾಕೇಂದ್ರೆ ಕೇರಳದ ಮುಂದೆ ತಮಿಳು ನಾಡಿನೋರು ಮಾಟ ಮಂತ್ರಗಳಲ್ಲಿ ವೀಕಲ್ವ ಅದಕ್ಕೆ. ಆದರೆ ಇಲ್ಲಿ ಒಂದು ಸಮಸ್ಯೆ ಇತ್ತು, ಅದೆಂದರೆ...


ಮಾಡಾಯಿಕಮ್ಮ ಉಗ್ರದೇವತೆ. ಆಕೆಯದ್ದು ಒಂದು ಷರತ್ತು. ಶತೃ ಯಾರು ಎಂಬುದನ್ನು ಭಕ್ತರೇ ವಿವರಿಸಬೇಕು. ಅವರ ಸಂಹಾರ ಆಕೆಯ ಕೆಲಸ. ಇಂತಹವರನ್ನು ಮುಗಿಸು ಅಂದ್ರೆ ಅಂತಹವರನ್ನು ಮುಗಿಸುತ್ತಾಳೆ. ಶತ್ರುವನ್ನು ಕಂಡುಹಿಡಿಯುವ ಕೆಲಸ ಆಕೆಯ ಇಲಾಖೆಗೆ ಸಂಬಂಧಿಸಿದ್ದಲ್ಲ! ಇನ್‌ವೆಸ್ಟಿಗೇಷನ್ ನೀವು ಮಾಡಿ, ನೇಣು ನಾನು ಹಾಕ್ತೀನಿ ಅನ್ನೋದು ಅವಳ ಪಾಲಿಸಿ ಅಂತೆ. ಒಂದು ಚೀಟಿಯಲ್ಲಿ ಅವರ ಹೆಸರು, ವಿಳಾಸ ಬರೆದು ಯಜ್ಞ ಕುಂಡದಲ್ಲಿ ಹಾಕಬೇಕಂತೆ. (ಇಷ್ಟು ಸಾಕು. ಫೋಟೋವನ್ನೇನೂ ಹಾಕಬೇಕಿಲ್ಲ)

ಈ ಷರತ್ತೇ ಯಡ್ಯೂರಪ್ಪನವರಿಗೆ ಪೀಕಲಾಟಕ್ಕೆ ತಂದದ್ದು. ತಮ್ಮ ಶತ್ರುಗಳು ಯಾರು ಎಂಬುದೇ ಅವರಿಗೆ ಗೊಂದಲ ಆಯಿತು. ದೇವೇಗೌಡ, ಕುಮಾರಸ್ವಾಮಿ ಸರಿ. ಅವರು ಆಜನ್ಮ-ಇಪ್ಪತ್ತು ತಿಂಗಳ ವೈರಿಗಳು. ಬಳ್ಳಾರಿ ರೆಡ್ಡಿಗಳು... ಒಂದು ವರ್ಷದಿಂದ ವೈರಿಗಳು. ಜಗದೀಶ ಶೆಟ್ಟರ್... ಸದಾ ತನ್ನ ಕುರ್ಚಿ ಮೇಲೇ ಅವನ ಕಣ್ಣು, ಅವನದ್ದೂ ಇರಲಿ. ಲೋಕಾಯುಕ್ತ ಸಂತೋಷ ಹೆಗ್ಡೆ.... ಕಾಲೆಳೆಯಲು ತುದಿಗಾಲಲ್ಲಿ ನಿಂತವ್ನೆ... ಅವನ್ನೂ ಸೇರಿಸಬಹುದು. ಗಡ್ಕರಿ... ಆ ನನ್ ಮಗ ದುಡ್ಡು ಬಿಟ್ಕೋವರ್ಗೂ ಎಂತೆಂತಹ ಆಟ ಆಡಿಸ್ಬುಟ್ಟ. ಅವನೂ ಇರ್‍ಲಿ. ಅನಂತಕುಮಾರ, ಸುಷ್ಮಾ ಸ್ವರಾಜ್.... ಯಾವತ್ತು ನೆಗೆದು ಬಿದ್ದೋಯ್ತಿನೋ ಅಂತ ಕಾಯ್ತಾ ಕುಂತವ್ರೆ.... ಹಿಂಗೇ ಲೆಕ್ಕ ಹಾಕ್ತ ಕುಂತ್ರೆ ಶತ್ರುಗಳ ಪಾಳೆಯವೇ ಬೀಡು ಬಿಟ್ಟಿರೋ ಹಂಗೆ ಕಾಣ್ತದೆ. ಈ ಎಲ್ಲ ಹೆಸರು, ವಿಳಾಸ ಬರೆದು ಹಾಕಬೇಕು ಅಂದ್ರೆ, ತುಂಬಕ್ಕೆ ಗೋಣಿಚೀಲ ತಂದ್ರೂ ಸಾಲಲ್ಲ. ಹಿಂಗೇ ಯೋಚಿಸ್ತಾ ಯಡ್ಯೂರಪ್ಪನ್ನೋರು ರಾಘವೇಂದ್ರನ್ನ ಪಕ್ಕಕ್ಕೆ ಕರುದ್ರು. ಕಿವೀಲಿ 'ಯಾರ್‍ನ ಅಂತ ಗುರುತಿಸದೋ ಮಗ್ನೆ, ಎಲ್ಲ ಶತ್ರುಗಳ ತರಾನೆ ಕಾಣ್ತಾ ಅವ್ರೆ' ಅಂದ್ರು. ಅವ್ನು 'ಹೂ ಕಣಪ್ಪ' ಅಂದ. 'ಒಂದ್ಕೆಲ್ಸ ಮಾಡು. ಒಸಿ ಹಣ ಹೆಚ್ಚಿ ಆದ್ರೂ ಪರವಾಗಿಲ್ಲ, ಆ ತಾಯೀನೆ ಶತ್ರುಗಳನ್ನು ಹುಡುಕಿ ಸಂಹಾರ ಮಾಡ್ಲಿ, ಹಂಗೆ ಮಾಡು' ಅಂದ್ರು. ಅವ್ನು ಅಗ್ನಿಹೋತ್ರಿಗಳ ಬಳಿಗೆ ಹೋದ. ಹಿಂಗಿಂಗೆ ಅಂದ. ಅವ 'ಏನು ನಕ್ಸಾಟ ಆಡ್ತೀರಾ. ಅದೆಲ್ಲ ಆಗಕಿಲ್ಲ, ಈ ದೇವ್ರು ಖೈಡು ಅಂದ್ರೆ ಖೈಡು. ಇಲ್ಲಿ ಎಲ್ಲ ಕಟ್‌ನಿಟ್ಟು. ಬೇಕಾದ್ರೆ ಮಾಡ್ಸಿ, ಇಲ್ಲ ನಡೀತಾ ಇರಿ' ಅಂದ! ಅಪ್ಪ ಮಗ ಕುಂತು ಯೋಚಿಸಿದ್ರು. ಶತ್ರು ಸಂಹಾರ ಯಾಗನೇ ಕೈಬುಡಾನ ಅಂದ್ರೆ ಆ ಹಾಳು ದೇವೇಗೌಡ ಆಗ್ಲೆ ಮುರುಗನ್ನ ಒಳಕ್ಕಾಕೊಂಡು ಕಾಟ ಕೊಡ್ತ ಅವ್ನೆ. ತಡ ಮಾಡಿದ್ರೆ ಇಲ್ಲಿಗೂ ಬಂದು ಮಾಡಾಯಿಕಮ್ಮನ್ನೂ ಬುಕ್ ಮಾಡಿಕೊಂಡ್ರೂ ಕೊಂಡ್ನೆ. ಅವನಿಗೆ ಮುಂಚೆ ನಾವೇ ಬುಕ್ ಮಾಡಾನ ಅಂತಾವ ತೋಚಿದಷ್ಟು ಚೀಟಿ ಬರ್‍ದು ಅಗ್ನಿಕುಂಡಕ್ಕೆ ಹಾಕಿದ್ರು. ಅಗ್ನಿ ಅದರ ಆಹುತಿ ತಗಂಡು ಧಗಧಗ ಅಂತ ಉರೀಲಾಗಿ ಬಿಸಿ ಬಿಸಿಯಾದಂಗಾಯ್ತು. ಕಣ್ಣು ಬಿಟ್ಟೆ. ಬರೀ ಕನಸು ಅಂದ್ಕಂಡು ರಗ್ಗೆಳೆದು ಮಲಗಿದೆ.

ಒಂದೊಂದು ಸಲ ಕನಸಿನಲ್ಲಿ ಬರೋದೂ ನಿಜವಾಗಿ ಬುಡ್ತದಂತೆ. ಹಂಗೇ ಆಯ್ತೇನೋಪ್ಪ ಬೆಳಗ್ಗೆ ಎದ್ದು ಪತ್ರಿಕೆ ತಗೀತೀನಿ. ಎಂತಹ ಸಿಹಿ ಸುದ್ದಿ ಅಂತೀರಾ....

ಅಂದೇ ರಾಘವೇಂದ್ರ ಅನ್ನೊ ಯಡ್ಯೂರಪ್ಪನ ಹೈದ ಮುಖ್ಯಮಂತ್ರಿಗಳ ವಿವೇಚನಾ ಕೋಟಾ ಅಂತ ಐತಲ್ಲಾ, ಅದ್ರಲ್ಲಿ ನನಗೆ ಮನೆ ಮಠ ಅಂತ ಏನೂ ಇಲ್ಲ, ಬೆಂಗ್ಳೂರಲ್ಲಿ ಒಂದು ಸೈಟ್ ಕೊಡ್ಸಿ ಅಂತ ಕೇಳಿತ್ತಲ್ಲಾ... ಮುಖ್ಯಮಂತ್ರಿಗಳು ಪಾಪ ಈ ಹೈದ ಸಂಸದ ಆಗವ್ನೆ, ಹೋಗೋರು ಬರೋರು ಇದ್ದೇ ಇರ್‍ತಾರೆ ಅಂತಾವ ಬಂಗ್ಲೆ ಸೈಟನ್ನೇ ಕೊಡ್ಸಿದ್ರಲ್ಲಾ... ಆಮೇಲೆ ಅದ್ಯಾವೋ ತಿರುಕ ಬಡ್ಡೆತ್ತವು ಸುಳ್ಳು ಮಾಹಿತಿ ನೀಡಿ ಸೈಟ್ ಹೊಡ್ಕಂಡವ್ನೆ... ಅವ್ನಿಗ್ಗೆ ಸೈಟಿದೆ ಅಂತ ಬೊಂಬ್ಡಾ ಬಜಾಯಿಸಿದ್ರೂ. ಯಡ್ಯೂರಪ್ನೋರು ಅದೆಷ್ಟೋ ವರ್ಷದಿಂದ ರಾಜಕೀಯ ಮಾಡ್ದೋರಲ್ವಾ. ಹಿಂಗೆ ಮಾಡೋದ್ರಲ್ಲಿ ಏನೂ ತಪ್ಪಿಲ್ಲ ಅಂತ ಗೊತ್ತಿತ್ತು. ಅನುಭವಸ್ತರು ನೋಡಿ, ರಾಜಕಾರಣಿ ಅಂದಮೇಲೆ ಎಲ್ಲ ವ್ಯವಹಾರಾನೂ ಒಂದೇ ಮನೇಲಿ ಮಾಡೋಕಾಗೋಲ್ಲ ಇನ್ನೊಂದು ಮನೆ ಅಂತ ಇರ್‍ಲೇ ಬೇಕು ಅಂತಾವ ತಿಳ್ಕಂಡಿದ್ರು. ಅದ್ಕೇ ಇನ್ನೊಂದು ಮನೆ ಮಂಜೂರು ಮಾಡಿದ್ರು. ಈಗ ನೋಡಿದ್ರೆ ಅದೇ ಕುತ್ಗೆಗೆ ಬರೋ ಹಂಗೆ ಕಾಣ್ತೈತ್ತು. ಅದ್ಕೇಯ 'ಅಯ್ಯೋ ಮುಖ್ಯಮಂತ್ರಿ ಅಂತ ಇದ್ರೆ ಇಂತೋವ ಸಾವಿರ ಸೈಟ್ ಬರೀತೀನಿ ಬಿಸಾಕು ಅತ್ಲಾಗಿ' ಅಂದಿರಬೇಕು. ಆ ಹೈದ ಬಿಡಿಎಗೆ ಒಪ್ಪಿಸಿತು. ಆಗ ನೋಡಿ ತೋರಿಸಿದ್ರು ಮಾಡಾಯಿಕಮ್ಮ ತನ್ನ ಕರಾಮತ್ತ. ಹಿಂಗೆ ಸುಳ್ಳು ದಾಖಲೆ ನೀಡಿ ಸೈಟು ಪಡೆದ್ರೆ ಬಿಡಿಎನೋರು ಅವರು ಕಟ್ಟಿದ ಠೇವಣೀನ ಮುಟ್ಟುಗೋಲು ಹಾಕ್ಕೊತಾರಂತೆ... ಈ ಹೈದನೂ ಅದೇ ಕೆಲಸ ಮಾಡಿತ್ತಲ್ವ. ಬಿಡಿಎ ಸಾಹೇಬರುಗಳು 'ಏನಯ್ಯಾ ಏನಯ್ಯಾ ನೀನು.... ಪುಣ್ಯಾತ್ಮ ಕನಪ್ಪ ಸತ್ಯಹರಿಶ್ಚಂದ್ರನಂಗೆ ಸೈಟ್ ಹಿಂದಿರುಗಿಸಿದೀಯಲ್ಲೋ ಕಂದಾ. ತಗೋ ನೀನು ಇಟ್ಟಿರೋ ಠೇವಣೀಯ' ಅಂತ ಒಂಭತ್ತು ಲಕ್ಷ ರೂಪಾಯಿ ಹಿಂದಕ್ಕೆ ಕೊಟ್ಟರಂತೆ! ಇದು ಮಾಡಾಯಿಕಮ್ಮ ಮಹಾತ್ಮೆ ಅಂದ್ರೆ!

'ಬ್ಯಾರೆಯೋರ್‍ಗೂ ಹಿಂಗೇ ಮಾಡಾರಾ' ಅಂದ್ರೆ... ಮಾಡ್ತಾರ್ರೀ... ಮಾಡೇ ಮಾಡ್ತಾರೆ.



ಆ ಮನಸ್ಸು ಬಂದೇ ಬರ್‍ತದೆ. ಕೇರಳಕ್ಕೆ ಹೋಗಿ ಮಾಡಾಯಿಕಮ್ಮನ ಹತ್ತಿರ ಶತ್ರು ಸಂಹಾರ ಯಾಗ ಮಾಡಿ ಬನ್ನಿ.....!

ಪ್ರಚಾರವೇ ಪ್ರಧಾನ!

ಬಡವರ ಮೇಲಿನ ಕರುಣೆ ಅನ್ನೋದು ಯಡ್ಯೂರಪ್ಪನವರಿಂದಲೇ ಹುಟ್ಟಿರಬೇಕು. ಈಗ ಅದು ಯದ್ವಾತದ್ವಾ ಉಕ್ಕಿ ಹರಿಯೋಕೆ ಪ್ರಾರಂಭಿಸಿದೆ. ಧೂರ್ತ ದೇವೇಗೌಡ ಕುಟುಂಬ ಗೋಮಾಳ, ಕೆರೆ ಅಂಗಳ ಅನ್ನೋದನ್ನು ನೋಡದೆ ಒತ್ತುವರಿ ಮಾಡಿಕೊಂಡಿರುವುದನ್ನ ಕಂಡು ನೊಂದಿದ... ಬಡವರಿಗಾಗಿ ಮೀಸಲಿರುವ ಭೂಮಿಯನ್ನು ಈ ... ಮಾಡಬಹುದೆ ಎಂದು ಪರಿತಪಿಸಿದ್ದಾರೆ. ಅದ... ಮುಟ್ಟುಗೋಲು ಹಾಕಿಕೊಂಡು ಬಡವರಿಗೆ ಹಂಚಲ... ವುದೆಂದು ಬಡವರಬಂಧು ಯಡ್ಯೂರಪ್ಪ ಘೋಷಿಸಿದ... ಅಕ್ರಮ ಆಸ್ತಿಯ ಪರಿಶೀಲನೆಗೆ ತಾವೇ ಖು... ಹೋಗುತ್ತಾರಂತೆ. ಇದರ ಪೂರ್ವಭಾವಿಯಾಗಿ ಅಧಿ... ಗಳ ತಂಡವನ್ನು ಬೆಂಗಳೂರಿನಿಂದ ಹೊಳೆನರಸೀ ಪು... ಕಳುಹಿಸಿದ್ದಾರೆ. ಈ ತಂಡದ ಕೆಲಸ ಅಂದರೆ ಅ... ಭೂಮಿಗೆ ಸಂಬಂಧಿಸಿದ ದಾಖಲೆಗಳನ್ನು ... ಶೀಲಿಸುವುದಷ್ಟೇ ಅಂತೆ. ಸ್ಥಳ ಪರೀಕ್ಷೆಯ ಅಧಿ... ಇದಕ್ಕೆ ಇಲ್ಲವಂತೆ! ಅಲ್ಲ, ಮಾಹಿತಿ ತಂತ್ರಜ್ಞಾನದ ಯುಗದಲ್ಲಿಯೂ ದಾಖಲೆ ಸಂಗ್ರಹಿಸಲು ವಿ... ಕಚೇರಿಗಳಿಗೆ ಭೇಟಿ ನೀಡಬೇಕಿತ್ತಾ, ಬೆಂಗಳೂರಿ... ಕುಳಿತೆ ಇದನ್ನು ನಿರ್ವಹಿಸಲಾಗುತ್ತಿರಲಿಲ್ಲವಾ ಎ... ಕೆಲವರಿಗೆ ಅನ್ನಿಸಬಹುದು. 'ಇದು ರಾಜಕೀಯ ಸ... ರಾಜಕೀಯ' ಎಂದು ವಿನಮ್ರವಾಗಿ ಅಂತಹವ... ತಿಳಿಸಲು ಬಯಸುತ್ತೇನೆ. ಇಲ್ಲಿ ವಿಷಯ ಸಂಗ್ರಹ ಗೌ... ಪ್ರಚಾರವೇ ಪ್ರಧಾನ! ಹಾಗೆಯೇ ಯೋಚಿಸಿ ನೋ... ಅಧಿಕಾರಿಗಳ ತಂಡ ಕಳುಹಿಸುತ್ತೇನೆ ಎ... ಮುಖ್ಯಮಂತ್ರಿಗಳು ಹೇಳಿಕೆ ನೀಡಿದಾಗ ಒಂದು ಪ... ಅದು ಹೊರಟಾಗ ಮತ್ತೊಂದು ಪ್ರಚಾರ; ಹ... ತಲಪಿತು ಎಂದಾಗ ಒಂದು ಪ್ರಚಾರ; ದಾಖಲೆ ಪರಿಶೀಲನೆಗೆ ಮಗದೊಂದು ಪ್ರಚಾರ. ... ಹೆಜ್ಜೆಹೆಜ್ಜೆಗೂ ಪ್ರಚಾರವೋ ಪ್ರಚಾರ! ... ಅಗೆದಾಗ ಇಲಿಯೇ ಸಿಕ್ಕಬಹುದು. ಆದರೆ ಅಗೆದದ್ದು ಮುಖ್ಯ ಅಲ್ಲವಾ...

ಒಂದು ವೇಳೆ ಅಕ್ರಮ ನಡೆದೇ ... ಮುಟ್ಟುಗೋಲು ಪವಾಡ ನಡೆದೇ ಹೋಯಿ... ಬಡವರಿಗೆ ಹಂಚುವರೆ ಈ ಭೂಮಿಯ... ಯಡ್ಯೂರಪ್ಪನವರ ಎರಡೂವರೆ ವರ್ಷದ ಆ... ನೋಡಿದ ಮೇಲೂ ಇಂತಹ ಅನುವ... ಬೇಕಿಲ್ಲ, ಮುಖ್ಯಮಂತ್ರಿಗಳದ್ದು ದೊಡ್ಡ ಕುಟು... ಅವರಲ್ಲಿ ಬಡವರಿಗೆ ಕೊರತೆ ಇಲ್ಲ!

ಆಯಿತು. ದೇವೇಗೌಡರ ಕುಟುಂ... ಅಕ್ರಮ ಗಳಿಕೆಯನ್ನು ಮುಟ್ಟುಗೋಲು ... ಕೊಂಡಾಯಿತು. ಇದೇ ರೀತಿ ಯಡ್ಯೂರಪ್ಪ... ಆಸ್ತಿಯನ್ನೂ ತನಿಖಿಸಿ ಅವರ ಅಕ್ರಮ ಆಸ್ತಿಯ... ಮುಟ್ಟುಗೋಲು ಹಾಕಿಕೊಳ್ಳುವರೆ ಎ... ಇದರಲ್ಲಿ ಯಾವುದೇ ಅನುಮಾನ ಬೇಡ. ಅ... ಮಾಡುತ್ತಾರೆ. ಈಗ ದೇವೇಗೌಡ ಕುಟುಂ... ಆಸ್ತಿ ನಂತರ ಪಟೇಲರ ಕುಟುಂಬದ ಆಸ್ತಿ ಆನ... ಎಸ್.ಎಂ. ಕೃಷ್ಣ, ಧರ್ಮಸಿಂಗ್ ಕುಟುಂಬದ ... ತನಿಖೆಯಾಗಿ ಮುಟ್ಟುಗೋಲು ಹಾಕಿಕೊಳ್ತಾರೆ. ... ಅಂದರೆ ಎಲ್ಲ ಸರದಿ ಪ್ರಕಾರ ನಡೀಬೇಕು ... ಅವೆಲ್ಲ ಮುಗಿದ ನಂತರ ಯಡ್ಯೂರಪ್ಪನವರ ಆಸ್ತಿ ... ಅದರದ್ದೂ ತನಿಖೆ ಆಗುತ್ತೆ! ಅಲ್ಲಿಯವರೆವಿಗೂ ... ಬೇಕು ಅಷ್ಟೆ!

ಬಿಜೆಪಿ ಅಧ್ಯಕ್ಷ ಗಡ್ಕರಿ ಬ್ರಾಹ್ಮಣರಲ್ಲ

ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿಯವರ ಮಗನ ಅದ್ದೂರಿ ಮದುವೆಯ ಬಗ್ಗೆ ಬರೆಯುವಾಗ ಗಡ್ಕರಿಯವರು 'ಚಂದ್ರಸೇನೀಯ-ಕಾಯಸ್ಥ-ಪ್ರಭು-ಬ್ರಾಹ್ಮಣ' ಎಂದು ಬರೆಯಲಾಗಿದೆ. ಆದರೆ ಅವರು ಬ್ರಾಹ್ಮಣರಲ್ಲವೇ ಅಲ್ಲ! ಹ್ರಸ್ವವಾಗಿ ಸಿಕೆಪಿಗಳು ಎಂದು ಕರೆಯಲಾಗುವ ಮರಾಠಿ ಭಾಷಿಕ ಚಂದ್ರಸೇನೀಯ ಕಾಯಸ್ಥ ಪ್ರಭುಗಳು ಮೂಲತಃ ಕ್ಷತ್ರೀಯ ಪ್ರವರ್ಗಕ್ಕೆ ಸೇರಿದವರಾಗಿದ್ದಾರೆ. ಇವರೆಲ್ಲಾ ಪಕ್ಕಾ ಮಾಂಸಾಹಾರಿಗಳು. ಇದೇ ಜಾತಿಯವರನ್ನ ಉತ್ತರಪ್ರದೇಶ, ಬಿಹಾರ, ಮಧ್ಯಪ್ರದೇಶ, ಬಂಗಾಳದಲ್ಲಿ ಕೇವಲ 'ಕಾಯಸ್ಥರು' ಎಂದು ಕರೆಯಲಾಗುತ್ತದೆ. ಸ್ವಾಮಿ ವಿವೇಕಾನಂದ, ಲಾಲ್‌ಬಹಾದ್ದೂರ್ ಶಾಸ್ತ್ರಿ ಜ್ಯೋತಿ ಬಸು, ಅಮಾರ್ತ್ಯ ಸೇನ್, ಅಮಿತಾಬ್ ಬಚ್ಚನ್... ಇವರೆಲ್ಲಾ ಕಾಯಸ್ಥರೇ. ಸ್ವಾಮಿ ವಿವೇಕಾನಂದರ ಜೀವನಚರಿತ್ರೆಯಲ್ಲಿ ಕೆಲವೆಡೆ ಅವರನ್ನು ಬೆಂಗಾಲಿ ಕ್ಷತ್ರೀಯ ಎಂದಿದ್ದರೆ, ಕೆಲವೆಡೆ ಅವರನ್ನು ಕಾಯಸ್ಥ ಎಂದಷ್ಟೇ ಬರೆಯಲಾಗಿದೆ. ಇದುವೇ ಕಾಯಸ್ಥರು ಕ್ಷತ್ರೀಯರೆಂಬುದಕ್ಕೆ ಸಾಕ್ಷಿ.

ಕೇವಲ ಆರು ಲಕ್ಷ ಜನಸಂಖ್ಯೆಯಿರುವ ಮರಾಠಿ ಸಿಕೆಪಿಗಳು 100% ಸಾಕ್ಷರತೆ ಇರುವ ನಗರ-ಕೇಂದ್ರಿತ ಜನಾಂಗ ಹಾಗೂ ಆಧುನಿಕ ವಿಚಾರದ ಮುಕ್ತ ಸಮಾಜ. ಮುಂಬೈಯಲ್ಲಿ ನೆಲೆಸಿರುವ ನಮ್ಮ ಕರಾವಳಿಯ ತುಳುವ-ಕನ್ನಡಿಗರು ಹಾಗೂ ಮರಾಠಿ ಭಾಷಿಕರ ನಡುವೆ ನಡೆದ ಅಂತರ್ಜಾತಿ ವಿವಾಹಗಳಲ್ಲಿ 90% ವಧುಗಳು ಸಿಕೆಪಿಗಳು. ಉತ್ತರಭಾರತ/ಬಂಗಾಳದಲ್ಲಿ ಅತಿಹೆಚ್ಚು ಅಂತರ್ಜಾತಿ ವಿವಾಹಗಳು ನಡೆಯುವುದು ಕಾಯಸ್ಥರಲ್ಲೇ. ಜಾತಿ-ಧರ್ಮ ವಿಷಯದಲ್ಲಿ ವಿಶಾಲ ಮನಸ್ಸಿನವರಾಗಿರುವ ಈ ಜಾತಿಯಲ್ಲಿ ಶಿವಸೇನೆಯ ಮತಾಂಧ-ಭಾಷಾಂಧ ಬಾಳ ಠಾಕ್ರೆ ಹುಟ್ಟಿದ್ದು ವಿಪರ್ಯಾಸ!



ನಿತಿನ್ ಗಡ್ಕರಿಯ ಮಗ ಮದುವೆಯಾದ ಹೆಣ್ಣು ಮಾತ್ರ ನಿಜವಾಗಿ ಬ್ರಾಹ್ಮಣ ಜಾತಿ. 'ಪಾಠಕ್' ಎಂದರೆ ವೇದ-ಮಂತ್ರ ಪಠಿಸುವ ವೈದಿಕರು. ಭಾರತದ ಎಲ್ಲಾ ಪತ್ರಿಕೆಗಳಲ್ಲಿ ಗಡ್ಕರಿಯವರು ಬ್ರಾಹ್ಮಣರು ಎಂದು ಪ್ರಚುರಪಡಿಸುವಲ್ಲಿ ಬಿಜೆಪಿ/ಆರೆಸ್ಸೆಸ್ ಗುಪ್ತ ಉದ್ದೇಶ ಅಡಗಿರುವಂತಿದೆ. ಸಣ್ಣ ಜನಸಂಖ್ಯೆಯಿರುವ ಓರ್ವ 'ಬ್ರಾಹ್ಮಣೇತರನು' ಬಿಜೆಪಿ ಪಕ್ಷದ ಅಧ್ಯಕ್ಷ ಎಂದು ಭಾರತದೆಲ್ಲೆಡೆ ಪ್ರಚುರವಾದರೆ ಬಿಜೆಪಿ ಹಾಗೂ ಆರೆಸ್ಸೆಸ್ ಬೆನ್ನೆಲುಬಾದ ಬ್ರಾಹ್ಮಣರಿಗೆ ಈ ಪಕ್ಷದ ಬಗೆಗಿನ ಅಭಿಮಾನ ಕಡಿಮೆಯಾಗಬಹುದು ಎಂಬ ಮನೋವೈಜ್ಞಾನಿಕ ಲೆಕ್ಕಾಚಾರದಿಂದಾಗಿ ಗಡ್ಕರಿಯವರನ್ನು ಬೇಕೆಂದೇ ತಪ್ಪಾಗಿ ಬ್ರಾಹ್ಮಣರು ಎಂದು ಎಲ್ಲಾ ಪತ್ರಿಕೆಗಳಲ್ಲಿ ಸುದ್ದಿ ಪ್ಲಾಂಟ್ ಮಾಡಿರುವಂತಿದೆ.

ಶೂದ್ರ ಶಿವಾಜಿ ಹಾಗೂ ಮರಾಠರ ಆಡಳಿತ ಕಾಲದಲ್ಲಿ ಕಾಯಸ್ಥರು ಆಡಳಿತ ಹಾಗೂ ಸೇನೆಯಲ್ಲಿ ಪ್ರಮುಖ ಸ್ಥಾನ ಹೊಂದಿದ್ದರು. ಆದರೆ ಅಲ್ಲಿಯ ಆಡಳಿತ ಬ್ರಾಹ್ಮಣರಾದ ಪೇಶ್ವೆಗಳ ಕೈಗೆ ಜಾರಿದ ನಂತರ ಕಾಯಸ್ಥರನ್ನು ಬೇಕೆಂದೇ ಆಡಳಿತದಿಂದ ತೆಗೆದುಹಾಕಿ 'ಚಿತ್‌ಪಾವನ್' ಬ್ರಾಹ್ಮಣರನ್ನು ತಂದು ಕೂಡಿಸಿದ್ದರಿಂದ ಮರಾಠಿ-ಬ್ರಾಹ್ಮಣ ಹಾಗೂ ಸಿಕೆಪಿಗಳ ನಡುವೆ ಹುಟ್ಟಿಕೊಂಡ ವೈಮನಸ್ಸು 300 ವರ್ಷಗಳ ನಂತರ ಇಂದಿಗೂ ಮುಂದುವರೆದಿದೆ. ಹಾಗಾಗಿ ಮುಂಬೈಯಲ್ಲಿ 16 ವರ್ಷ ನಾನಿದ್ದಾಗ ಸ್ವತಃ ಕಂಡಿದ್ದು ಯಾರಾದರೂ ಹೊರಗಿನವರು ಸಿಕೆಪಿಗಳನ್ನು ಅಪ್ಪಿತಪ್ಪಿಯೂ 'ನೀವು ಬ್ರಾಹ್ಮಣರೇ?' ಎಂದು ಕೇಳಿದರೆ ಸಾಕು, ಅವರು ಸಿಟ್ಟಿಗೇಳುತ್ತಿದ್ದರು.

-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು

ಹೊಗಳಿಕೆ ತೆಗಳಿಕೆ

'ವಿಜಯ ಕರ್ನಾಟಕ' ಪತ್ರಿಕೆಯ ಸಂಪಾದಕನ ಹುದ್ದೆಯಿಂದ ವಿಶ್ವೇಶ್ವರ ಭಟ್ 'ಡಿಸ್‌ಮಿಸ್' ಆದ ವರದಿ ನೋಡಿ ಸಂತೋಷವಾಯಿತು. ವಿ.ಭಟ್ಟನ ಹಿಂದೂತ್ವವಾದಿ ನಿಲುವು ಈ ರಾಜ್ಯದ ಸೌಹಾರ್ದ ಪರಂಪರೆಯನ್ನು ನಾಶಗೊಳಿಸುವಲ್ಲಿ ಸಾಕಷ್ಟು ಕೊಡುಗೆ ನೀಡಿದೆ ಎಂಬುದು ಸ್ಪಷ್ಟವಾಗಿದೆ.

ಮುಖಪುಟದಲ್ಲಿ ಒಂದಿಷ್ಟು ಹಾಸ್ಯಭರಿತ ಹೆಡ್‌ಲೈನ್‌ಗಳನ್ನು ಬಿಟ್ಟರೆ ಉಳಿದ ಎಲ್ಲಾ ಪುಟಗಳಲ್ಲೂ ಬರೀ ಕೋಮುವಾದವೇ ತುಂಬಿರುತ್ತಿತ್ತು, ಎಷ್ಟರವ... ಅಂದರೆ ಓದುಗರು ಬರೆದ ಪತ್ರಗಳನ್ನು ಪ್ರಕಟಿಸದೆ, ವಿಕದ ಕಚೇರಿಯಲ್ಲೇ ಕ... ಆರೆಸ್ಸೆಸ್ ಚಡ್ಡಿಗಳೇ ಪತ್ರಗಳನ್ನು ರಚಿಸಿ ಪ್ರಕಟಿಸುತ್ತಿದ್ದರು ಎಂಬ ಗುಮಾನಿ ಹುಟ್ಟಿಸುವ... ಆ ಪತ್ರಗಳಲ್ಲಿನ ವಾಕ್ಯ ರಚನಾ ಶೈಲಿ.

ನಿಮ್ಮ ವರದಿಯನ್ನು ಓದಿ ಕೊನೆಗೂ ರಾಜ್ಯದ ನೆಮ್ಮದಿಗೆ ವಿಷವಾಗಿದ್ದ ವಿ... ಅಂತಹ ಪ್ರಮುಖ ಹುದ್ದೆಯಿಂದ ತೊಲಗಿತಲ್ಲ ಎಂದು ನಿಟ್ಟುಸಿರು ಬಿಟ್ಟೆ.

-ಮೊಹಮ್ಮದ್, ಇ-ಮೇಲ್ ಮ...

'ಬೆತ್ತಲಾದ ದೇಶಭಕ್ತ' ಪ್ರತಾಪ ಸಿಂಹ ಅಂಗವಿಕಲೆಯೊಬ್ಬಳನ್ನು ಮದುವೆ ಆಗ... ಎಂಬ ಸುದ್ದಿ ಕೇಳಿ 'ಪರವಾಗಿಲ್ಲ ಈ ಹುಡುಗ' ಅನ್ನಿಸಿತ್ತು. ಆದರೆ ... ಅಂಗವಿಕಲತೆಯನ್ನೇ ಬಂಡವಾಳ ಮಾಡಿಕೊಂಡು ಈ ಪ್ರತಾಪ್ ಮೈಸೂರಿನ ಮೂಡಾದಿಂದ ಸೈಟು ಹೊಡೆದಿದ್ದನ್ನು ಓದಿ ಅಸಹ್ಯ ಉಂಟಾಯಿತು. ತನ್ನ ಬರಹಗಳಲ್ಲಿ ಭಾರೀ ಸಾಚಾನಂತೆ ಪೋಸ್ ಕೊಡುತ್ತಿದ್ದ ಪ್ರತಾಪ ಸಿಂಹನನ್ನು ನಿಮ್ಮ ವರದಿ ಬೆತ್ತಲುಗೊಳಿಸಿದೆ.




ಇದಕ್ಕಿಂತ ಮುಖ್ಯವಾದ ಇನ್ನೊಂದು ಅಂಶವನ್ನು ಇಲ್ಲಿ ಕಾಣಿಸಬೇಕು. ಈ ಪ್ರತಾಪ್ ಸಿಂಹ ಕೇವಲ ಕೋಮುವಾದಿ ಅಲ್ಲ, ಜೊತೆಗೆ ತಾನೊಬ್ಬ ಪೆದ್ದ ಶಿಖಾಮಣಿ ಎಂಬುದನ್ನು ಆತನೇ ಒಂದು ಪತ್ರಿಕೆಗೆ ನೀಡಿದ ಸಂದರ್ಶ... ಜಗಜ್ಜಾಹೀರುಪಡಿಸಿದ್ದಾನೆ. ಇತ್ತೀಚೆಗೆ ತಾನು ಕೈಹಿಡಿದ ಯುವ... ಅಂಗವಿಕಲ ಕಾಲನ್ನು ಪ್ರದರ್ಶಿಸುತ್ತಾ ಪ್ರತಾಪ ಸಿಂಹ ಫೋಟೋ ತೆಗೆಸಿಕೊಂಡಿದ್ದಾ... ಆ ಸಂದರ್ಶನದಲ್ಲಿ ತನ್ನ ಗುರು ವಿಶ್ವೇಶ್ವರ ಭಟ್ಟ ಸೈಟು ಪಡೆಯುವ... 'ಮಾರ್ಗದರ್ಶನ' ನೀಡಿದ್ದನ್ನೂ ಹೇಳಿಕೊಂಡಿದ್ದಾನೆ. ಆ ಮೂಲಕ ತನ್ನನ್ನು ಬೆತ್ತಲಾಗಿಸಿಕೊಂಡಿದ್ದಾನೆ.

-ವಿಜಯಶಂಕರ, ಇ-ಮೇಲ್ ಮ...

ಕನ್ನಡದ ಪ್ರಮುಖ ದಿನಪತ್ರಿಕೆಗೆ ಸಂಪಾದಕರು ಬೇಕಾಗಿದ್ದಾರೆ. ಕೋಮುವಾದಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

-ಶಂಕರ್, ಇ-ಮೇಲ್ ಮ...




ಸೂರಿಯ ಮಾಕಾಳಮ್ಮ ಉಪ್ಪಿಯ ಭಗವದ್ಗೀತೆ...



ಸೂರಿ ಮತ್ತು ಉಪೇಂದ್ರ (ಉರುಫ್ ಉಪ್ಪಿ) ಇತ್ತೀಚೆಗೆ ಕನ್ನಡ ಚಲನ ...ರಂಗದಲ್ಲಿ ಅತಿ ಚಲಾವಣೆಯಲ್ಲಿರುವ ಹೆಸರುಗಳು. ಅದಕ್ಕೆ ಕಾರಣ ಸೂರಿ ...ರ್ದೇಶಿಸಿರುವ 'ಜಾಕಿ' ಮತ್ತು ಉಪ್ಪಿ ನಟಿಸಿ ನಿರ್ದೇಶಿಸಿರುವ 'ಸೂಪರ್' ...ಗಳು ಬಾಕ್ಸ್ ಆಫೀಸ್‌ನಲ್ಲಿ ಕೊಳ್ಳೆ ಹೊಡೆಯುತ್ತಿರುವುದು. ಯಶಸ್ವಿ ಸಿನಿಮಾಕ್ಕೆ ...ಕಾಗುವ ಎಲ್ಲ ಫಾರ್ಮುಲಗಳನ್ನು ಅಳವಡಿಸಿಕೊಂಡಿರುವ ಚಿತ್ರಗಳಿವು.

ಯಾವುದೇ ಒಂದು ಯಶಸ್ವಿ ಚಿತ್ರಕ್ಕೆ (ಅದರಲ್ಲೂ ಜನಪ್ರಿಯ ಚಲನಚಿತ್ರಕ್ಕೆ) ...ಥೆ ಮಾತ್ರ ಮುಖ್ಯವಾಗುವುದಿಲ್ಲ. ಅದಕ್ಕೆ ತಕ್ಕನಾದ ಹಾಡುಗಳು, ...ಛಾಯಾಗ್ರಹಣ ಫೋಟೋಗ್ರಫಿ, ಸಂಭಾಷಣೆ, ನೃತ್ಯ ಸಾಹಸ ದೃಶ್ಯಗಳು, ಸಂಕಲನ ಇತ್ಯಾದಿಗಳು ...ಬೇಕಾದ್ದು ಅತ್ಯವಶ್ಯಕ. ಇವುಗಳ ಮಧ್ಯೆ ಪ್ರೇಕ್ಷಕರ ಮೇಲೆ ನಿಶ್ಯಬ್ಧವಾಗಿ, ...ಪರಿಣಾಮಕಾರಿಯಾಗಿ ಪ್ರಭಾವ ಬೀರುವ ಅನೇಕ ಅಂಶಗಳು ಇರುತ್ತವೆ. ಉದಾಹರಣೆಗೆ, ಚಿತ್ರದ ಹಿನ್ನಲೆಯಲ್ಲಿ/ಮುನ್ನಲೆಯಲ್ಲಿ ಕಾಣುವ ಸಂಕೇತಗಳು, ...ತಿಮೆಗಳು, ಕಲೆಯ ದೃಶ್ಯಗಳು ಇತ್ಯಾದಿ. ಸಂಭಾಷಣೆ, ಕಲೆ ಮತ್ತು ಸಂಕೇತಗಳು ...ಷ್ಟೋ ಸಾರಿ ಜೊತೆಜೊತೆಗೆ ಸಾಗುವಂತವು. ಸಂಪೂರ್ಣವಾಗಿ ಅಲ್ಲದಿದ್ದರೂ, ...ಪ್ರೇಕ್ಷಕರ ಮನಸ್ಸನ್ನು ಒಂದುಕ್ಷಣ ಸೆರೆ ...ಡಿಯುವಲ್ಲಿ ಇವುಗಳ ...ವಶ್ಯಕತೆ ಇದ್ದೇ ಇದೆ. ...ವುಗಳ ಮೂಲಕ ...ಾಗುವ ಕಥೆ ನಮ್ಮ ...ಚಾರಗಳನ್ನು ಮತ್ತು ...ಯೋಚಿಸುವ ಸಾಮರ್ಥ್ಯವನ್ನು ...ಮಗರಿವಿಲ್ಲದಂತೆ ಪ್ರಭಾವಿಸು ...ರುತ್ತದೆ. ಪಾಸಿಟಿವ್ ಆಗಿರಬಹುದು ...ಥವಾ ನೆಗೆಟಿವ್ ಆಗಿರಬಹುದು. ...ಷ್ಟೋ ಸಲ ಈ ಸಂಕೇತಗಳು ಮತ್ತು ...ತಿಮೆಗಳು ಚಿತ್ರಕ್ಕೆ ಪೂರಕವಾಗಿಯೂ ...ಲಸ ಮಾಡುತ್ತವೆ. ಒಂದು ಸಂಕೇತ ...ಥವಾ ಪ್ರತಿಮೆ ನೂರಾರು ಪದಗಳನ್ನು ...ಡಿಯುತ್ತವೆ. ಅಂದರೆ ಪದಗಳಲ್ಲಿ ಹೇಳ ...ಾಗದ್ದನ್ನು ನಾವು ಪರಿಣಾಮಕಾರಿಯಾಗಿ ...ಂಕೇತ ಅಥವಾ ಪ್ರತಿಮೆಗಳ ಮೂಲಕ ...ಭಿವ್ಯಕ್ತಗೊಳಿಸಬಹುದು. ನಮ್ಮ ಭಾವನೆ ...ಗೆ ಮತ್ತು ವಿಚಾರಗಳಿಗೆ ಕೊಂಡಿ ...ಾಗಿ ಇವು ಕಾರ್ಯ ನಿರ್ವಹಿಸುತ್ತವೆ.



'ಜಾಕಿ'ಯ ಸಾರಾಂಶ

'ಜಾಕಿ' ಒಬ್ಬ ತಿರುಕ ...ಹುಡುಗನ ಕಥೆ. ಕೆಳ ಮಧ್ಯಮ ...ರ್ಗದ ಹುಡುಗ, ...ಯಾವಾಗಲು ಪೋಲಿ ...ರುಗುತ್ತಾ, ಇಸ್ಪೀಟ್ ...ಅಡ್ಡೆಗಳಲ್ಲಿ ಕಾಲ ...ಕಳೆಯುವ ಲೋಫರ್. ...ದರೆ ತಾಕತ್ತು ಮತ್ತು ...ದಾರಿಕೆ ಇರುವಂತವನು. ...ಯ ಸ್ನೇಹಿತ ಅವನ ಊರಿನ ...ಪೂಜಾರಿಯ ಮಗಳನ್ನು ಪ್ರೀತಿಸುವ ...ಸಿನಲ್ಲಿ ಕಿಡ್ನ್ಯಾಪ್ ಮಾಡಿ, ...ಂದ ಓಡಿಹೋಗುತ್ತಾನೆ. ಪೂಜಾರಿಗೆ ...ಯ ಮೇಲೆ ಅನುಮಾನ. ಜಾಕಿಯೇ ತನ್ನ ...ಳ ಅಪಹರಣಕ್ಕೆ ಕಾರಣ ಎಂದು ...ಸುತ್ತಾನೆ. ಬೇರೆ ದಾರಿ ಕಾಣದೆ ಅವಳನ್ನು ...ಕ್ಕೆ ಊರಿಗೆ ವಾಪಾಸು ತರುತ್ತೇನೆಂದು ಜಾಕಿ ...ಕೊಡುತ್ತಾನೆ. ಅವಳನ್ನು ಹುಡುಕುವ ...ರ್ಗದಲ್ಲಿ ನಾಯಕಿಯ ...ಚಯವಾಗುತ್ತದೆ. ನಾಯಕನಿಗೆ ಅವಳ ಮೇಲೆ ಮೊದಲ ನೋಟ ದಲ್ಲೆ ಪ್ರೀತಿ ಉಂಟಾಗುತ್ತದೆ. ಆದರೆ ನಂತರ ಅವಳೂ ಕೂಡ ಜಾಕಿಯ ಸ್ನೇಹಿತನಿಂದ ಅಪಹರಣವಾಗುತ್ತಾಳೆ. ಪೂಜಾರಿಯ ಮಗಳು ಮತ್ತು ನಾಯಕಿ ಇಬ್ಬರೂ ಈಗ ಖಳನಾಯಕನ ಕೈಯಲ್ಲಿ ಬಂಧಿಗಳು. ಅವರನ್ನು ಬಾಂಬೆಗೆ ಕಳಿಸಿ ಹಣ ಮಾಡುವ ಯೋಜನೆ ಅವನಿಗೆ. ಜಾಕಿ ಇವನ ವಿರುದ್ಧ ಹೋರಾಡಿ ಅವರಿಬ್ಬರನ್ನು ಯಶಸ್ವಿಯಾಗಿ ರಕ್ಷಿಸುತ್ತಾನೆ. ಚಿತ್ರವು ಸುಖಾಂತ್ಯ ಕಾಣುತ್ತದೆ.

'ಸೂಪರ್' ಸಾರಾಂಶ

ಹತ್ತು ವರ್ಷಗಳ ನಂತರ ಉಪ್ಪಿಯ ನಿರ್ದೇಶನದಲ್ಲಿ ತಯಾರಾದ ಚಿತ್ರ 'ಸೂಪರ್'. ಚಿತ್ರ-ವಿಚಿತ್ರಗಳ ಮೂಲಕ ಚಿತ್ರದ ಕಥೆಯನ್ನು ಹೇಳುವ ಉಪ್ಪಿಯ ಶೈಲಿ ಇದರಲ್ಲೂ ಎದ್ದು ಕಾಣುತ್ತದೆ. ಚಿತ್ರ ಶುರುವಾದಾಗ, ೨೦೩೦ ರ ಭವಿಷ್ಯದ ಕರ್ನಾಟಕ ನಮ್ಮ ಮುಂದೆ ಕಾಣುತ್ತದೆ. ಇಲ್ಲಿ ಎಲ್ಲವು ಉಲ್ಟಾ-ಪಲ್ಟ. ಕರ್ನಾಟಕ ಎಷ್ಟೊಂದು ಪ್ರಗತಿ ಸಾಧಿಸಿದೆ ಅಂದರೆ, ಅದು ಅಮೆರಿಕಾವನ್ನು ಮೀರಿಸಿದೆ. ಅಲ್ಲಿನ ಬಿಳಿಯರು ಈಗ ಭಾರತದ ರೂಪಾಯಿಗೋಸ್ಕರ ಕೆಲಸಕ್ಕೆ ಇರುವ ಕೂಲಿಗಳು. ಇದಕ್ಕೆಲ್ಲಾ ಕಾರಣ ಚಿತ್ರದ ನಾಯಕ. ಹೊರದೇಶದಲ್ಲಿದ್ದು ಆದರ್ಶ ಭಾರತದ ಕನಸು ಕಾಣುವ ನಾಯಕ, ನಾಯಕಿಯ ಸವಾಲಿನಿಂದ ವಿಚಲಿತಗೊಂಡು ಭಾರತದಲ್ಲಿ ಕಾಣುವ ದಾರಿದ್ರ್ಯವನ್ನು ಸುಧಾರಿಸಲು ವಾಪಾಸು ಬರುತ್ತಾನೆ. ಆದರೆ ಇಲ್ಲಿ ಅವನಿಗೆ ತನ್ನ ಆದರ್ಶ ಕೇವಲ ಭ್ರಮೆ ...ಂದು ಅರಿವಾಗುತ್ತದೆ. ಆದರೆ ಒಂದಿಷ್ಟು ನಿರಾಶನಾ...ದೆ, ತನ್ನ ಆದರ್ಶದ ಸಮಾಜವನ್ನು (ಚಿತ್ರದಲ್ಲಿ ಕರ್ನಾಟಕ) ನಿ...ಸಲು ಕೊನೆಗೂ ಯಶಸ್ವಿಯಾಗುತ್ತಾನೆ. ಈ ಮಧ್ಯೆ ನಾಯಕಿಯ ಮನಸ್ಸನ್ನು ಗೆಲ...ಲ್ಲಿ ಕೂಡ ಯಶಸ್ವಿಯಾಗುತ್ತಾನೆ. ಆದರ್ಶ ಸಮಾಜವನ್ನು ಕಟ್ಟುವುದಕ್ಕೋಸ್ಕ...ರಾಜಕೀಯಕ್ಕೆ ಇಳಿದು ಇಡೀ ಕರ್ನಾಟಕವನ್ನು ರಾಜಕಾರಣಿಗಳ ಕಪಿಮುಷ್ಟಿಯಿಂದ...ಡಿಸಿ, ಅಬ (ಕಾಮನ್ ಮ್ಯಾನ್)ಗಳಿಗೆ ರಾಜ್ಯವನ್ನು ಹಂಚುತ್ತಾನೆ.


ವಿವಿಧ ಇತಿಹಾಸಗಳು

'ಸೂಪರ್' ...ತ್ರದ ಆದರ್ಶಮಯ ಜಗತ್ತು ನಾಯಕನ ಕನಸು. ಈ ಕನಸಿಗೆ ಇತಿಹಾಸ...ಕೂಡ ಇದೆ. ಈ ಇತಿಹಾಸ ಭವ್ಯ ಭಾರತದ್ದು. ಆ ಭವ್ಯ ಭಾರತದಲ್ಲಿ ದಾ...ದ್ರ್ಯರು, ಬಡವರು, ದಲಿತರು, ಯಾರಿಗೂ ಸ್ಥಾನ ಇಲ್ಲ. ಅಲ್ಲಿರೋದು ಭ...ಭಾರತವನ್ನು ರೂಪಿಸಿದ ರಾಮ, ಕೃಷ್ಣರು ಮಾತ್ರ. ಕೃಷ್ಣನ ಭಗವದ್ಗೀತೆಯ ...ಲಕ ಈ ಭವ್ಯ ಭಾರತದ ದರ್ಶನ ಆರಂಭಗೊಳ್ಳುತ್ತದೆ. ಆ ಭವ್ಯ ಭಾರತ...ನ್ನ ಹಾಳುಮಾಡಿದ್ದು ಮೊದಲಿಗೆ ಮೊಹಮ್ಮದ್ ಘಜ್ನಿ, ನಂತರ ಬಿಳಿಯ ...ಟಿಷರು (ಮತ್ತಿನ್ಯಾರೂ ಅಲ್ಲ!). ಜೊತೆಗೆ ಬ್ರಿಟಿಷರು ಬಿಟ್ಟುಹೋಗಿದ್ದನ್ನು...ವು ಅನುಕರಿಸುತ್ತಿಲ್ಲವೇ? ಇದು ಮತ್ತೊಂದು ಘೋರ ಸಮಸ್ಯೆ. ಈ ಸಮ...ನ್ನು ಬಗೆಹರಿಸುವದಕ್ಕೆ ಈ ಚಿತ್ರದ ನಾಯಕ ಪಣ ತೊಡುತ್ತಾನೆ. ನಾವು ...ಕ್ಕಂದಿನಲ್ಲಿ ಓದಿದ ಇತಿಹಾಸ ಜ್ಞಾಪಕ ಬರ್ತಿರಬಹುದಲ್ಲವೇ? ಆಗಿನಿಂದಲ... ಇತಿಹಾಸ ಒಂದೇ ತರಹ ಇದೆ! ಆಶ್ಚರ್ಯಪಡಬೇಡಿ. ಸೋಕಾಲ್ಡ್ ಅಬಗಳಿಗೆ ...ಮೊದಲಿಂದಲೂ ಉಣ ಬಡಿಸುತ್ತಿರುವುದು ಇಂತಹ ಇತಿಹಾಸವನ್ನೆ. ಪಾಪ, ...ಪ್ಪಿಯಾದರೂ ಏನು ಮಾಡಿ ಯಾರು? ಆತ ಹುಟ್ಟಿ, ಬೆಳೆದ ಪರಿಸರ, ವಿ...ಗಳು, ಈ ವೈದಿಕ ಭವ್ಯ ಭಾರತ ವನ್ನು ಅಪ್ಪಿ ಮುದ್ದಾಡುತ್ತವೆ. ಚಿತ್ರ... ನಾಯಕ ರಾಜಕಾರಣಿಗಳನ್ನು ಲೇವಡಿ ಮಾಡಿ, ಅವರನ್ನು ನಿರ್ಮೂಲನ...ಾಡು ವುದು (ಈಗಿನ ಕರ್ನಾಟಕದ ಸಂದರ್ಭದಲ್ಲಿ ಉಚಿತವೂ ಕೂಡ) ವೈ... ಭವ್ಯ ಭಾರತವನ್ನು ನಿರ್ಮಾಣ ಮಾಡುವುದಕ್ಕೆ. ಚಿತ್ರದ ಕೊನೆಯಲ್ಲಿ ಹನ...ಂತ, ಕೃಷ್ಣನ ಮೂರ್ತಿಗಳ ಹಿನ್ನಲೆಯಲ್ಲಿ ಕಾಣುವ ಕರ್ನಾಟಕ 2030ರ ಭವ್ಯ...ರ್ನಾಟಕ. ಉಪ್ಪಿಯ ಇತಿಹಾಸದ ರುಚಿ ಇಂತಹದ್ದು!

...ನಾಗರಿಕ' ಜಾಕಿ

ಆದರೆ 'ಜಾಕಿ' ಚಿತ್ರ... ಭೂತ ಕನ್ನಡಿಯಿಟ್ಟುಕೊಂಡು ಹನುಮಂತ, ಕೃಷ್ಣರನ್ನು ಹುಡುಕಬೇಕೇನೋ! ಏಕೆಂದರೆ ಈ ಚಿತ್ರದಲ್ಲಿ ನಮಗೆ ಕಾಣಿಸುವುದು ಮಾಕಾಳಮ್ಮ ಮತ್ತು ಆಕೆ...ನ್ನ ಪೂಜಿಸುವ ಬಡ ಪೂಜಾರಿ. ಪೂಜಾರಿಯ ಪೂಜೆ ವೈದಿಕ ರೀತಿಯ ...ಪ್ರೋಕ್ತವಲ್ಲ, ವೈದಿಕರಿಂದ ಜರಿಯಲ್ಪಟ್ಟ ಮತ್ತು ಅನಾಗರಿಕ ಎಂದು ವರ್ಣಿಸಲ್ಪಟ್ಟ ಶೈಲಿಯದು. ವೈದಿಕರ ವರಮಹಾಲಕ್ಷ್ಮಿ, ಸರಸ್ವತಿ ಇತ್ಯಾದಿ ದೇವತೆಗಳ ಜೊತೆಗೆ ಮಾಕಾಳಮ್ಮ ಕೂಡ ಓರ್ವ ದೇವತೆ ಎಂದು ತೋರಿಸುವ, ಆ ದೇವತೆಗಳ ಜೊತೆಗೆ ಮಾಕಾಳಮ್ಮ ಸಹ ಜೀವಂತ ಇದ್ದಾಳೆ ಎಂದು ತೋರಿಸುವ ತವಕ ಚಿತ್ರದ್ದು.

'ಜಾಕಿ'ಯ ಒಂದು ದೃಶ್ಯದಲ್ಲಿ ನಾಯಕ ತನ್ನ ನಾಯಕಿಯ ಜೊತೆಗೆ ಹೋಗುತ್ತಿರುವಾಗ ರಾಜಕೀಯ ಸಮಾವೇಶಕ್ಕೆ ಹೊರಟ ಕಾರ್ಯಕರ್ತರ ಭೇಟಿ ಆಗುತ್ತದೆ. ಅವರ ಕೈಯಲ್ಲಿ ಹಾರಾಡುವ ನೀಲಿ ಬಾವುಟಗಳು ಅವರ ಸಮಾವೇಶದ ಉತ್ಸಾಹವನ್ನು ಪ್ರದರ್ಶಿಸುತ್ತದೆ. ಚಿತ್ರದಲ್ಲಿ ಕಾಣುವ ಈ ನೀಲಿ ಬಾವುಟಗಳು ಯಾವುದಕ್ಕೆ ಸಂಕೇತ ಎಂದು ಬಿಡಿಸಿ ಹೇಳುವ ಅವಶ್ಯಕತೆ ಇಲ್ಲ, ಒಂದಂತೂ ನಿಜ. ಕೇಸರಿಯ ಬಾವುಟದ (ವೈದಿಕಕ್ಕೆ ಸಂಕೇತವಾಗಿರುವಂತದ್ದು) ಜೊತೆ ಜೊತೆಗೆ ನೀಲಿ ಬಣ್ಣದ ಬಾವುಟಕ್ಕೂ ಸ್ಥಾನ ಕಲ್ಪಿಸಿಕೊಡುವ ಬಯಕೆಯೇನೋ ಎಂಬಂತೆ ಪ್ರೇಕ್ಷಕರಿಗೆ ಗೋಚರಿಸುತ್ತದೆ. ವಿಜೃಂಭಣೆ ಇಲ್ಲದೆ ನಿಶ್ಯಬ್ಧವಾಗಿ ನಮ್ಮ ಗಮನ ಸೆಳೆಯುವ ಸಂಕೇತ ಅದು. ಕಾರ್ಯಕರ್ತರ ಜೊತೆಗೆ ಸೇರಿ, ಇಸ್ಪೀಟ್ ಆಡಿ, ಅವರನ್ನು ಸೋಲಿಸಿ, ಅವರ ಜೊತೆಗೆ ಉಂಡು, ಬೀದಿಯಲ್ಲಿ ಮಲಗುವ ನಾಯಕ ಭಾರತದ ಮತ್ತೊಂದು ವಾಸ್ತವದ ಸಂಕೇತವಾಗಿ ಕಾಣಿಸುತ್ತಾನೆ.



'ವೈದಿಕ'ರ ಯಶಸ್ಸು, ಅವೈದಿಕರ ಕಸರತ್ತು

ಉಪ್ಪಿಯ ನಾಯಕ ದೇಶವನ್ನು ಉದ್ಧಾರ ಮಾಡುವ ಭರದಲ್ಲಿ ಭವ್ಯ ಭಾರತವನ್ನು ಸ್ಥಾಪಿಸುವ ಆತುರತೆ ಪ್ರದರ್ಶಿಸಿದರೆ, ಸೂರಿಯ ನಾಯಕ ವೈಯಕ್ತಿಕ ಸಮಸ್ಯೆಯ ಸುಳಿಯಲ್ಲಿ ಸಿಲುಕಿ, ಅದರಿಂದ ಯಶಸ್ವಿಯಾಗಿ ಹೊರಬರುವುದಲ್ಲಿ ಸಾಕುಸಾಕಾಗಿ ಹೋಗುತ್ತಾನೆ. ಉಪ್ಪಿಯ ನಾಯಕ ಆದರ್ಶಮಯ ಆದರೆ ಸೂರಿಯ ನಾಯಕ ಉಂಡಾಡಿಗುಂಡನ ವ್ಯಕ್ತಿತ್ವದವನು. ದೇಶವನ್ನು ಉದ್ಧಾರ ಮಾಡುವ ಯುಟೋಪಿಯಾದ ಆದರ್ಶ ಅವನಲಿಲ್ಲ.

ಉಪ್ಪಿಯ ಚಿತ್ರ ವೈದಿಕ ಮೂಲದ ಭವ್ಯ ಭಾರತದಿಂದ ಆರಂಭವಾಗಿ ಮತ್ತೆ ಅದನ್ನು ಸ್ಥಾಪಿಸುವುದರ ಮೂಲಕ ಕೊನೆಗೊಳ್ಳುತ್ತದೆ. ಇಂತಹ ಭಾರತದಲ್ಲಿ ನಂಬಿಕೆಯಿರುವ ನಾಯಕನು ಎಲ್ಲರನ್ನೂ ವೈದಿಕ ಪರಿಧಿಗೆ ಎಳೆದುಕೊಳ್ಳುವ ಜಾಯಮಾನದವನು. ಒಳ್ಳೆಯವರು, ಕೆಟ್ಟವರು, ಬೀಡಾಡಿಗಳು, ಕಳ್ಳರು, ಸುಳ್ಳರು, ಭ್ರಷ್ಟಾಚಾರಿಗಳು (ಚಿತ್ರದ ಮೊದಲಿಗೆ ಉಪ್ಪಿಯ ಪರಿಚಯವಾಗುವುದೇ ತಿರುಪೆ ಎತ್ತುವವನ ಮೇಕಪ್‌ನಲ್ಲಿ) ಇತ್ಯಾದಿಗಳು ಈ ಪರಿಧಿಯ ಒಳಗೆ ಸಿಕ್ಕು ಕರಗಬೇಕು. ಆಗಲೇ ಈ ಭವ್ಯ ಭಾರತವನ್ನು ನಾವು ಸಾಕಾರಗೊಳಿಸಿಕೊಳ್ಳಲು ಸಾಧ್ಯ. ಆದರೆ ಇದ್ಯಾವುದೇ ಅಬ್ಬರಗಳಿಲ್ಲದೆ 'ಜಾಕಿ' ವೈಯಕ್ತಿಕ ಮತ್ತು ಒಂದು ಸಮಾಜ-ಕಂಟಕ ಸಮಸ್ಯೆಯನ್ನು (ಹೆಂಗಸಿನ ಶೋಷಣೆ) ಬಗೆಹರಿಸುವುದರ ಮೂಲಕ ಅಂತ್ಯ ಕಾಣುತ್ತದೆ. ಉಪ್ಪಿಯ ನಾಯಕನ ಹಾಗೆ ಭಾರತದ ದುಸ್ಥಿತಿಯ ಬಗ್ಗೆ ಉದ್ದುದ್ದ ಭಾಷಣಗಳನ್ನು ಮಾಡಲು ಅವಕಾಶಗಳಿದ್ದರೂ 'ಜಾಕಿ' ತನ್ನ ಸಮಸ್ಯೆ ಸುಳಿಯಲ್ಲಿ ನಲುಗಿ, ಮಾತನಾಡಲು ಅವ ಕಾಶವಿಲ್ಲದೆ, ವೇಗವಾಗಿ ಜೀವನ ಸಾಗಿಸುವಂತಹ ಪರಿಸ್ಥಿತಿಗಳು ಉಂಟಾಗುತ್ತವೆ.

ಉಪ್ಪಿಯ ಚಿತ್ರದಲ್ಲಿ ಭವ್ಯ ಭಾರತವನ್ನು ಮರುಸ್ಥಾಪಿಸುವುದರ ಅಬ್ಬರದಲ್ಲಿ ಸಂಕೇತಗಳು ವಿಜೃಂಭಿಸಿದರೆ, ಸೂರಿಯ ಚಿತ್ರದಲ್ಲಿ ಅವು ನಿಶ್ಯಬ್ಧವಾಗಿ, ಆದರೂ ಪರಿಣಾಮಕಾರಿಯಾಗಿ ಸಾಗುತ್ತವೆ. ಉಪ್ಪಿಯು ಭಗವದ್ಗೀತೆಯನ್ನು ಪ್ರಜ್ಞಾಪೂರ್ವಕವಾಗಿ ಇಡೀ ಭಾರತದ ಸಂಕೇತ, ಹೆಮ್ಮೆ ಎಂದು ತೋರಿಸುವ ಧೈರ್ಯ (ಮೊಂಡು ಧೈರ್ಯ?) ಮತ್ತು ದೃಢತೆಯನ್ನು ತೋರಿಸಿದರೆ, ಸೂರಿಯ ಮಾಕಾಳಮ್ಮ ಮತ್ತು ನೀಲಿ ಬಾವುಟಗಳು ಸಂಕ್ಷಿಪ್ತವಾಗಿ ಇಣುಕಿ ನೋಡುತ್ತವೆ. ಭಗವದ್ಗೀತೆ ಮುನ್ನಲೆಯಲ್ಲಿ ಉದ್ಘೋಷವಾಗಿ ನುಡಿದರೆ, ನೀಲಿ ಬಾವುಟಗಳು ಹಿನ್ನಲೆಯಲ್ಲಿ ಹಾರಾಡುತ್ತವೆ. ಇವೆರಡು ವಾಸ್ತವಗಳ ನಡುವೆ ಪ್ರೇಕ್ಷಕ ತೂಗಾಡುತ್ತಾನೆ.

ಈಗ ಈ ಎರಡೂ ಚಿತ್ರಗಳನ್ನು ಪ್ರೇಕ್ಷಕರು ಗೆಲ್ಲಿಸಿದ್ದಾರೆ. ಆದರೆ ಗೆದ್ದ ಸಂಕೇತ ಯಾವುದು? ಈ ಪ್ರಶ್ನೆಗೆ ಉತ್ತರ ಸಿಗುವುದೆಂದು?

– ವಿಜಯಕುಮಾರ್ ಎಂ. ಬೋರಟ್ಟಿ, ಮೈಸೂರು

ಇದು ಎಂಥಾ ಜಾಲವಯ್ಯ....



ಅಂತರ್ಜಾಲ ತಾಣಗಳಾದ ಫೇಸ್ ಬುಕ್, ಆರ್ಕುಟ್ ಮತ್ತು ಟ್ವಿಟ್ಟರ್‌ಗಳಲ್ಲಿ ನಕಲಿ ಸ್ಟಾರ್‌ಗಳ ಹಾವಳಿ ಹೆಚ್ಚಾಗಿದೆ. ಇತ್ತೀಚೆಗೆ ಟ್ವಿಟ್ಟರಿನಲ್ಲಿ ಪುನೀತ್ ರಾಜ್‌ಕುಮಾರ್ ಹೆಸರಿನಲ್ಲಿ "ರಿಯಲ್ ಸ್ಟಾರ್ ಉಪೇಂದ್ರ ರಾಜಕೀಯಕ್ಕೆ ಬರಲೇಬೇಕು" ಎಂದು ಕರೆ ನೀಡಲಾಗಿತ್ತು. ರಾಜಕಾರಣದಿಂದ ಆದಷ್ಟು ದೂರವೇ ಇರಲು ಪ್ರಯತ್ನಿಸುವ ರಾಜ್ ಕುಟುಂಬದ ಸ್ಟಾರ್ ನಟ ಪುನೀತ್ ಇಂತಹ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದು ಎಲ್ಲರಲ್ಲೂ ಅಚ್ಚರಿ ಮೂಡಿಸಿತ್ತು. ಆದರೆ "ಇಂತಹ ಹೇಳಿಕೆ ನೀಡಿದ್ದು ನಾನಲ್ಲ. ನನ್ನ ಹೆಸರಿನಲ್ಲಿ ಯಾರೋ ಬೇರೆ ನಕಲಿ ಖಾತೆಯನ್ನು ತೆರೆದು ಅಭಿಮಾನಿಗಳನ್ನು ಮೋಸ ಮಾಡುತ್ತಿದ್ದಾರೆ" ಎಂದು ಪುನೀತ್ ಸ್ಪಷ್ಟಪಡಿಸಿದರು.



ವಿಚಿತ್ರವೆಂದರೆ ಪುನೀತ್ ಹೆಸರಿನಲ್ಲಿರುವ ಈ ನಕಲಿ ಖಾತೆಯನ್ನು ನಾನೂರೈವತ್ತಕ್ಕೂ ಹೆಚ್ಚು 'ನೆಟ್ಟಾಭಿಮಾನಿಗಳು' ಫಾಲೋ ಮಾಡುತ್ತಿದ್ದಾರೆ. ಸ್ವತಃ ಪುನೀತ್ ತಮಗೆ ಟ್ವೀಟ್ ಮಾಡುತ್ತಿದ್ದಾರೆ ಎಂದೇ ಅವರೆಲ್ಲ ನಂಬಿದ್ದಾರೆ. ಹಾಗೆಯೇ ಫೇಸ್‌ಬುಕ್‌ನಲ್ಲಿ ಯಾರೋ ಖಾತೆಯೊಂದನ್ನು ತೆರೆದು ಸುದೀಪ್ ಬಗ್ಗೆ ಇಲ್ಲಸಲ್ಲದ ಮಾಹಿತಿಗಳನ್ನು ನೀಡುತ್ತಿದ್ದಾರೆ. ಮಾತ್ರವಲ್ಲ ಸುದೀಪ್ ಘನತೆಗೆ ತಕ್ಕುದಲ್ಲದ ಸಂದೇಶಗಳನ್ನು ರವಾನಿಸುತ್ತಿರುತ್ತಾರೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಸುದೀಪ್, ತನ್ನ ಒರಿಜಿನಲ್ ಖಾತೆಯಾಗಿರುವ **kicchasudeep**ನಲ್ಲಿ 'ಕ್ಲಬ್‌ಫೋರ್ಸ್ ನಕಲಿ ಖಾತೆ, ನನ್ನದಲ್ಲ' ಎಂದು ಘೋಷಿಸಿದ್ದಾರೆ.



ಈ ಹಿಂದೆ ನಟಿ ಅಮೂಲ್ಯಳ ಹೆಸರಿನಲ್ಲಿ ಇಂಟರ್‌ನೆಟ್‌ನಲ್ಲಿ ಅಕೌಂಟ್ ತೆರೆದ ಕಿಡಿಗೇಡಿಗಳು ಆಕೆಯ ಹೆಸರಿನಲ್ಲಿ ಸಾವಿರಾರು ಜನರಿಗೆ ಮೆಸೇಜು ಕಳುಹಿಸಿ ಪಾಪದ ಹುಡುಗರನ್ನು ಯಾಮಾರಿಸಿದ್ದರು. ಹೇಳಿಕೇಳಿ ಚಿತ್ರನಟಿಯರೆಂದರೆ ಮುಗಿಬೀಳುವ ನೂರಾರು ಜನ ಹುಡುಗರು ಸ್ವತಃ ಅಮೂಲ್ಯಳೇ ತಮ್ಮೊಂದಿಗೆ ಹರಟುತ್ತಿದ್ದಾಳೆ ಎಂದು ಭಾವಿಸಿ ರೋಮಾಂಚನಗೊಂಡಿದ್ದರು.



ಈ ರೀತಿ ನಟನಟಿಯರ ಹೆಸರಿನಲ್ಲಿ ನಕಲಿ ಐಡಿ ಓಪನ್ ಮಾಡುವ ಹುಚ್ಚು ಈಗ ಯಾವ ಮಟ್ಟ ತಲುಪಿದೆಯೆಂದರೆ, ಗೋಲ್ಡನ್ ಸ್ಟಾರ್ ಗಣೇಶ, ಗ್ಲಾಮರ್ ಬೆಡಗಿ ಪೂಜಾ ಗಾಂಧಿ, ರಮ್ಯಾ, ದರ್ಶನ್ ಸೇರಿದಂತೆ ಕನ್ನಡದ ಬಹುತೇಕ ಹಾಲಿ ಸ್ಟಾರ್‌ಗಳ ನಕಲಿ ಐಡಿಗಳು ಇಂಟರ್‌ನೆಟ್‌ನಲ್ಲಿ ಸ್ಥಾಪಿತಗೊಂಡು, ಅಮಾಯಕ ಅಭಿಮಾನಿಗಳನ್ನು ಸಲೀಸಾಗಿ ವಂಚಿಸುತ್ತಿವೆ. ಹಾಗೆಂದು ಎಲ್ಲ ನಟನಟಿಯರ ಐಡಿಗಳೂ ಬೋಗಸ್ ಏನಲ್ಲ. ತಮ್ಮ ಆರಾಧ್ಯ ನಟ/ನಟಿಯರೊಂದಿಗೆ ಹರಟಬೇಕು ಎಂದು ಬಯಸಿ ಬಕರಾಗಳಾಗುವ ಮುನ್ನ ಅಭಿಮಾನಿಗಳು ಅದಕ್ಕೆ ಮೊದಲು ಆ ವೆಬ್‌ಸೈಟ್ ಅಸಲೋ, ನಕಲೋ ಅನ್ನೋದನ್ನು ತಿಳಿಯುವುದು ಉತ್ತಮ...

ಮದುವೆಯ ಧ್ಯಾನ!



ಅತ್ತ ಬಾಲಿವುಡ್, ಇತ್ತ ಸ್ಯಾಂಡಲ್‌ವುಡ್ ಎರಡೂ ಕಡೆ ನಟಿಸುತ್ತಾ, ಹೀರೋ ಆಗಿ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಲೇ ಬಂದಿರುವ ಚಾಕಲೇಟ್ ಹೀರೋ ಧ್ಯಾನ್ ಈಗ ಮದುವೆಯಾಗುವ ಮನಸ್ಸು ಮಾಡಿದ್ದಾನೆ. ತನ್ನ ಬಾಲ್ಯ ಸ್ನೇಹಿತೆ ಋತಿಕಾ ಜೋಲಿಯನ್ನೇ ಲವ್ ಮಾಡಿರುವ ಧ್ಯಾನ್ ಡಿಸೆಂಬರ್ 18ರಂದು ಬಾಂಬೆಯ ಸ್ಟಾರ್ ಹೋಟೇಲೊಂದರಲ್ಲಿ ಉಂಗುರ ಬದಲಾಯಿಸಿಕೊಳ್ಳಲಿದ್ದಾನೆ. ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಋತಿಕಾ ಸದ್ಯ ಬೆಂಗಳೂರಲ್ಲೇ ನೆಲೆಸಿದ್ದಾಳೆ.

ನಾಗತಿಹಳ್ಳಿ ಚಂದ್ರಶೇಖರ್ ಅವರ 'ನನ್ನ ಪ್ರೀತಿಯ ಹುಡುಗಿ' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟ ಧ್ಯಾನ್, ಆನಂತರ 'ಮೊನಾಲಿಸಾ', 'ಅಮೃತಧಾರೆ', 'ಜೂಟಾಟ', 'ಸಜನಿ', 'ನೀನೇ ನೀನೇ' ಮತ್ತು ಈಗಷ್ಟೇ ಬಿಡುಗಡೆಯಾದ 'ಹುಡುಗ ಹುಡುಗಿ' ಸಿನಿಮಾಗಳಲ್ಲಿ ಮಿಂಚಿದ್ದ. ಹಿಂದಿಯಲ್ಲಿ ಏಳೆಂಟು ಚಿತ್ರಗಳಲ್ಲಿ ನಟಿಸಿದರೂ ಅಲ್ಲಿ ದೊಡ್ಡ ಮಟ್ಟದ ಯಶಸ್ಸನ್ನು ಧ್ಯಾನ್ ಕಾಣಲಿಲ್ಲ. ಇದ್ದುದರಲ್ಲಿ ಕನ್ನಡವೇ ಈ ಹುಡುಗನ ಕೈ ಹಿಡಿದಿರುವುದು.

ಮನಸಾರೆ ಮೋಜು ಗೋಜು



'ಮನಸಾರೆ' ಚಿತ್ರದಲ್ಲಿ ನಟಿಸಿದ ದಿಗಂತ್ ಮತ್ತು ಅಂದ್ರಿತಾ ರೆ ನಡುವೆ ಈಗ 'ಏನೋ ಒಂಥರಾ' ಆಗಿಬಿಟ್ಟಿದೆಯಂತೆ.


ಇಷ್ಟು ದಿನ ಕದ್ದು ಮುಚ್ಚಿ ಪಾರ್ಟಿ ಅಟೆಂಡ್ ಮಾಡುತ್ತಿದ್ದ ಈ ಜೋಡಿ ಈಗ ರಾಜಾರೋಷವಾಗಿ ಓಡಾಡಲು ಶುರುಮಾಡಿದೆ. ಇಬ್ಬರೂ ಪಾರ್ಟಿಗಳಲ್ಲಿ, ಸಿನಿಮಾ ಪ್ರದರ್ಶನಗಳಲ್ಲಿ ಮತ್ತು ಖಾಸಗಿ ಕಾರ್ಯಕ್ರಮ ಕಾಣಿಸಿಕೊಳ್ಳುತ್ತಿರುವುದು ಮಾಮೂಲಿಯಾಗಿಬಿಟ್ಟಿದೆ. ಇಷ್ಟೇ ಆಗಿದ್ದರೆ ಅಂಥದ್ದೇನೂ ಸುದ್ದಿಯಾಗುತ್ತಿರಲಿಲ್ಲ. ಇತ್ತ ದಿಗಂತ್ ಮತ್ತು ಅಂದ್ರಿತಾ ಗೋವಾಗೆ ಪ್ರವಾಸ ಹೋಗಿಬಂದಿದ್ದಾರಂತೆ. ಆದರೆ ಅವರ ಜತೆಗೆ ಬೇರೆ ಯಾರೂ ಇ ಎನ್ನುವುದೇ ವಿಶೇಷ!

ಮೂರ್‍ನಾಲ್ಕು ತಿಂಗಳ ಹಿಂದೆ ದಾವಣಗೆರೆಯಲ್ಲಿ ನಡೆದಿದ್ದ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಇವರಿಬ್ಬರ ನಡುವೆ ಶುರುವಾಗಿತ್ತು. ಇಬ್ಬರೂ ಒಬ್ಬರನ್ನೊಬ್ಬರು ಬಿಡದಂತೆ ಅಂಟಿಕೊಂಡು ತಿರುಗಾಡಿದ್ದರು. ಇವೆಲ್ಲವನ್ನು ಗಮನಿಸಿದ ಗಾಂಧಿನ ಮಂದಿ ಅವರಿಬ್ಬರ ನಡುವೆ ಸ್ನೇಹವನ್ನೂ ಮೀರಿದ ಸಂಬಂಧವೊಂದು ಚಿಗುರೊ ಎಂದು ಗುಲ್ಲೆಬ್ಬಿಸಿದ್ದಾರೆ.

ಇವೆಲ್ಲದಕ್ಕೂ ಒತ್ತುಕೊಡುವಂತೆ ಸ್ವತಃ ಅಂದ್ರಿತಾ 'ನಮ್ಮ ನಡುವೆ ಏನೋ ನಡಿ ನನಗೂ ಇದುವರೆಗೆ ಅದು ಏನೆಂದು ಅರಿವಿಗೆ ಬರುತ್ತಿಲ್ಲ' ಎಂದು ಪತ್ರಕರ್ತರ ಮುಂದ ಒಪ್ಪಿಕೊಂಡಿದ್ದಾಳೆ. 'ದಿಗಂತ್ ಕ್ಲೋಸ್ ಫ್ರೆಂಡ್ ಅಷ್ಟೇ. ಆದರೆ ಆತ ಈಗಲೇ ಬಾಯ್‌ಫ್ರೆಂಡ್ ಆಗಿದ್ದಾನೆ ಎಂದು ನಾನು ಹೇಳಲಾರೆ. ನಾವು ಹಲವು ಪಾರ್ಟಿಗಳಲ್ಲಿ, ಪ್ರದರ್ಶನಗಳಲ್ಲಿ ಜತೆಯಾಗಿ ಕಾಣಿಸಿಕೊಂಡ ಕೂಡಲೇ ನಾವು ಲವರ್ಸ್ ಎಂದೇನಲ್ಲ. ಹಾಗೇನಾ ಲವ್ ಮಾಡೋದಿದ್ದರೆ ಅಭಿಮಾನಿಗಳಿಗೆ ಮೊದಲೇ ಹೇಳುತ್ತೇನೆ' ಎಂದು ಅಂದ್ರಿತಾ ಬೋ ಆಗಿ ಹೇಳಿಕೊಂಡಿದ್ದಾಳೆ.

ಮುಂದೊಂದು ದಿನ 'ದಿಗಂತ್ ನನ್ನ ಕೈ ಹಿಡಿದು ಎಳೆದ' ಎಂದು ಮೇಘ್ನ ಮೇಲೆ ಆರೋಪ ಮಾಡಿದಂತೆ, ಚಾನೆಲ್ಲುಗಳ ಮುಂದೆ ಕೂತು ದೂದ್‌ಪೇಡ ದಿಗಂತನಿಗೆ ಈ ಸು ಛೀಮಾರಿ ಹಾಕದಿದ್ದರೆ ಅದೇ ಅವನ ಪುಣ್ಯ..

ಪೂಜಾ ಪವರ್ರು!



ಬೈಕುಗಳು ಮತ್ತು ಮೊಬೈಲ್ ಫೋನುಗಳನ್ನು ಕದಿಯುತ್ತಿದ್ದ ಮಹಿಳೆಯರ ಕತ್ತಿನಿಂದ ಚಿನ್ನದ ಸರಗಳನ್ನು ಎಗರಿಸುತ್ತಿದ್ದ ಕಳ್ಳನೊಬ್ಬ ಸದ್ಯ ಬೆಂಗಳೂರು ಜೈಲಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾನೆ. ಇನ್ನೂ ಇಪ್ಪತ್ತರ ಆಜುಬಾಜಿನಲ್ಲಿರುವ ಈ ಹುಡುಗ ಈಗ ಸಂಪೂರ್ಣ ಬದಲಾಗಿ ಉತ್ತಮ ಪ್ರಜೆಯಾಗುವ ಭರವಸೆ ನೀಡಿದ್ದಾನಂತೆ. ಈತನನ್ನು ಏಕ್‌ದಂ ಸಾಚಾ ಮಾಡಲು ಹೊರಟಿರುವುದು ಪೂಜಾ ಗಾಂಧಿ!

'ಡಿಸೆಂಬರ್ ತಿಂಗಳನ್ನು ಅಪರಾಧ ತಡೆ ಮಾಸ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ಬೆಂಗಳೂರು ಪೊಲೀಸರ ಆಹ್ವಾನದ ಮೇರೆಗೆ ಪೂಜಾ ಗಾಂಧಿ ಗಾಂಧಿ ಇತ್ತೀಚೆಗೆ ಸೆಂಟ್ರಲ್ ಜೈಲ್‌ಗೆ ಭೇಟಿ ನೀಡಿದ್ದರು. ಅಪರಾಧಿಗಳಲ್ಲಿ ಜನ ಜಾಗೃತಿ ಮೂಡಿಸಲು ಪಣ ತೊಟ್ಟಿರುವ ಪೊಲೀಸರು ಸೆಲೆಬ್ರಿಟಿಗಳನ್ನು ಜೈಲಿಗೆ ಕರೆಸಿಕೊಂ ಕೈದಿಗಳ ಮಾನಸಿಕ ಬದಲಾವಣೆ ಮಾಡುವ ಸಾಹಸಕ್ಕೆ ಕೈಹಾಕಿದ್ದಾರೆ.

ಹೀಗೆ ಜೈಲಿಗೆ ಭೇಟಿ ನೀಡಿದಾಗ ಪೂಜಾ ಗಾಂಧಿಗೆ ತನ್ನ ಕಟ್ಟಾ ಅಭಿಮಾನಿಯೊಬ್ಬ ಕಳ್ಳತನ ಮ ಸಿಕ್ಕುಬಿದ್ದು ಜೈಲು ಸೇರಿರುವ ವಿಷಯ ಗೊತ್ತಾಯಿತಂತೆ. ತಕ್ಷಣ ಆತನ ಬಳಿ ಹೋಗಿ "ಇನ್ನು ಮು ಕ್ರಿಮಿನಲ್ ಕೃತ್ಯಗಳಲ್ಲಿ ನೀನು ತೊಡಗಿಸಿಕೊಳ್ಳಬಾರದು. ಜನಸಾಮಾನ್ಯರಂತೆ ಕಷ್ಟಪಟ್ಟು ದುಡಿದು ಸಂಪಾದಿ ಅಡ್ಡದಾರಿಯ ವೃತ್ತಿ ನಿನಗೆ ಬೇಡ. ಸಮಾಜಕ್ಕೆ ಮಾದರಿಯಾಗು. ದಿನ ಸಂಬಳಕ್ಕೆ ದುಡಿಯುವ ಕಾರ್ಮಿಕನಾದ ಪರವಾಗಿಲ್ಲ ಆದರೆ ಕಳ್ಳತನ ಬೇಡ" ಎಂದು ಕಿವಿಮಾತು ಹೇಳಿದರಂತೆ.

ತನ್ನ ಆರಾಧ್ಯ ದೇವತೆ ಪೂಜಾ ಗಾಂಧಿಯ ಬುದ್ಧಿವಾದಕ್ಕೆ ತಲೆ ಬಗ್ಗಿಸಿದ ಮಂಜ ಕಣ್ಣೀರಿಡು "ಇನ್ಯಾವತ್ತೂ ಕಳ್ಳತನ ಮಾಡಲ್ಲ" ಎಂದು ಪೂಜಕ್ಕನ ತಲೆ ಮೇಲೆ ಆಣೆ ಮಾಡಿ ಹೇಳಿದನಂತೆ!

ಪೂಜಾ ಪವರ್ರು ಅಂದ್ರೆ ಇದೇನಾ?!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial ...